SAPTHAGIRI(KANNADA)
SPIRITUAL ILLUSTRATED MONTHLY
Volume:02, Issue:3, Pages:56
October - 2022, Price Rs.20/-

ತಿರುಮಲ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

ಅಕ್ಟೋಬರ್ 2022
ಬೆಲೆ ರೂ. 20/-




01-10-2022
ಶನಿವಾರ, ರಾತ್ರಿ: ಗರುಡವಾಹನ

**ಶ್ರೀವೆಂಕಟೇಶ್ವರ ಸ್ವಾಮಿಯವರು ನೆಲಸಿರುವ ಆಲಯದಲ್ಲಿ ಸ್ವಾಮಿಯವರಿಗೆ ನಿರ್ವಹಿಸುವ ಎಲ್ಲ ಸೇವೆಗಳನ್ನು ನಮೂನಾ ಆಲಯದಲ್ಲಿ 2022, ಆಗಸ್ಟ್ 16 ರಿಂದ 20 ರ ವರೆಗೆ ಭಕ್ತರೆಲ್ಲರೂ ವೀಕ್ಷಿಸುವ ಸಲುವಾಗಿ ಎಸ್.ಪಿ.ಎಸ್.ಆರ್. ನೆಲ್ಲೂರು ಜಿಲ್ಲೆ , ಎಸ್.ಪಿ. ಸುಬ್ಬಾರೆಡ್ಡಿ ಸ್ಟೇಡಿಯಂನಲ್ಲಿ ನಿರ್ವಹಿಸಿದ ಶ್ರೀ ವೇಂಕಟೇಶ್ವರ ಸ್ವಾಮಿಯವರ ವೈಭವೋತ್ಸವದ ದೃಶ್ಯಗಳು. ಈ ಕಾರ್ಯಕ್ರಮದಲ್ಲಿ ರಾಜ್ಯಸಭಾ ಸದ್ಯಸರು ಶ್ರೀ ವೇಮಿರೆಡ್ಡಿ ಪ್ರಭಾಕರ್ ರೆಡ್ಡಿ , ನ್ಯೂಡಿಲ್ಲಿ ಸ್ಥಾನಿಕ ಸಲಹಾಮಂಡಳಿ ಅಧ್ಯಕ್ಷರು ಶ್ರೀಮತಿ. ವೇಮಿರೆಡ್ಡಿ ಪ್ರಶಾಂತಿ ರೆಡ್ಡಿ , ತಿ.ತಿ.ದೇ., ಆಡಳಿತ ಮಂಡಳಿ ಅಧ್ಯಕ್ಷರು ಶ್ರೀ ವೈ.ವಿ. ಸುಬ್ಬಾರೆಡ್ಡಿ ದಂಪತಿಗಳು, ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀ ವಿ.ವೀರಬ್ರಹ್ಮ ಐ.ಎ.ಎಸ್., ಇನ್ನಿತರರು ಪಾಲ್ಗೊಂಡರು.**




















# ಭಗವದ್ಗೀತೆ

ದೋಷೈರೇತೈಃ ಕುಲಘ್ನಾನಾಂ ವರ್ಣಸಂಕರಕಾರಕೈಃ।
ಉತ್ಸಾದ್ಯಂತೇ ಜಾತಿಧರ್ಮಾಃ ಕುಲಧರ್ಮಾಶ್ಚ ಶಾಶ್ವತಾಃ॥

(ಶ್ರೀಮದ್ಭಗವದ್ಗೀತೆ ಅಧ್ಯಾಯ - 1, ಶ್ಲೋಕ - 42)

ಸಮಾಜದ ವ್ಯವಸ್ಥೆಯನ್ನು ಕೆಡಿಸುವ ಇಂಥ ಈ ಕುಲನಾಶಕರ ದೋಷಗಳಿಂದಾಗಿ ನಿರಂತರವಾಗಿ ನಡೆದು ಬಂದ ಜಾತಿ ಧರ್ಮಗಳೂ ಕುಲಧರ್ಮಗಳೂ ನಿರ್ಮೂಲವಾಗುತ್ತದೆ.




ಮರೆಯದಿರು ಮನವೆ ಮಾಧವನ ನಮ್ಮ
ದುರಿತ ದಾರಿದ್ರ್ಯವನು ಹರಿಸಿ ಪೊರೆವವನ

ಅಳರಿತು ಊಳಿಗವ ಕೊಂಡು ದಣಿವಂತೆ
ಮೇಲಾಗಿ ಜೀವ ಕೊಡುವ ದೇವನ
ಕಾಲಕಾಲಕೆ ಮಾಳ್ಪ ನಡೆತಪ್ಪು ನುಡಿತಪ್ಪು
ಆಲೋಚಿಸದೆ ಕರುಣಿಸುವ ಕರುಣಿಯಾ


ಮೂಢನಾಗಲಿ ಮತಿಯುಳ್ಳನಾಗಲಿ
ಪಾಡಿದಾಕ್ಷಣ ಭೃತ್ಯನೆಂದೊಲಿದು
ಕೂಡಿಕೊಳ್ಳುವ ದೊರೆಗಳಲ್ಲಿ ಹರಿಯಲ್ಲದೆ
ನಾಡಾಡಿ ಬಡಗುಗಳ ಬೇಡುವರ

ಮಾನ್ಯಾರು ಅನ್ಯದೇವರ ಭಜಿಸಿ ಭವಗೆದ್ದ
ರಿನ್ನಾರು ಹರಿಯೊಲುಮೆಯಲಿ ದಣಿಯುವರು
ನಿನ್ನ ಗುರುಗಳಿಂದರಿತು ನೆರೆನಂಬಿದರೆ ಪ್ರ
ಸನ್ನ ವೆಂಕಟಪತಿಯೆ ಪದವನು ಈವ

- ಶ್ರೀ ಪ್ರಸನ್ನವೆಂಕಟದಾಸರು



# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

ಸ್ವಯಮುದಯಿನಃ ಸಿದ್ಧಾ ದ್ಯಾವಿಷ್ಕೃತಾಶ್ಚ ಶುಭಾಲಯಾಃ ವಿವಿಧವಿಭವವ್ಯೂಹಾವಾಸಾಃ ವರಂ ಚ ಪದಂ ವಿಭೋಃ।
ವೃಷಗಿರಿಮುಖೇಷ್ವೇತೇಷ್ವಿಚ್ಛಾವಧಿ ಪ್ರತಿಲಬ್ಧಯೇ ದೃಢವಿನಿಹಿತಾ ನಿಶ್ರೇಣಿ ಸ್ತ್ವಂದಯೇ ನಿಜಪರ್ವಭಿಃ॥೭೩॥

ಹಿಂದಿನ ಎರಡು ಪದ್ಯಗಳಲ್ಲಿ ದಯೆಯ ಸ್ವರೂಪ (ಸರ್ವಲೋಕಹಿತೈಷಿತ್ವ)ವನ್ನು ಪ್ರಕಾಶಪಡಿಸಿ, ಈ ಪದ್ಯದಲ್ಲಿ ಸರ್ವಫಲಪ್ರದತ್ವವೆಂಬ ಗುಣವನ್ನು ದೃಷ್ಟಾಂತದಿಂದ ಪ್ರಕಾಶಪಡಿಸುತ್ತಾರೆ.

ಆಚಾರ್ಯರು ಈ ಪದ್ಯದಲ್ಲಿ ದಯೆಯನ್ನು ಒಂದು ಏಣಿಯನ್ನಾಗಿ ಚಿತ್ರಿಸಿರುತ್ತಾರೆ. ಏಣಿಯು ಕೆಳಗಿರುವವರನ್ನು ಮೇಲಕ್ಕೂ ಮೇಲಿರುವವರನ್ನು ಕೆಳಕ್ಕೂ ಒಯ್ಯುತ್ತದೆ. ಹೀಗೆ ಮಾಡಲು ಏಣಿಯು ದೃಢವಾದ ಅನೇಕ ಮೆಟ್ಟಲುಗಳಿಂದ ಕೂಡಿರಬೇಕು. ದಯೆಯ ರೀತಿಯೂ ಹೀಗೆಯೇ. ಪರಮ ಪುರುಷನಿಗೆ ಅನೇಕ ವಾಸಸ್ಥಾನಗಳುಂಟು. ಸ್ವಯಂವ್ಯಕ್ತವೆಂದು ಕೆಲವು ದಿವ್ಯದೇಶಗಳು. ಇಂತಹ ಸ್ಥಾನಗಳಲ್ಲಿ ಭಗವಂತನು ಆಶ್ರಿತಸಂರಕ್ಷಣೆಗಾಗಿ ತಾನಾಗಿಯೇ ಆವಿರ್ಭವಿಸುವನು. ಹಾಗೆಯೇ ಕ್ಷೀರಾಬ್ಧಿನಾಥ, ಕೇಶವಾದಿವ್ಯೂಹಗಳು ಇವುಗಳ ಸ್ಥಾನವೂ ಹಲವು. ರಾಮಕೃಷ್ಣಾದಿ ವಿಭವಾವತಾರಗಳ ಸ್ಥಾನಗಳೂ ಕೆಲವುಂಟು.ಇವುಗಳೆಲ್ಲಕ್ಕಿಂತಲೂ ಶ್ರೇಷ್ಠವಾದ ಪರಮಪದವೆಂಬ ಪರವಾಸುದೇವನ ವಾಸಸ್ಥಾನವೂ ಉಂಟು ಇವುಗಳಲ್ಲಿ ವೇಂಕಟಾಚಲವು ಸ್ವಯಂ ವ್ಯಕ್ತವಾದವುಗಳಲ್ಲಿ ಸೇರಿದುದು. ಇಂತಹ ದಿವ್ಯ ದೇಶಗಳಲ್ಲಿ ಆವಿರ್ಭವಿಸಿರುವ ದಿವ್ಯ ಮಂಗಳ ವಿಗ್ರಹಗಳನ್ನು ಸೇವಿಸಿ ಜನರು ತಮ್ಮ ತಮ್ಮ ಇಷ್ಟಾರ್ಥಗಳನ್ನು ಈಡೇರಿಸಿಕೊಳ್ಳುತ್ತಾರೆ. ಇಂದ್ರನೇ ಮೊದಲಾದ ದೇವತೆಗಳನ್ನು ಆರಾಧಿಸಿ ಫಲವನ್ನು ಪಡೆಯುವುದೂ ಕೂಡ ಭಗವಂತನ ದಯೆಯಿಂದಲೇ ಎಂಬುದು ಶಾಸ್ತ್ರಗಳಲ್ಲಿ ಸ್ಪಷ್ಟವಾಗಿದೆ. ಹೀಗೆ ಭೂಲೋಕದಿಂದ ಹಿಡಿದು ಪರಮಪದದವರೆಗೆ ಪರಮಪುರುಷನನ್ನು ಅಲ್ಲಲ್ಲಿಯೇ ನಿಲ್ಲುವಂತೆ ಮಾಡಿ ಆಯಾಯ ಜನಗಳು ಅವರವರ ಇಷ್ಟಾರ್ಥಗಳನ್ನು ಪೂರ್ತಿಮಾಡಿಕೊಳ್ಳುವಂತೆ ಮಾಡುವವಳು ದಯಾದೇವಿಯೇ ಹೀಗೆ ಪರಮಪದದಲ್ಲಿರುವ ಪರಮಪುರುಷನನ್ನು ಸೇವಿಸಲು ಜನರಿಗೆ ಅನುಕೂಲವಾಗುವಂತೆ ಪರಮ ಪದದಿಂದ ಅರ್ಚಾರೂಪ ಪರ್ಯಂತವಾಗಿ ಅವನನ್ನು ಕೆಳಕ್ಕೆ ಇಳಿಸಿಕೊಂಡು ಬರುವವಳೂ, ಭೂಲೋಕದಿಂದ ಹಿಡಿದು ಆಯಾಯ ಜನಗಳನ್ನು ಅವರವರ ಅಭೀಷ್ಟದಂತೆ ಪರಮ ಪದದವರೆಗೆ ಕ್ರಮ ಕ್ರಮವಾಗಿ ಮೇಲೇರಿಸಿಕೊಂಡು ಹೋಗುವವಳೂ ದಯೆಯೇ ಎಂಬುದು ಸ್ಪಷ್ಟವಾಯಿತು. ಆದ್ದರಿಂದ ದಯೆಯನ್ನು ಏಣಿಯನ್ನಾಗಿ ಚಿತ್ರಿಸಿರುವುದು ಸಮಂಜಸವೇ ಆಗಿದೆ. ಈ ಏಣಿಯ ಮೆಟ್ಟಲುಗಳಾದರೋ ಪರಮ ಪುರುಷನ ಪರವ್ಯೂಹಾದಿರೂಪಗಳೂ, ಮುಂದಿನ ಪದ್ಯಗಳಲ್ಲಿ ವರ್ಣಿಸಲ್ಪಡುವ ಯಾದೃಚ್ಛಿಕಾದಿಸುಕೃತ ವಿಶೇಷಗಳೇ ಮೊದಲಾದ ಅನುಕೂಲ ಪರಂಪರೆಗಳೇ ಆಗಿರುತ್ತದೆ.

'ಇಚ್ಛಾವಧಿಪ್ರತಿಲಬ್ಧಯೇ' ಎಂಬಲ್ಲಿ ಜೀವರುಗಳ ಇಷ್ಟವು ಹೇಗೋ ಹಾಗೆಯೇ ಪರಮಾತ್ಮನ ಇಷ್ಟವೂ ವಿವಕ್ಷಿತವಾದುದು. ಮೇಲಿನಿಂದ ಇಳಿದು ಬಂದು ಅನುಗ್ರಹಿಸಿದರೇನೇ ಅವನಿಗೂ ತನ್ನ ಇಷ್ಟವೂ ಪೂರ್ತಿಯಾಗುವುದು. ಆದುದರಿಂದ ಪರಮಾತ್ಮನಿಗೆ ಇಳಿಯಲೂ ಜೀವರುಗಳಿಗೆ ಮೇಲೇರಲೂ ಸೌಕರ್ಯವನ್ನುಂಟು ಮಾಡುವ ಏಣಿಯಾಗಿರುವವಳು ದಯಾದೇವಿ.

'ಪರಂ ಚ ಪದಂ' - ಎಂಬಲ್ಲಿರುವ 'ಚ' ಕಾರದಿಂದ ಹಾರ್ದಾವತಾರ (ಹೃದಯವಾಸಿ)ವನ್ನೂ ಹೇಳಬಹುದೆಂದು ಹಿರಿಯರ ಅಭಿಪ್ರಾಯ. ಭಗವಂತನ ಸರ್ವವಿಧವಾದ ಅವತಾರಗಳೂ ಅವನ ದಯೆಯಿಂದಲೇ ಏರ್ಪಟ್ಟಿರುತ್ತವೆ. ಜನರು ಆಯಾಯ ಅವತಾರಗಳನ್ನು ಉಪಾಸನೆ ಮಾಡಿ ಫಲಗಳನ್ನು ಪಡೆಯುವುದೂ ದಯೆಯಿಂದಲೇ ಎಂಬುದೇ ಇಲ್ಲಿನ ಮುಖ್ಯವಾದ ಅಭಿಪ್ರಾಯ.



ವೆಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ


**ಗೌರವ ಸಂಪಾದಕರು**
ಎ.ವಿ. ಧರ್ಮಾರೆಡ್ಡಿ , ಐ.ಡಿ.ಇ.ಎಸ್.
ಕಾರ್ಯನಿರ್ವಹಣಾಧಿಕಾರಿ,.(ಎಫ್.ಎ.ಸಿ.)
ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಡಾ॥ಕೆ.ರಾಧಾರಮಣ, ಎಮ್.ಎ.ಎಮ್.ಫಿಲ್.ಪಿಎಚ್.ಡಿ.

**ಸಂಪಾದಕರು**
ಡಾ॥ ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ .ಪಿ. ರಾಮರಾಜು , ಎಮ್.ಎ.
ವಿಶೇಷಾಧಿಕಾರಿ,
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಗ್ರಹಣ:**
ಶ್ರೀ ಪಿ.ಎನ್.ಶೇಖರ್,
ಸಹಾಯ ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.



ಲೇಖನ / ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ - 517 507

ಇತರ ವಿವರಗಳಿಗೆ
ಕಾರ್ಯಾಲಯ : 0877 - 2264543
: 0877 - 2264359
ಸಂಪಾದಕರು : 0877 - 2264360



ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸ ಪತ್ರಿಕೆ

ಶ್ರೀ ಶುಭಕೃತ್ ನಾಮ ಸಂವತ್ಸರ ಆಶ್ವಯುಜ - ಕಾರ್ತಿಕ ಮಾಸ ಸಂಚಿಕೆ

ಸಂಪುಟ : 02 ಅಕ್ಟೋಬರ್ - 2022 ಸಂಚಿಕೆ : 03


## ವಿಷಯಸೂಚಿಕೆ


| | | |
|---|---|---|
| ಸಂಪಾದಕೀಯ | | 6 |
| ಲಕ್ಷ್ಮೀ ದೇವಿಯ ಗುಣಗಳು | - ಡಾ॥ ಎ. ಕುಮುದ | 7 |
| ಶಮೀ ವೃಕ್ಷ (ಬನ್ನಿ ಮರ) | - ಹನುಮಂತ. ಮ. ದೇಶಕುಲಕರ್ಣಿ | 9 |
| ತುಲಾ ಸಂಕ್ರಮಣ ಹಾಗೂ ಬ್ರಹ್ಮಗಿರಿಯ ತಲಕಾವೇರಿ ಕ್ಷೇತ್ರ | - ಶ್ರೀಮತಿ. ಬಿ. ಎಸ್. ಪಾರಿಜಾತ | 12 |
| ಬಾಣಂ ದೇವಸ್ಥಾನ | - ಶ್ರೀಮತಿ. ಮಾಲಾಪ್ರಸಾದ್ | 16 |
| ವೇದ ಪಾರಂಗತನಾದ ವಸುಧೇಂದ್ರ ತೀರ್ಥರು | - ಶ್ರೀಧರ ರಾಯಸಂ | 18 |
| ಮೂಕನಹಳ್ಳಿ ಪಟ್ಟಣದ ಶ್ರೀ ಲಕ್ಷ್ಮೀನರಸಿಂಹ ದೇವಾಲಯ | - ಕೆಂಗೇರಿ ಚಕ್ರಪಾಣಿ | 20 |
| ಶ್ರೀನಿವಾಸನ ಚರಣ ಕಮಲವ ನೆನೆವ ಆತ್ಮನಿವೇದನೆ ಕೀರ್ತನೆಯ ಒಳನೋಟ | - ಡಾ॥ ಸುಭಾಸ ಕಾಖಂಡಕಿ | 22 |
| ಶ್ರೀವೆಂಕಟೇಶ್ವರ ಆಲಯ | - ದಿ॥ ಬಿ.ಎನ್.ಶ್ರೀನಿವಾಸನ್ | 24 |
| ನಂಬಿಕೆ, ಕಲ್ಪನೆ, ಸಂಸ್ಕೃತಿಗಳ ಸಂಗಮ - ದೀಪಾವಳಿ | - ಎ.ಆರ್. ರಘುರಾಮ | 31 |
| ಹರಿಕಥಾಮೃತಸಾರ ಮಹಿಮೆ ಬಲು ಅಪಾರ | - ಶ್ರೀಮತಿ. ಪ್ರಿಯಾ ಪ್ರಾಣೇಶ ಹರಿದಾಸ | 34 |
| ರಾಶಿ ಫಲಗಳು | - ಬ್ರಹ್ಮಶ್ರೀ ಟಿ.ವಿ.ಕೆ. ಪೂರ್ಣ ಪ್ರಸಾದ್ ಸಿದ್ಧಾಂತಿ | 37 |
| ಆಳ್ವಾರುಗಳು ಕಂಡ ತಿರುವೇಂಗಡ | - ಎಂ.ಆರ್.ನರಸಿಂಹನ್ | 38 |
| ತಿರುಮಲೆ ಕಾಲಮಾನಾಚರಣೆಗಳು | - ಶ್ರೀಮತಿ | 40 |
| 108 ವೈಷ್ಣವ ದಿವ್ಯಕ್ಷೇತ್ರಗಳು - ತಿರುಪ್ಪೇರ್ ನಗರ್ | - ಸೂರ್ಯವಂಶಿ | 43 |
| ಸಂಸ್ಕೃತ ಕಲಿಯೋಣ | - ಮಹಾಮಹೋಪಾಧ್ಯಾಯ ಸಮುದ್ರಾಲ ಲಕ್ಷ್ಮಣಯ್ಯ | 46 |
| ಧನ್ವಂತರೀತ್ರಯೋದಶಿ | - ಪ್ರತ್ಯಗ್ರ | 47 |
| ನೀತಿ ಕಥೆ - ಮಾಡುವ ಕೆಲಸವನ್ನು ತಕ್ಷಣ ಮಾಡಬೇಕು | - ಡಾ॥ ಪ್ರದೀಪ್ ಕುಮಾರ್ ಹೆಬ್ರಿ | 48 |
| ರಸಪ್ರಶ್ನೆಗಳು | - | 50 |
| ಚಿತ್ರಕಥೆ - ಬಂದವನು ಫಲ್ಗುಣನೇ! | - ಟಿ. ಶಿವಾಜಿ | 52 |


ಮುಖಚಿತ್ರ - ಗರುಡವಾಹನದಲ್ಲಿ ಮಲೆಯಪ್ಪಸ್ವಾಮಿ, ತಿರುಮಲೆ
ಹಿಂಬದಿಚಿತ್ರ - ಚಕ್ರಸ್ನಾನ, ತಿರುಮಲೆ


24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಲಹೆ/ದೂರುಗಳಿಗೆ ಟೋಲ್ ಫ್ರೀ ಸಂಖ್ಯೆ :
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri.helpdesk@tirumala.org


ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org
ಮೂಲಕ ಓದಬಹುದು.

| | |
|---|---|
| ಬಿಡಿ ಪ್ರತಿ | ರೂ. 20/- |
| ವಾರ್ಷಿಕ ಚಂದಾ | ರೂ. 240/- |
| ಆಜೀವ ಚಂದಾ (12 ವರ್ಷಗಳು) | ರೂ. 2400/- |
| ವಿದೇಶಿ ವಾರ್ಷಿಕ ಚಂದಾ | ರೂ. 1030/- |


ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

## ಸಂಪಾದಕೀಯ

# ದೀಪಾವಳಿ ಉತ್ಸವ

ದೀಪಾವಳಿ ಎಂದರೆ ದೀಪಗಳ ಸಾಲುಗಳೆಂದರ್ಥ ಆಶ್ವಯುಜ ಮಾಸದ ಕೃಷ್ಣ ಪಕ್ಷದ ಚತುರ್ದಶಿ ಅಮಾವಾಸ್ಯೆ ಮತ್ತು ಕಾರ್ತಿಕ ಶುದ್ಧ ಪಾಡ್ಯಮಿಗಳಲ್ಲಿ ದೀಪಾವಳಿಯನ್ನು ಆಚರಿಸುತ್ತೇವೆ.

ಅಂದು ಇನಕುಲೋದ್ಭವನಾದ ಶ್ರೀರಾಮನು ರಾವಣನನ್ನು ಸಂಹರಿಸಿ, ಸೀತೆ ಮತ್ತು ಲಕ್ಷ್ಮಣರೊಂದಿಗೆ ಅಯೋಧ್ಯೆಗೆ ಮರಳಿದನೆಂದೂ, ಆತನ ಗೆಲುವಿನ ಸಂಭ್ರಮವನ್ನು ಆಚರಿಸುವ ಸಂದರ್ಭವೇ ದೀಪಾವಳಿ ಎನ್ನುತ್ತಾರೆ. ಅಮಾವಾಸ್ಯೆಯ ಹಿಂದಿನ ದಿನ ಹೆಸರೇ ಸೂಚಿಸುವಂತೆ ನರಕ ಚತುದರ್ಶಿಯೆಂದು ಶ್ರೀ ಕೃಷ್ಣನು ಸತ್ಯಭಾಮೆಯೊಡಗೂಡಿ ನರಕಾಸುರನ ಸಂಹಾರಗೈದನೆಂದೂ ಕೆಡುಕಿನ ವಿರುದ್ಧ ಒಳಿತು ಗೆದ್ದ ಹರ್ಷವನ್ನು ಅಂದು ಆಚರಿಸುತ್ತೇವೆ.

ಬಲಿ -ವಾಮನರ ಕಥೆ ಹಾಗೂ ಬಲಿಚಕ್ರವರ್ತಿಯ ತ್ಯಾಗ, ಅಮಾವಾಸ್ಯೆಯ ಮರುದಿನ ಬಲಿಪಾಡ್ಯಮಿ ಯೊಂದಿಗೆ ಇನ್ನಿತರ ಪುರಾಣಗಳೆಲ್ಲಾ ನಮಗೆ ಅನೇಕ ವಿಷಯಗಳು ತಿಳಿದು ಬರುತ್ತಿವೆ.

ಹಿಂದೂ ಧರ್ಮದ ಪ್ರಕಾರ ಈ ದೀಪಾವಳಿಯನ್ನು ಪ್ರಪಂಚದಲ್ಲಿ ಎಲ್ಲೆಡೆ ಆಚರಿಸುವ ಸಂಪ್ರದಾಯವಿದೆ. ಈ ಹಬ್ಬದಲ್ಲಿ ಒಬ್ಬರಿಗೊಬ್ಬರು ಸಿಹಿ ಹಂಚುವುದು, ಹೊಸಬಟ್ಟೆ, ಪಟಾಕಿಗಳದೇ ಅಬ್ಬರವಿರುತ್ತದೆ. ಉತ್ತರ ಭಾರತದಲ್ಲಿ ದೀಪಾವಳಿಯನ್ನು ಹೊಸವರ್ಷವೆಂದು ಆಚರಿಸುತ್ತಾರೆ. ತಿರುಮಲೆಯಲ್ಲೂ ಅಂದು ವಿಶೇಷವಾಗಿ ದೀಪಾವಳಿ ಆಸ್ಥಾನವನ್ನು ನಡೆಸುತ್ತಾರೆ. ಮಂಗಳ ರೂಪಿಣಿಯಾಗಿರುವ ಮಹಾಲಕ್ಷ್ಮಿಯ ಪೂಜೆಯೂ ಇಂದು ಪ್ರಮುಖವಾದ ಸ್ಥಾನವನ್ನು ಪಡೆದಿದೆ. ಒಟ್ಟಿನಲ್ಲಿ ಹಿಂದೂ ಧರ್ಮದ ಪ್ರಕಾರ ದುಷ್ಟ ಶಕ್ತಿಯನ್ನು ದೈವೀಶಕ್ತಿಗಳು ಬಗ್ಗುಬಡಿದು, ಪ್ರಪಂಚದಲ್ಲೆಡೇ ಸಂಭ್ರಮ, ಸೌಹಾರ್ದತೆಯನ್ನು ಸಾರುತ್ತ ಹಬ್ಬಗಳನ್ನು ಆಚರಿಸುವುದು ಸಂಪ್ರದಾಯ.

ದೀಪಾವಳಿಯ ಪರ್ವ ದಿನವನ್ನು ತಿರುಮಲೆಯಲ್ಲಿ ಸಂಭ್ರಮದಿಂದ ಆಚರಿಸುತ್ತಾರೆ.ಅಂದು ಪ್ರಾತಃಕಾಲ ಯಥಾವಿಧಿಯಾಗಿ ಶುದ್ಧಿ, ತೋಮಾಲೆ ಸೇವೆ ನಡೆದ ನಂತರ ಶ್ರೀಮಲೆಯಪ್ಪಸ್ವಾಮಿ, ಶ್ರೀದೇವಿ, ಭೂದೇವಿ, ಸೇನಾಧಿಪತಿ ವಿಶ್ವಕ್ಸೇನರಿಗೆ ತಿರುಮಂಜನ ನಡೆಸುತ್ತಾರೆ. ದೀಪಾವಳಿ ಆಸ್ಥಾನದ ನಂತರ ಮೆರವಣಿಗೆ ಮಾಡುತ್ತಾರೆ. ದೀಪಾವಳಿಯಂದು ಹಸುವಿನ ಸಗಣಿಯಿಂದ ಮಾಡಿದ ಹಣತೆಗಳಲ್ಲಿ ದೀಪ ಹಚ್ಚುವ ಸಂಪ್ರದಾಯ ವಿದೆ. ನರಕ ಚತುರ್ದಶಿ ದೀಪಾವಳಿ ಅಮಾವಾಸ್ಯೆಯನ್ನು ಶ್ರೀನಿವಾಸನ ಸನ್ನಿಧಿಯಲ್ಲಿ ವೈಭವದಿಂದ ಆಚರಿಸುವ ಪ್ರತೀತಿ ಇದೆ.

ಈ ದುಷ್ಟಶಕ್ತಿಗಳನ್ನು ಮಣಿಸಿ ಎಲ್ಲೆಡೆ ಆರೋಗ್ಯಕರ ವಾತಾವರಣವನ್ನು ಉಂಟು ಮಾಡಿ ಸಪ್ತಗಿರೀಶನ ಆಶೀರ್ವಾದವನ್ನು ಪಡೆಯೋಣ.

**ಗೋವಿಂದ! ಗೋವಿಂದ!! ಗೋವಿಂದ!!**



# ಲಕ್ಷ್ಮೀ ದೇವಿಯ ಗುಣಗಳು

– ಡಾ॥ ಎ. ಕುಮುದ
97319 03752

ಲಕ್ಷ್ಮೀಂ ಸಮುದ್ರರಾಜತನಯಾಂ ಶ್ರೀರಂಗಧಾಮೇಶ್ವರೀಂ
ದಾಸೀಭೂತಸಮಸ್ತ ದೇವವನಿತಾಂ ಲೋಕೈಕ ದೀಪಾಂಕುರಾಮ್
ಶ್ರೀಮನ್ಮಂದಕಟಾಕ್ಷಲಬ್ಧ ವಿಭವಬ್ರಹ್ಮೇಂದ್ರ ಗಂಗಾಧರಾಂ
ತ್ವಾಂ ತ್ರೈಲೋಕ್ಯಕುಟುಂಬಿನೀಂ ಸರಸಿಜಾಂ ವಂದೇ ಮುಕುಂದಪ್ರಿಯಾಮ್ ॥

ಸಮುದ್ರರಾಜನ ಮಗಳೂ, ಶ್ರೀರಂಗರಾಜನ ಒಡತಿಯೂ, ಆದ ಲಕ್ಷ್ಮೀದೇವಿಯು ದೇವತಾ ಸ್ತ್ರೀಯರೆಲ್ಲರಿಂದ ಸೇವೆಗೊಳ್ಳುವವಳೂ, ಇಡೀ ಲೋಕಕ್ಕೆ ಬೆಳಕಾದವಳೂ, ತನ್ನ ಕಡೆಗಣ್ಣಿಂದಲೇ ಬ್ರಹ್ಮ, ಇಂದ್ರ, ಶಿವ ಮುಂತಾದವರಿಗೆಲ್ಲಾ ಹಿರಿಮೆಯನ್ನು ಒದಗಿಸುವಳು ಮೂರೂ ಲೋಕಗಳ ಪೋಷಣೆಯ ಭಾರವನ್ನು ಹೊತ್ತಿರುವಳು. ವಿಷ್ಣುವಿಗೆ ಅತಿ ಪ್ರಿಯಳೂ ಆಗಿರುವಳು. (ಶ್ರೀ ಸೂಕ್ತ)

ಅಹಂ ಮಿತ್ರಾವರುಣೋಭಾ ಬಿಭರ್ಮ್ಯ -
ಹಮಿಂದ್ರಾಗ್ನೀ ಅಹಮಶ್ವಿನೋಭಾ ॥ (ಅಂಭ್ರಣೀ ಸೋತ್ರ)

ಲಕ್ಷ್ಮೀದೇವಿಯಾದ ತಾನು ಏಕಾದಶರುದ್ರರಿಂದಲೂ ಅಷ್ಟವಸುಗಳಿಂದಲೂ ಕೂಡಿಕೊಂಡು ಸಂಚರಿಸುವೆನು. ಅದರಂತೆ ಆದಿತ್ಯರಿಂದಲೂ, ವಿಶ್ವದೇವತೆಗಳಿಂದಲೂ, ಸಹ ನಾನು ಮಿತ್ರಾವರುಣರನ್ನೂ ಅಶ್ವಿನೀ ದೇವತೆಗಳನ್ನೂ ಸಂರಕ್ಷಿಸುತ್ತೇನೆ ಎಂದು ಹೇಳಿಕೊಂಡಿದ್ದಾಳೆ.

ಹರಿದಾಸ ಸಾಹಿತ್ಯದಲ್ಲಿ ಅನೇಕ ಯತಿಗಳು, ಹರಿದಾಸರೂ, ಹರಿದಾಸಿಯರೂ ಲಕ್ಷ್ಮೀದೇವಿಯ ಗುಣಗಳನ್ನು ಮನದುಂಬಿ ಹಾಡಿ ಹೊಗಳಿದ್ದಾರೆ.

ಕಂಜನೇತ್ರೆ ಶುಭ ಮಂಜುಳ ಗಾತ್ರೆ
ಕುಂಜರಗಮನೆ ರಂಜಿತಾಂಗಿ ನಿರಂಜನಾಂಗಿ ॥ಪ॥

ಎಂದು ಶ್ರೀಪಾದರಾಜರು ರಂಗವಿಠಲ ಅಂಕಿತದಲ್ಲಿ ಸತ್ಯಭಾಮೆಗೂ-ರುಕ್ಮಿಣಿಗೂ ಶ್ರೀಕೃಷ್ಣನ ವಿಷಯವಾಗಿ ನಡೆದ ಸಂವಾದದಲ್ಲಿ ಲಕ್ಷ್ಮೀದೇವಿಯನ್ನು ಮಂಗಳಪ್ರದಳು. ಮನೋಹರವಾದ ಶರೀರವುಳ್ಳವಳು, ಆನೆಯಂತೆ ಗಾಂಭೀರ್ಯವುಳ್ಳವಳು ನಿರ್ವಿಕಾರಳು ಎಂದು ಆಕೆಯ ಗುಣಗಾನ ಮಾಡಿದ್ದಾರೆ.

ಯಂ ಕಾಮಯೇ ತಂ ತಮುಗ್ರಂ ಕೃಣೋಮಿ
ತಂ ಬ್ರಹ್ಮಾಣಂ ತಮೃಷಿಂ ಸುಮೇಧಾಮ್॥5॥

ದೇವತೆಗಳಿಂದಲೂ ಮತ್ತು ಉತ್ತಮ ಮನುಷ್ಯರಿಂದಲೂ ಸೇವಿಸಲ್ಪಡುವ ನಾನು ಇಷ್ಟಪಡುವ ಆಯಾ ಯೋಗ್ಯತೆಯ ಯಾವ ಜೀವವನ್ನು ಬೇಕಾದರೂ ರುದ್ರನನ್ನಾಗಿ ಮಾಡಬಲ್ಲೆ. ಬ್ರಹ್ಮನನ್ನಾಗಿ ಮಾಡಬಲ್ಲೆ ಋಷಿಯನ್ನಾಗಿ ಆಗಲಿ ಉತ್ತಮ ಮೇಧಾವಿಯನ್ನಾಗಿ ಆಗಲಿ ಮಾಡಬಲ್ಲೆ ಎಂದು ಲಕ್ಷ್ಮೀದೇವಿಯೇ ಹೇಳಿಕೊಂಡಿರುವಳು. (ಅಂಭ್ರಣೀ ಸೂಕ್ತ)

ಕುಜನ ಮರ್ದನ ವಿಜಯವಿಠಲನ
ಭಜಿಸಿ ಪಾಡುವ ಭಕ್ತ ಕೂಟವ
ನಿಜದಿ ಸಲಹುವೆನೆಂಬ ಬಿರುದುಳ್ಳ
ವಿಜಯಸಾರಥಿ ವಿಶ್ವಂಬರಪ್ರಿಯೆ ॥3॥

ನಿತ್ಯ ಶುಭಪ್ರದಳಾದ ಲಕ್ಷ್ಮಿದೇವಿಯು ತಮೋಯೋಗ್ಯರನ್ನು ಸಂಹರಿಸಿ ಭಕ್ತಿಯಿಂದ ಭಜಿಸುವ ಭಗವದ್ಭಕ್ತರನ್ನು ಸಲಹುವಳು.

ಪಾರ್ಥನಿಗೆ ಬಂಡಿಬೋವನಾದ ಶ್ರೀಕೃಷ್ಣನು ವಿಶ್ವವನ್ನೇ ತನ್ನ ಉದರದಲ್ಲಿ ಧರಿಸಿರುವನು. ಅಂಥಹ ಶ್ರೀಹರಿಯ ಪತ್ನಿ ಲಕ್ಷ್ಮೀದೇವಿ ಎಂದಿರುವರು ವಿಜಯದಾಸರು.

ಕಾಪಾಡೆಲೆ ಸಕಲಾಪತ್ತಾರಿಣಿ
ಕೊಲ್ಲಾಪುರಗತ ಕಮಲೆ ॥ಪ॥

ಸಕಲರಿಗೆ ಬಂದ ವಿಪತ್ತುಗಳನ್ನು ಪರಿಹರಿಸುವಳು ಎಂದು ಗೋಪಾಲದಾಸರು ನಿರೂಪಿಸಿದ್ದಾರೆ. ಮಹಾಲಕ್ಷ್ಮೀಯು ಸ್ತ್ರೀವರ್ಗ

ದಲ್ಲಿಯೇ ಅತಿ ಶ್ರೇಷ್ಠಳು ಎಂಬುದು ಗೋಪಾಲದಾಸರ ಅಭಿಪ್ರಾಯ.

ಕೋಟಿಚಂದ್ರ ಪ್ರಭೆಯುಳ್ಳವಳು, ಆದಿಮಧ್ಯಾಂತರಹಿತಳು, ಶುಕ್ಲ ಶೋಣಿತ ಸಂಬಂಧವಿಲ್ಲದವಳು, ನಿರಂತರದಲ್ಲಿ ಚಿಂತೆ, ಶೋಕ ರಹಿತಳು ಸಕಲ ದೇವತೆಗಳಿಗೆ ಆನಂದ ನೀಡುವಳು, ಹರಿಯಂತೆ ಸಾಕಾರಳು ಶುಭ ನಾಮಾಂಕಿತಳು ಎಂದೆಲ್ಲಾ ಜಗನ್ನಾಥದಾಸರು ಲಕ್ಷ್ಮೀದೇವಿಯ ಗುಣಗಳನ್ನು ಹಾಡಿ ಹೊಗಳಿದ್ದಾರೆ.

ಷಡುವಿಕಾರ ದೂರೆ ವ್ಯಾಪ್ತೆ - ಜ್ಞಾನಿಗಳು ಪ್ರಾಪ್ತೆ
ಬಿಡದೆ ಭಜಿಸುವವರಿಗಾಪ್ತೆ
ನಡುಮನೆಸುತ ಸೇವೆಗೆ ತೃಪ್ತೆ - ದೋಷನಿರ್ಲಿಪ್ತೆ
ಕಡು ದಯಾವಂತೆ ಸುಷಿಪ್ತೆ ॥

ಷಡೂರ್ಮಿಗಳಾದ ಕ್ಷುಧೆ - ತೃಷೆ-ಶೋಕ-ಮೋಹ-ಜರೆ-ಮೃತ್ಯು ಮುಂತಾದ ಆರು ವಿಕಾರಗಳನ್ನು ದೂರ ಮಾಡುವಳು. ನಡುಮನೆ ಎಂದು ಸುಪ್ರಸಿದ್ಧರಾದ ಮಧ್ಯಗೇಹಭಟ್ಟರ ಮಗನಾದ ಶ್ರೀಮದ್ವಾಚಾರ್ಯರ ಸೇವೆಗೆ ತೃಪ್ತಳಾಗಿರುವಳು. ಚೈತನ್ಯದಾಯಕಳು ದೋಷದೂರಳು, ಮಂದಹಾಸ ಬೀರುವವಳು ಎಂದು ಶ್ರೀಪ್ರಾಣೇಶದಾಸರು ನಿರೂಪಿಸಿರುವರು.

ಚಿತ್ತದಲಿ ಆನಂದ ಸುಖವನೀವಳು ರಮಾ ॥

ಎಂದು ಪುರಂದರದಾಸರ ಭಾವನೆ. ಅಲ್ಲದೆ ದೇಶತಃ ಕಾಲತಃ ಹರಿಗೆ ಸಮಾನಳು. ಆದರೆ ಗುಣಗಳಿಂದ ಅವರಳು. ಹರಿಯನ್ನು ಒಂದರೆ ಕ್ಷಣವೂ ಅಗಲಿ ಇರಲಾರಳು. ಶ್ರೀಹರಿಯ ಆಜ್ಞೆಯಿಂದ ದೇವತೆಗಳಿಗೆ ಮುಕ್ತಿ ಸುಖವನ್ನು ಕೊಡುವಳು. ಅಕ್ಷರ ನಾಮಕಳು. ಲಕ್ಷ್ಮೀದೇವಿಗೆ ನಾಶವೆಂಬುದೇ ಇಲ್ಲ. ಹರಿಯಿಂದ ಆನಂದವನ್ನು ತಾನೂ ಪಡೆಯುವಳು. ತ್ರಿಗುಣಾತ್ಮಕವಾದ ಜಗತ್ಸೃಷ್ಟಿಗೆ ಕಾರಣಳು. ವರ್ಷ ಆಯನ, ಇತ್ಯಾದಿ ಕಾಲದ ವಿವಿಧ ಅಂಶಗಳಲ್ಲಿ ಅಂತರ್ಗತಳಾಗಿರುವ ಕಾಲನಾಮಕಳು. ಸಕಲ ವೇದಾರ್ಥಗಳನ್ನು ಸ್ಪಷ್ಟಪಡಿಸುವಳು, ಆದ್ದರಿಂದ ವೇದಾಭಿಮಾನಿ, ವೇದಮಾತೆ ಎಂಬ ಬಿರುದುಳ್ಳವಳು. ಸ್ವರೂಪ ದೇಹಕ್ಕೆ ಕರ್ಮವ ಮೋಚನೆ ಮಾಡುವಳು.

# ವಿಜಯ ದಶಮಿ


**ದುರ್ಗೆಯು ಮಹಿಷಾಸುರಮರ್ಧಿನಿಯಾಗಿ ಮಹಿಷಾಸುರನೆಂಬ ರಾಕ್ಷಸನನ್ನು ಸಂಹಾರ ಮಾಡಿದಳು. ನವರಾತ್ರಿ ಒಂಬತ್ತು ದಿನಕ್ಕೆ ಸೀಮಿತವಾಗಿದ್ದರೂ ಹತ್ತನೇಯ ದಿನ ದಶಮಿಯಂದು ಮಹಾದುರ್ಗೆ ರಾಕ್ಷಸರನ್ನು ಸಂಹರಿಸಿ ವಿಜಯ ಸಾಧಿಸಿದ ದಿನವೆಂದೂ ಶ್ರೀರಾಮನು ರಾವಣನನ್ನು ಸಂಹಾರ ಮಾಡಿದ್ದು ವಿಜಯ ದಶಮಿಯಂದು, ಪಾಂಡವರು ಅಜ್ಞಾತವಾಸದಲ್ಲಿ ತಮ್ಮ ಆಯುಧಗಳನ್ನು ಬನ್ನಿ ಮರದಲ್ಲಿ ಮುಚ್ಚಿಟ್ಟು ದಶಮಿಯ ದಿನ ಬನ್ನಿ ಗಿಡದಲ್ಲಿ ಇಟ್ಟ ಆಯುಧಗಳೊಂದಿಗೆ ಕುರುಕ್ಷೇತ್ರ ಯುದ್ಧದಲ್ಲಿ ಕೌರವರ ವಿರುದ್ಧ ವಿಜಯ ಸಾಧಿಸಿದ್ದರು ಎಂದು ಹೇಳುತ್ತಾರೆ. ಹೀಗಾಗಿ ವಿಜಯವನ್ನು ಸಾಧಿಸಿದ ದಿನವನ್ನು ವಿಜಯದಶಮಿಯೆಂದು ಕರೆದು ಆಚರಿಸುವ ಪದ್ಧತಿ ರೂಢಿಯಲ್ಲಿದೆ.**



# ಶಮೀ ವೃಕ್ಷ (ಬನ್ನಿ ಮರ)

- ಹನುಮಂತ.ಮ.ದೇಶಕುಲಕರ್ಣಿ.

- 9480 364915



**ಶ್ಲೋಕ:** ಶಮೀ ಶಮಯತೇ ಪಾಪಂ ಶಮೀ ಶತ್ರುವಿನಾಶಿನೀ ಅರ್ಜುನಸ್ಯ ಧನುರ್ಧಾರೀ ರಾಮಸ್ಯ ಪ್ರಿಯದರ್ಶಿನೀ ಕರಿಷ್ಯ ಮಾಣ ಯಾತ್ರಾಯಾ ಯಥಾ ಕಾಲಂ ಸುಖಂ ಮಯಾ ತತ್ರ ನಿರ್ವಿಘ್ನಕರ್ತ್ರೀ ತ್ವಂ ಭವ ಶ್ರೀರಾಮ ಪೂಜಿತಾ.

ಶಮೀವೃಕ್ಷ (ಬನ್ನಿಮರ) ವೃಕ್ಷವು ಫೆಬಾಸಿಯೇ ಪಂಗಡದ ಪ್ರಾಸಪಿಸ್ ಸಿನರೇರಿಯಾ ಪ್ರಭೇದಕ್ಕೆ ಸೇರಿದೆ. ಬನ್ನಿಮರದ ಸಸ್ಯಶಾಸ್ತ್ರೀಯ ಹೆಸರು ಮೆಕ್ಸಿಕನ್ ಪ್ರಾಸೊಪ್ಸಿಸ್ ಜುಲಿ ಫ್ಲೋರಾ. ಪ್ರಾಸಪಿಸ್ ಸಿನರೇರಿಯಾ ಪ್ರಭೇದದ ಸಸ್ಯಗಳು ಮರಳುಗಾಡಿನಲ್ಲಿ ಹಾಗೂ ವಾರ್ಷಿಕ 150 ಮಿ.ಮೀ.ಗಿಂತ ಕಡಿಮೆ ಮಳೆಯಾಗುವ ಪ್ರದೇಶಗಳಲ್ಲಿ ಬೆಳೆಯುತ್ತವೆ. ಸಾಮಾನ್ಯವಾಗಿ ಇವುಗಳ ಎತ್ತರ 3 ರಿಂದ 5 ಮೀಟರ್. ಟೊಂಗೆಗಳು ಮುಳ್ಳುಗಳಿಂದ ಕೂಡಿರುತ್ತವೆ. ಕಂದು ಹಳದಿ ಬಣ್ಣದ ಚಿಕ್ಕ ಚಿಕ್ಕ ಹೂವುಗಳನ್ನು ಬಿಡುತ್ತವೆ. ಬನ್ನಿ ಅಥವಾ ಶಮಿ ಮರ ಎಂದು ಕರೆಯುತ್ತಾರೆ.

ರಾಜ್ಯವೃಕ್ಷ ಎಂದು ಘೋಷಿಸಿಕೊಂಡಿರುವ ರಾಜಸ್ಥಾನೀಯರು 'ಲೂಂಗ್‌ಟ್ರೀ' ಎಂದು ಕರೆದರೆ, ಪಂಜಾಬಿನವರು 'ಜಾಂಟಿ' ಎಂದು ಕರೆಯುತ್ತಾರೆ. ತಮಿಳರಿಗೆ 'ವನ್ನಿ', ತೆಲುಗರಿಗೆ 'ಜಮ್ಮಿ', ಸಂಸ್ಕೃತದಲ್ಲಿ 'ಶಮಿ', ನಾವು 'ಬನ್ನಿ' ಎನ್ನುತ್ತೇವೆ.

ಬನ್ನಿಮರ ಎಂದಾದರೆ ಅಲ್ಲಿ ನೀರಿನ ಸೆಲೆ ಚೆನ್ನಾಗಿದೆ, ಅಲ್ಲಿ ಅಂತರ್ಜಲ ಇದೆ ಎನ್ನುವ ನಂಬಿಕೆ ನಮ್ಮಲ್ಲಿದೆ. ಅದಕ್ಕೊಂದು ವೈಜ್ಞಾನಿಕ ಹಿನ್ನೆಲೆ ಇದೆ. ಇದರ ಬೇರುಗಳು ನೆಲದ ಆಳದಲ್ಲಿ ಹುದುಗಿಕೊಂಡಿದ್ದು, ನೀರನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಹೊಂದಿವೆ. ಸಾರಜನಕದಿಂದ ಸಮೃದ್ಧವಾಗಿರುವ ಬನ್ನಿ, ಅದನ್ನು ಭೂಮಿಗೂ ನೀಡಿ ಭೂಮಾತೆಯ ಫಲವತ್ತತೆಯನ್ನು ಹೆಚ್ಚಿಸುತ್ತವೆ.

ನಮ್ಮ ಋಷಿ ಮುನಿಗಳು ಹವನ - ಹೋಮಗಳ ಆರಂಭ ಮಾಡುವಾಗ ಶಮೀ ವೃಕ್ಷದ ಕಾಂಡಗಳನ್ನು ಒಂದಕ್ಕೊಂದು ತಿಕ್ಕುವುದರ ಮೂಲಕ ಅಗ್ನಿ ಪ್ರಜ್ವಲಿಸುವಂತೆ ಮಾಡುತ್ತಿದ್ದರು. ಈಗಲೂ ಭಾರತದ ಅನೇಕ ಭಾಗಗಳಲ್ಲಿ ಈ ಪರಂಪರೆಯಂತೆಯೇ ಅಗ್ನಿಕುಂಡ ವನ್ನು ಹಚ್ಚಲಾಗುತ್ತದೆ. ಇದನ್ನು ಅರಣೀ ಮಂಥನವೆಂದು ಹೇಳಲಾಗುತ್ತದೆ. ಇದಕ್ಕೆ ಕಾರಣವೇನೆಂದರೆ ಶಮೀ ವೃಕ್ಷವು ಅಗ್ನಿಯ ಆವಾಸಸ್ಥಾನ ಹಾಗೂ ಸುವರ್ಣವು ಅಗ್ನಿಯ ವೀರ್ಯವೆಂದು ಹೇಳಲಾಗಿದೆ. ಆದ್ದರಿಂದಲೇ ಶಮೀವೃಕ್ಷವು ಸುವರ್ಣ ಸಮಾನವಾದ ದೈವೀವೃಕ್ಷವೆಂಬ ಭಾವನೆ ಇದೆ.

ಹಿಂದೆ ಸೂರ್ಯವಂಶಸ್ಥ ರಘು ಮಹಾರಾಜರು ಭರತಖಂಡವನ್ನು ಆಳುತ್ತಿದ್ದ ಸಮಯದಲ್ಲಿ ಕೌಸ್ಥೇಯನೆಂಬ ಬಡ ಬ್ರಾಹ್ಮಣ ಬಾಲಕನೊಬ್ಬನು ವಿದ್ಯಾರ್ಜನೆಗೋಸ್ಕರ ಅರುಣಿ ಮಹರ್ಷಿಗಳ ಗುರುಕುಲಕ್ಕೆ ಬಂದಿದ್ದನು. ಆ ಮುನಿಗಳ ಆಶ್ರಯದಲ್ಲಿ ತನ್ನ ಶಿಕ್ಷಣಪೂರ್ಣವಾದ ಮೇಲೆ ಗುರುಗಳಿಗೆ ವಿನಮ್ರಪೂರ್ವಕವಾಗಿ ಕೈ ಮುಗಿದು ತಾನು ಗುರುದಕ್ಷಿಣೆಯಾಗಿ ಏನು ಕೊಡಬೇಕೆಂದು ಕೇಳುತ್ತಾನೆ. ಅರುಣೀ ಮುನಿಗಳು ಕೌಸ್ಥೇಯನು



ನವರಾತ್ರಿ ಹಬ್ಬವು ಶಕ್ತಿಯ ಆರಾಧನೆಯ ಸಮಯವಾಗಿದೆ. ಇತಿಹಾಸ ಕಾಲದಲ್ಲಿ ರಾಜರು ವಿಜಯ ದಶಮಿಯಂದು ದೇವಿಯನ್ನು, ಶಮೀವೃಕ್ಷವನ್ನು ಪೂಜಿಸಿ ಚೈತ್ರ ಯಾತ್ರೆಗೆ ಹೊರಡುತ್ತಿದ್ದರು ಅಥವಾ ಚೈತ್ರಯಾತ್ರೆಯ ನಂತರ ವಿಜಯೋತ್ಸವವನ್ನು ಆಚರಿಸುತ್ತಿದ್ದರು.ದಕ್ಷಿಣಭಾರತದಲ್ಲಿ ಕಾಳಿಯನ್ನು ಚಾಮುಂಡಿ ಅಥವಾ ದುರ್ಗಾ ಎಂದು ಪೂಜಿಸುತ್ತಾರೆ. ಮೈಸೂರು ಅರಸರ ಮನೆದೇವತೆ ಚಾಮುಂಡೇಶ್ವರಿ, ಶಿವನು ಮಹಾಬಲನ ರೂಪದಲ್ಲಿ ನೆಲೆಸಿರುವ ಈ ಬೆಟ್ಟವನ್ನು ಮಹಾಬಲಾದ್ರಿ ಅಥವಾ ಚಾಮುಂಡಿಬೆಟ್ಟ ಎನ್ನುತ್ತಾರೆ. ವಿಜಯನಗರ ಕಾಲದಲ್ಲಿ ವೈಭವಯುತವಾಗಿ ನಡೆಯುತ್ತಿದ್ದ ನವರಾತ್ರಿ ಅಥವಾ ಹತ್ತುದಿನಗಳ ಕಾಲದ ದಸರಾ ಹಬ್ಬವನ್ನು ಮೈಸೂರು ಒಡೆಯರು ಮುಂದುವರಿಸಿಕೊಂಡು ಬಂದರು. ಶರದ್ ಋತುವಿನ, ಆಶ್ವಯುಜ ಮಾಸದ ಪಾಡ್ಯದಿಂದ ಆರಂಭವಾಗುವ ನವರಾತ್ರಿಯನ್ನು ಶರನ್ನವರಾತ್ರಿ ಎನ್ನುತ್ತಾರೆ. ಇದು ಶಕ್ತಿ ದೇವತೆಯ ಆರಾಧನೆಯ ಉತ್ಸವ. ಈ ಕಾಲದಲ್ಲಿ ಲಕ್ಷ್ಮೀಪೂಜೆ, ಸರಸ್ವತಿ ಪೂಜೆ, ಚಂಡಿ ಹೋಮ, ಚಂಡೀ (ದುರ್ಗಾಸಪ್ತಶತಿ) ಪಾರಾಯಣ, ಆಯುಧಗಳ ಪೂಜೆ, ಚೈತ್ರಯಾತ್ರೆ, ಶಮೀಪೂಜೆ ಮೊದಲಾದವುಗಳು ಯಥೇಚ್ಚವಾಗಿ ನಡೆಯುತ್ತವೆ. ನವರಾತ್ರಿ ಉತ್ಸವದ ಒಂಭತ್ತು ದಿನಗಳಲ್ಲಿ ಶಕ್ತಿ ಸ್ವರೂಪಿಣಿಯನ್ನು ಮೊದಲ ಮೂರು ದಿನ ಮಹಾಲಕ್ಷ್ಮೀ ರೂಪದಲ್ಲಿ,ಎರಡನೆಯ ಮೂರು ದಿನ ಸರಸ್ವತಿ ರೂಪದಲ್ಲಿ, ಮೂರನೆಯ ಮೂರು ದಿನಗಳಲ್ಲಿ ದುರ್ಗಾ ಅಥವಾ ಪಾರ್ವತಿ ರೂಪದಲ್ಲಿ ಪೂಜಿಸುತ್ತಾರೆ. ಹತ್ತನೆಯ ದಿನ ವಿಜಯ ದಶಮಿಯಂದು ಚೈತ್ರ ಯಾತ್ರೆಯನ್ನು ಮಾಡಿ ಶಮೀಪೂಜೆಯನ್ನು ಮಾಡಲಾಗುತ್ತದೆ.

## ನವರಾತ್ರಿ

ಬಡವನಾದ್ದರಿಂದ ಯಾವುದೇ ಗುರುದಕ್ಷಿಣೆಯನ್ನು ಅಪೇಕ್ಷಿಸದೆ ಗುರುಕುಲವನ್ನು ಬಿಡುವ ಆಜ್ಞೆಯನ್ನು ನೀಡುತ್ತಾರೆ.

ಆದರೆ ಕೌಸ್ಥೇಯನು ಗುರುದಕ್ಷಿಣೆಯಾಗಿ ಏನನ್ನಾದರೂ ಆಜ್ಞಾಪಿಸಬೇಕೆಂದು ಆಗ್ರಹಪೂರ್ವಕವಾಗಿ ಪ್ರಾರ್ಥಿಸುತ್ತಾನೆ. ಇದರಿಂದ ಕುಪಿತಗೊಂಡ ಗುರುಗಳು "ಗುರುದಕ್ಷಿಣೆ" ಕೊಡುವುದೇ ಇದ್ದರೆ "ಹತ್ತು ಲಕ್ಷ ಸುವರ್ಣ ನಾಣ್ಯಗಳನ್ನು ಕೊಡು" ಎಂದು ಬಡ ಕೌಸ್ಥೇಯನಲ್ಲಿ ಅಸಾಧ್ಯವಾದ ಗುರುದಕ್ಷಿಣೆಯನ್ನು ಕೇಳಿಕೊಳ್ಳುತ್ತಾರೆ.

ಇಷ್ಟು ದೊಡ್ಡ ಗುರುದಕ್ಷಿಣೆ ಕೇಳುತ್ತಾರೆಂಬ ಕಲ್ಪನೆ ಇಲ್ಲದ ಕೌಸ್ಥೇಯ ಹತ್ತು ಲಕ್ಷ ಸುವರ್ಣ ನಾಣ್ಯಗಳನ್ನು ಹೇಗೆ ಸಂಪಾದಿಸುವುದೆಂಬ ಗಾಢ ಚಿಂತೆಯಲ್ಲಿ ರಘು ಮಹಾರಾಜನ ಆಸ್ಥಾನಕ್ಕೆ ಬಂದು ತಲುಪುತ್ತಾನೆ. ರಘು ಮಹಾರಾಜ ಪ್ರತಿ ಹನ್ನೆರಡು ವರ್ಷಕ್ಕೊಮ್ಮೆ ತನ್ನ ಪತ್ನಿ ಸಮೇತ ತನ್ನ ರಾಜಭಂಡಾರದ ಸಮಸ್ತ ಧನ - ಕನಕಗಳನ್ನು ಪ್ರಜೆಗಳಿಗೆ ದಾನವಾಗಿ ಕೊಡುವ ಪರಿಪಾಠವಿಟ್ಟುಕೊಂಡಿದ್ದು, ಆ ರೀತಿ ದಾನ ನೀಡಿ ಕೆಲವೇ ದಿನಗಳು ಕಳೆದಿರುತ್ತವೆ. ರಾಜ ಭಂಡಾರ ಬರಿದಾಗಿರುತ್ತದೆ.

ರಘು ಮಹಾರಾಜನ ತಪಃಶಕ್ತಿಯ ಫಲವಾಗಿ ಕೆಲ ವರ್ಷಗಳಲ್ಲಿ ರಾಜಕೋಶವು ಮತ್ತೆ ತುಂಬುತ್ತಿರುತ್ತದೆ. ರಾಜನು ಒಮ್ಮೆ ಕೌಸ್ಥೇಯನಿಗೆ ನಿತ್ಯ ಆಸ್ಥಾನಕ್ಕೆ ಬರುವ ಕಾರಣವೇನೆಂದು ಕೇಳುತ್ತಾನೆ. ಕೌಸ್ಥೇಯ ತನ್ನ ಸಮಸ್ಯೆಯನ್ನು ಮಹಾರಾಜನಲ್ಲಿ ಭಿನ್ನವಿಸಿಕೊಳ್ಳುತ್ತಾನೆ. ರಾಜ್ಯಕೋಶ ಬರಿದಾದ ಮಹಾರಾಜ ಕೌಸ್ಥೇಯನಿಗೆ ಶೀಘ್ರವಾಗಿ ಸಹಾಯ ಮಾಡಬೇಕೆಂಬ ಸದುದ್ದೇಶದಿಂದ ಧನಾಧಿಪತಿಯಾದ ಕುಬೇರನ ಮೇಲೆ ಯುದ್ಧವನ್ನು ಮಾಡಿ ಕೌಸ್ಥೇಯನ ಮನೋಭಿಲಾಷೆಯನ್ನು ಪೂರ್ಣಗೊಳಿಸುವುದೆಂದು ಸಂಕಲ್ಪ ಮಾಡುತ್ತಾನೆ.

ತನ್ನ ಚತುರಂಗಬಲ ಸಮೇತ ಕುಬೇರನ ಮೇಲೆ ಯುದ್ಧಕ್ಕೆ ಪ್ರಸ್ಥಾನ ಮಾಡುವಾಗ ಮಾರ್ಗ ಮಧ್ಯೆ ರಾತ್ರಿಯಾದ ಕಾರಣ ಒಂದು ವನದಲ್ಲಿ ಬಿಡಾರ ಹಾಕುತ್ತಾನೆ. ಅದು ಶಮೀವೃಕ್ಷಗಳಿಂದ ತುಂಬಿದ ವನ. ಕುಬೇರನಿಗೆ ಮಹಾ ತೇಜಸ್ವಿಯೂ ಆದ ರಘು ಮಹಾರಾಜ ವಿದ್ಯಾರ್ಥಿಯೊಬ್ಬನಿಂದ ಗುರುದಕ್ಷಿಣೆಗಾಗಿ ಹತ್ತು ಲಕ್ಷ ಸುವರ್ಣ ನಾಣ್ಯಗಳನ್ನು ಕೊಡಿಸುವ ಮಹದುದ್ದೇಶದಿಂದ ತನ್ನ ಮೇಲೆ ಯುದ್ಧಕ್ಕೆ ಬರುತ್ತಿರುವ ವಿಷಯ

# ಹೆಲ್ಮೆಟ್ ತಪ್ಪದೇ ಧರಿಸಬೇಕು

**ತಿರುಪತಿಯಿಂದ ತಿರುಮಲೆಗೆ, ತಿರುಮಲೆಯಿಂದ ತಿರುಪತಿಗೆ ದ್ವಿಚಕ್ರವಾಹನದಲ್ಲಿ ಹೋಗಬಯಸುವ ಪ್ರಯಾಣಿಕರು, ಭಕ್ತರು ತಪ್ಪದೇ ಹೆಲ್ಮೆಟ್‌ನ್ನು ಧರಿಸಬೇಕು. ಇದರಿಂದ ಅಪಘಾತಗಳನ್ನು ತಡೆಯಬಹುದು.**


**ಹೆಲ್ಮೆಟ್ ಧರಿಸಿ ವಾಹನ ನಡೆಸಿ**


ತಿಳಿಯುತ್ತದೆ. ಸಕಲ ಬ್ರಹ್ಮಾಂಡಕ್ಕೆ ಧನೇಶ್ವರನಾದ ಕುಬೇರ, ರಾಜನ ಸದುದ್ದೇಶದಿಂದ ಸುಪ್ರೀತನಾಗುತ್ತಾನೆ. ತನ್ನ ಮಾಯೆಯಿಂದ ರಘು ಮಹಾರಾಜ ಬಿಡಾರ ಹೂಡಿದ್ದ ಶಮೀವೃಕ್ಷದ ಪ್ರತಿಯೊಂದು ಎಲೆಯೂ ಸುವರ್ಣ ನಾಣ್ಯವಾಗುವಂತೆ ಮಾಡುತ್ತಾನೆ ಕುಬೇರ.

ಸೂರ್ಯೋದಯವಾಗುತ್ತಿದ್ದಂತೆಯೇ ಶಮೀವೃಕ್ಷದ ಎಲೆ ಎಲೆಗಳೆಲ್ಲಾ ಸುವರ್ಣ ನಾಣ್ಯಗಳಾಗಿ ಝಗಮಗಿಸುತ್ತಿರುವ ಅಭೂತಪೂರ್ವ ಚಮತ್ಕಾರ, ಶಮೀವನವೆಲ್ಲ ಸ್ವರ್ಣ ನಾಣ್ಯಗಳಿಂದ ಕಂಗೊಳಿಸುತ್ತಿದೆ. ರಾಜ ಇದನ್ನು ದೈವೀಕೃಪೆ ಎಂದರಿತು ಕುಬೇರನ ಮೇಲೆ ಯುದ್ಧವನ್ನು ತ್ಯಜಿಸುತ್ತಾನೆ.

ಸ್ವರ್ಣ ಮುದ್ರೆಗಳಿಂದ ತುಂಬಿದ ಶಮೀವನಕ್ಕೆ ಕೌಸ್ಥೇಯನನ್ನು ಕರೆಯಿಸುತ್ತಾನೆ ಹಾಗೂ ಹತ್ತು ಲಕ್ಷ ಸುವರ್ಣ ನಾಣ್ಯಗಳನ್ನು ತೆಗೆದುಕೊಂಡು ಅರುಣೀ ಮಹರ್ಷಿಗಳ ಗುರುದಕ್ಷಿಣೆಯ ಋಣವನ್ನು ತೀರಿಸಲು ಹೇಳುತ್ತಾನೆ. ರಾಜನ ಭಂಡಾರ ಮತ್ತೆ ಸುವರ್ಣ ನಾಣ್ಯಗಳಿಂದ ತುಂಬಿ ತುಳುಕುತ್ತದೆ. ಈ ಅಸಾಧ್ಯವೆನಿಸಿದ ಗುರುದಕ್ಷಿಣೆಯನ್ನು ಸ್ವೀಕರಿಸಿದ ಅರುಣೀ ಮಹರ್ಷಿಗಳು ಕೌಸ್ಥೇಯನ ಗುರುಭಕ್ತಿಯನ್ನೂ, ರಘು ಮಹಾರಾಜನ ತೇಜಸ್ಸನ್ನೂ, ದಾನ ಬುದ್ಧಿಯನ್ನೂ ಮನಃ ಪೂರ್ವಕವಾಗಿ ಹರಸುತ್ತಾರೆ. ಶಮೀವೃಕ್ಷದ ಎಲೆಗಳು ಸ್ವರ್ಣ ಮುದ್ರೆಗಳಾಗಿ ಪರಿವರ್ತನೆಯಾದ ದಿನವೇ ಆಶ್ವಯುಜಮಾಸ, ಶುಕ್ಲಪಕ್ಷ ದಶಮಿ ಅಥವಾ ಶರನ್ನವರಾತ್ರಿಯ ವಿಜಯದಶಮಿ.

ಈ ಪುಣ್ಯತೋಮಯ ದಿನದಂದು ಶಮೀವೃಕ್ಷಕ್ಕೆ ಭಕ್ತಿಯಿಂದ ಪೂಜೆ ಮಾಡಿ , ಶಮೀಪತ್ರೆಗಳನ್ನು ಮನೆಗೆ ತಂದು ತಿಜೋರಿ, ಗಲ್ಲ, ಆಭರಣದ ಪೆಟ್ಟಿಗೆ ಇತ್ಯಾದಿಗಳಲ್ಲಿ ಇಡುವುದರಿಂದ ಧನಧಾನ್ಯ ಸಮೃದ್ಧಿಯಾಗುವುದೆಂಬ ನಂಬಿಕೆಯಿದೆ.





# ಕಾವೇರಿ

# ತುಲಾ ಸಂಕ್ರಮಣ ಹಾಗೂ ಬ್ರಹ್ಮಗಿರಿಯ ತಲಕಾವೇರಿ ಕ್ಷೇತ್ರ


- ಶ್ರೀಮತಿ. ಬಿ.ಎಸ್. ಪಾರಿಜಾತ
90083 35689


ಜೀವಂತ ಗ್ರಹ ಎನಿಸಿರುವ ಭೂಮಿಯು ಸೂರ್ಯನ ಸುತ್ತ ತನ್ನ ಕಕ್ಷೆಯ ಮೇಲೆ ಭ್ರಮಣೆ ಹಾಗೂ ಪರಿಭ್ರಮಣೆ ಮಾಡುತ್ತಿದೆ. ಇದರಿಂದ ಹಗಲು ರಾತ್ರಿ, ಕಾಲಗಳ ಬದಲಾವಣೆಯಿಂದ ಭೂಮಿಯ ಮೇಲಿನ ಪ್ರಕೃತಿಯ ವಿವಿಧ ಬದಲಾವಣೆಗಳು ಮನುಷ್ಯನ ಜೀವನದ ಮೇಲೂ ಪರಿಣಾಮ ಬೀರುತ್ತಿವೆ. ಸೌರಮಂಡಲದ ಗ್ರಹಗಳು ಉಪಗ್ರಹಗಳ ಚಲನೆಯ ಆಧಾರದಲ್ಲಿ ನಮ್ಮ ಹಿರಿಯರು ತಿಥಿ, ವಾರ, ಯೋಗ, ಕರಣ, ರಾಶಿ ವಿಚಾರಗಳಲ್ಲಿ ಲೆಕ್ಕಾಚಾರ ಮಾಡಿ ಅವುಗಳಿಂದಾಗುವ ಪರಿಣಾಮವನ್ನು ತಿಳಿಸಿದ್ದಾರೆ.

ಇದರ ಪ್ರಕಾರ ಸೂರ್ಯನು ಮೇಷದಿಂದ ಮೀನ ರಾಶಿಯವರೆಗೂ ಒಂದೊಂದು ರಾಶಿಯಲ್ಲೂ ಸಂಚರಿಸುವ "ಕಾಲಘಟ್ಟವನ್ನು" ಸಂಕ್ರಮಣವೆಂದು ಗುರುತಿಸಿದ್ದಾರೆ. ಹೀಗೆ ವರ್ಷ ಪೂರ್ತಿ ವಿವಿಧ "ಕಾಲಘಟ್ಟದಲ್ಲಿ ವಿವಿಧ ಸಂಕ್ರಮಣಗಳು ಜರುಗುತ್ತವೆ. ಅದಕ್ಕೆ ಸಂಬಂಧಿಸಿದಂತೆ ಆಚರಣೆಗಳು, ಸಂಪ್ರದಾಯಗಳನ್ನು ನಡೆಸಲಾಗುತ್ತದೆ. ಹೀಗೆ ಶಕ್ತಿ ಮೂಲನಾದ ಸೂರ್ಯನು ಕನ್ಯಾರಾಶಿಯಿಂದ ತುಲಾರಾಶಿಗೆ ಪ್ರವೇಶಿಸುವ ಕಾಲವನ್ನು "ತುಲಾಸಂಕ್ರಮಣ" ವೆಂದು ಕರೆಯಲಾಗುತ್ತದೆ.

ಈ ತುಲಾ ಸಂಕ್ರಮಣವು ಪವಿತ್ರವಾದ ಶುಭ ಸಂದರ್ಭವೆಂದು ವಿಶೇಷ ಆಚರಣೆ ಕೈಗೊಳ್ಳಲಾಗುತ್ತದೆ. ಈ ಶುಭ ಸಮಯದಲ್ಲಿ ಜೀವನದಿಯೆನಿಸಿದ ಕಾವೇರಿ ನದಿಯು ಉದ್ಭವಿಸುವ ದಿನವನ್ನು ಕಾವೇರಿ ಸಂಕ್ರಮಣವೆಂದು ವಿಶೇಷವಾಗಿ ಆಚರಿಸಲಾಗುತ್ತದೆ.

ಪ್ರಕೃತಿ ಮಾತೆಯ ಮಡಿಲಲ್ಲಿ ಆಶ್ರಯ ಪಡೆದಿರುವ ನಾವು, ಪ್ರತಿ ಕ್ಷಣವೂ ಆಕೆಯ ಅವಲಂಬಿಗಳು ಆಕೆಯ ಕೃಪಾಕಟಾಕ್ಷವಿಲ್ಲದೆ ನಾವಿಲ್ಲ. ಇಂತಹ ಪ್ರಕೃತಿಯ ಒಂದು ಭಾಗ ಜಲಸಂಪತ್ತು. ನಮ್ಮ ನಾಡಿನ ಜಲಸಂಪನ್ಮೂಲಗಳಲ್ಲಿ ನದಿಗಳು ಪ್ರಮುಖ ಪಾತ್ರವಹಿಸುತ್ತವೆ. ನದಿಯೆಂದರೆ ಕೇವಲ



ನೀರಷ್ಟೆ ಅಲ್ಲ. ಅದೊಂದು ಜೀವಂತ ಶಕ್ತಿ. ಸಸ್ಯ,ಪ್ರಾಣಿ, ಜಲ ಚರ ಮಾನವ ಪ್ರಪಂಚಕ್ಕೆ ಆಧಾರ. ಅನಾದಿಕಾಲದಿಂದಲೂ ನಮ್ಮ ಭವ್ಯ ಸಂಸ್ಕೃತಿಯನ್ನು ಬೆಳೆಸಿ ಉಳಿಸಿರುವ ತೊಟ್ಟಿಲು ಗಳಾಗಿವೆ.

ಅಂತೆಯೇ ನಮ್ಮ ನಾಡಿನ ಒಂದೊಂದು ನದಿಗೂ ಸ್ವಾರಸ್ಯಕರ ಪೌರಾಣಿಕ ಹಾಗೂ ಐತಿಹಾಸಿಕ ಹಿನ್ನೆಲೆ ಇದೆ. ಇಂತಹ ಪೌರಾಣಿಕ ಹಾಗೂ ಐತಿಹಾಸಿಕ ಹಿನ್ನೆಲೆಯನ್ನು ಹೊಂದಿರುವ ಕರ್ನಾಟಕದ ಜೀವ ನದಿಗಳಲ್ಲಿ ಕಾವೇರಿ ಒಂದಾಗಿದೆ. ನದಿಯ ಉಗಮ ಸ್ಥಾನವಾದ ಬ್ರಹ್ಮಗಿರಿಯ ತಲ ಕಾವೇರಿ ಕ್ಷೇತ್ರವು ಇತಿಹಾಸದಲ್ಲಿ ತನ್ನದೇ ಆದ ಮಹತ್ವವನ್ನು ಪಡೆದಿದೆ.

ತಲಕಾವೇರಿ ಸ್ಥಾನವು ಕರ್ನಾಟಕ ರಾಜ್ಯದ ಮಡಿಕೇರಿ ಜಿಲ್ಲೆಯ ಭಾಗಮಂಡಲದ ಬ್ರಹ್ಮಗಿರಿ ಪರ್ವತದಲ್ಲಿದೆ. ಪ್ರತೀ ವರ್ಷ ಅಕ್ಟೋಬರ್ ತಿಂಗಳಿನಲ್ಲಿ ಬರುವ ಶುಭ ಸಂಕ್ರಮಣದ ದಿನ ತಲಕಾವೇರಿಯ ತೀರ್ಥ ಕುಂಡದಲ್ಲಿ ತಾಯಿ ಕಾವೇರಿಯ (ತೀರ್ಥೋದ್ಭವ) ಉಗಮವಾಗುತ್ತದೆ.

**ಪೌರಾಣಿಕ ಹಿನ್ನೆಲೆ:**

ಕಾವೇರಿಯ ಪವಿತ್ರತೆ ಹಾಗೂ ದೈವೀಕತೆಯ ಬಗ್ಗೆ ಆಖ್ಯಾಯಿಕೆಗಳು ಅಗ್ನಿಪುರಾಣ, ಸ್ಕಾಂದ ಪುರಾಣಗಳಲ್ಲಿನ ಕಾವೇರಿ ಮಹಾತ್ಮೆಯಲ್ಲಿ ವಿವರಿಸಲ್ಪಟ್ಟಿರುವಂತೆ ಹಿಂದೆ ಒಮ್ಮೆ ಕವೇರನೆಂಬ ರಾಜಋಷಿಯು ಬ್ರಹ್ಮನನ್ನು ಕುರಿತು ಸಂತಾನಕ್ಕಾಗಿ ತಪಸ್ಸು ಕೈಗೊಳ್ಳಲು, ಆತನ ತಪಸ್ಸಿಗೆ ಮೆಚ್ಚಿ ಬ್ರಹ್ಮನು ಸೌಂದರ್ಯವತಿಯಾದ ಒಂದು ಹೆಣ್ಣು ಮಗಳನ್ನು ದಯಪಾಲಿ ಸಿದನು. ಕವೇರನ ಮಗಳಾಗಿ ಬೆಳೆದ ಆಕೆಯು ಕಾವೇರಿ ಎಂಬ ಹೆಸರಿನಿಂದ ಕರೆಯಲ್ಪಟ್ಟಳು. ಒಮ್ಮೆ ಅವಳು ಅಗಸ್ತ್ಯ ಮುನಿಯ ದೃಷ್ಟಿಗೆ ಬೀಳಲು ಆತನು ಅವಳನ್ನು ಕಂಡು ಮೋಹಿತ ನಾಗಿ ಮದುವೆಯಾಗಲು ಬಯಸಿದನಂತೆ.ಆಗ ಕವೇರನು ಯಾವುದೇ ಸಮಯದಲ್ಲೂ ತನ್ನ ಮಗಳನ್ನು ಬಿಟ್ಟು ಅಲಗ ಕೂಡದೆಂಬ ಶರತ್ತನ್ನು ಹಾಕಿದನಂತೆ ಅದರಂತೆ ಒಪ್ಪಿ ಅಗಸ್ತ್ಯನು ಕಾವೇರಿಯನ್ನು ವಿವಾಹವಾದನು. ಆದರೆ ಕಾವೇರಿಯು ಈ ಬಂಧನದಿಂದ ಮುಕ್ತಿ ಹೊಂದಿ ಲೋಕ ಕಲ್ಯಾಣಾರ್ಥದಲ್ಲಿ ಜನ್ಮ ಸಾರ್ಥಕಗೊಳಿಸಿಕೊಳ್ಳಬೇಕೆಂಬ ಬಯಕೆ ಹೊಂದಿದ್ದಳು. ವಿವಾಹದ ನಂತರ ಪತಿ ಪತ್ನಿಯರು ಒಂದು ಪರ್ಣಕುಟೀರದಲ್ಲಿ ಸಂಸಾರ ಹೂಡಿದರು. ಒಮ್ಮೆ ಅಗಸ್ತ್ಯನು ಬ್ರಾಹ್ಮೀ ಮುಹೂರ್ತದಲ್ಲೆದ್ದು ಭಾಗಮಂಡಲದ ಕನಿಕಾ ನದಿಯಲ್ಲಿ ಸ್ನಾನ ಮಾಡಿ ಭಗಂಡೇಶ್ವರನ್ನು ಪೂಜಿಸಲು ತೆರಳಿದನು. ಮರಳಿ ಬರುವುದು ತಡವಾಯಿತು. ಕಾವೇರಿಯು ತನ್ನ ಮನೋರಥವನ್ನು ಈಡೇರಿಸಿಕೊಳ್ಳಲು ಇದೇ ಸರಿಯಾದ ಸಮಯವೆಂದು ಭಾವಿಸಿ ತಲಕಾವೇರಿಯಲ್ಲಿರುವ ಕುಂಡಿಕೆ ಯಲ್ಲಿ ಹಾರಿ ನದೀ ರೂಪ ತಾಳಿ ಜಲರೂಪದ ಬುಗ್ಗೆಯಾಗಿ ಚಿಮ್ಮಿದಳು. ಅದನ್ನು ಕಂಡ ಅಗಸ್ತ್ಯರ ಶಿಷ್ಯರು ತಡೆಯಲು, ಗುಪ್ತಗಾಮಿನಿಯಾಗಿ ಸಾಗಿದಳು. ವಿಷಯ ತಿಳಿದ ಅಗಸ್ತ್ಯರು ಆಗಮಿಸಿ ತನ್ನ ತಪ್ಪನ್ನು ಕ್ಷಮಿಸುವಂತೆ ಕೇಳಿಕೊಂಡರು. ಮನೆಗೆ ಮರಳುವಂತೆ ಬೇಡಿದರು ಆಗ ಪತಿಯ ಮನಸ್ಸನ್ನು ನೋಯಿಸ ಲಾರದೆ ಆಕೆ ಎರಡು ರೂಪ ತಾಳಿದಳಂತೆ ಒಂದರ್ಧದಲ್ಲಿ ಅಗಸ್ತ್ಯನ ಪತ್ನಿಯಾಗಿ (ಲೋಪ ಮುದ್ರೆ), ಇನ್ನೊಂದರ್ಧದಲ್ಲಿ ಲೋಕಪಾವನೆ ಕಾವೇರಿ ನದಿಯಾಗಿ ಇರುವೆನೆಂದಳು. ವರ್ಷಕ್ಕೊಮ್ಮೆ ತುಲಾಸಂಕ್ರಮಣದ ಶುಭಗಳಿಗೆಯಲ್ಲಿ ನೀಲಿನ ಬುಗ್ಗೆಯಾಗಿ ಕಾಣಿಸಿಕೊಂಡು,ನದಿಯಾಗಿ ಹರಿದು ಭೂಮಾತೆಯ ಸೇವೆಯಲ್ಲಿ ತನ್ನ ಜನ್ಮ ಸಾರ್ಥಕಗೊಳಿಸಿ ಕೊಳ್ಳುವ ಕಾರ್ಯದಲ್ಲಿ ಯಶಸ್ವಿಯಾದಳಂತೆ.



**ಸ್ಥಳ ಪುರಾಣ:**

ಒಮ್ಮೆ ಪರಶಿವ ಹಾಗೂ ಪಾರ್ವತಿಯರ ವಿವಾಹದ ಸಂದರ್ಭದಲ್ಲಿ ವಿವಾಹದ ಸಾಕ್ಷಿಗಾಗಿ ಉತ್ತರ ಹಾಗೂ ದಕ್ಷಿಣದ ದಿಕ್ಕುಗಳಿಂದ ಅತಿಥಿಗಳ ಆಗಮನವಾಗಿ ಕೈಲಾಸ ಪರ್ವತದ ಉತ್ತರಭಾಗದಲ್ಲಿ ಒತ್ತಡ ಉಂಟಾಗಲು ಆ ಒತ್ತಡವನ್ನು ಸರಿದೂಗಿಸಲು ಪರಶಿವನು ಅಗಸ್ತ್ಯ ಮುನಿಗಳನ್ನು ಕುರಿತು ದಕ್ಷಿಣದ ವಿಂಧ್ಯ ಪರ್ವತದೆಡೆಗೆ ತೆರಳಲು ಸೂಚಿಸಿ ಕೈಲಾಸ ಪರ್ವತದಲ್ಲಿ ಉಂಟಾಗಿರುವ ಒತ್ತಡವನ್ನು ಕಡಿಮೆ ಮಾಡಲು ತಿಳಿಸಿದನಂತೆ. ಆದರೆ ಅಗಸ್ತ್ಯರಿಗೆ ಇತ್ತ ಶಿವಪಾರ್ವತಿಯರ ವಿವಾಹದಲ್ಲಿ ಭಾಗವಹಿಸುವ ಅವಕಾಶ ಕಳೆದುಕೊಳ್ಳಲು ಮನಸ್ಸಿರಲ್ಲಿ ಹಾಗೂ ವಿಂಧ್ಯದೆಡೆಗೆ ಹೋಗದಿರಲು ಮನಸ್ಸಿರಲಿಲ್ಲ. ಕೊನೆಗೆ ಅವರೊಂದು ಉಪಾಯ ಮಾಡಿ ಶಿವನನ್ನು ಕುರಿತು ನಾನು ನನ್ನ ಸಂಕಲ್ಪದಂತೆ ಧಾರ್ಮಿಕ ಕಾರ್ಯ ಮಾಡಲು ಪವಿತ್ರ ತೀರ್ಥದ ಅಗತ್ಯವಿದೆ ಅದಿಲ್ಲದೆ ನಾನು ಎಲ್ಲೂ ಹೋಗಲಾರೆ ಎನ್ನಲು ಶಿವನು ಅವರ ಮನದಿಂಗಿತವನ್ನು ಅರಿತು ಒಂದು ಕಮಂಡಲದಲ್ಲಿ ಕಾವೇರಿಯನ್ನು (ನದಿ) ತುಂಬಿ ಅಗಸ್ತ್ಯರಿಗೆ ನೀಡಿದನಂತೆ. ಅದನ್ನು ಪಡೆದ ಅವರು ವಿಂಧ್ಯ ಪರ್ವತದೆಡೆಗೆ ಸಾಗಿದನು. ಇತ್ತ ಇಂದ್ರನು ತಾನು ಎಸಗಿದ ಯಾವುದೋ ಪಾಪಕಾರ್ಯ ನಿಮಿತ್ತ ಪವಿತ್ರ ತೀರ್ಥದಲ್ಲಿ ಮಿಂದು ಪಾಪವನ್ನು ತೊಳೆದುಕೊಳ್ಳಲು ಹಾತೊರೆದನು. ಪವಿತ್ರ ತೀರ್ಥಕ್ಕಾಗಿ ಹುಡುಕಾಡಲು ನಾರದರಿಂದ ಅಗಸ್ತ್ಯರ ಬಳಿಯಿರುವ ಪವಿತ್ರ ತೀರ್ಥದ ಬಗ್ಗೆ ತಿಳಿದು ಅವರ ಸಲಹೆ ಮೇರೆಗೆ ಅದನ್ನು ಪಡೆಯಲು ಗಣಪತಿಯ ಸಹಾಯ ಬೇಡಿದನಂತೆ, ಗಣಪತಿಯು ಒಂದು ಕಾಗೆಯ ರೂಪವನ್ನು ಹೊಂದಿ ಅಗಸ್ತ್ಯರನ್ನು ಹಿಂಬಾಲಿಸಲು ಒಮ್ಮೆ ಅಗಸ್ತ್ಯರು ಧ್ಯಾನಾಸಕ್ತರಾಗಿದ್ದಾಗ ಕಾಗೆಯ ರೂಪಿ ಗಣಪ ಅವರ ಕಮಂಡಲದ ಮೇಲೆ ಕುಳಿತು ಅದನ್ನು ಉರುಳಿಸಿ ಅದರೊಳಗಿದ್ದ (ಕಾವೇರಿ) ಪವಿತ್ರ ತೀರ್ಥವು ಹರಿಯುವಂತೆ ಮಾಡಿದನು ಇದನ್ನು ಕಂಡ ಮುನಿಗಳು ಏನಾಗಿದೆಯೆಂದು ತಿಳಿಯುವಷ್ಟರಲ್ಲಿ ಕಾಗೆಯ ರೂಪಿ ಗಣಪನು ಪುಟ್ಟ ಬಾಲಕನಾಗಿ ಕಾಣಿಸಿಕೊಂಡನಂತೆ. ಅಗಸ್ತ್ಯರು ಈ ಕೆಲಸವು ಬಾಲಕನ ತುಂಟತನದಿಂದಾಗಿದೆಯೆಂದು ಭಾವಿಸಿ ಆತನ ತಲೆಯನ್ನು ತಮ್ಮ ಮುಷ್ಟಿಯಿಂದ ಹಿಡಿದು ಗುದ್ದಲು ಪ್ರಯತ್ನಿಸಲು ಮುಂದಾದಾಗ, ಗಣಪನು ತನ್ನ ನಿಜ ರೂಪವನ್ನು ತೋರಲು ತಾವು ಮಾಡಲು ಹೊರಟಿದ್ದ ತಪ್ಪಿಗಾಗಿ ಪಶ್ಚಾತಾಪಪಟ್ಟು ಗಣಪನಲ್ಲಿ ಕ್ಷಮೆ ಯಾಚಿಸಿದರಂತೆ. ಪರಿಹಾರವಾಗಿ ಅಲ್ಲಿಯೇ ಶಿವ ಹಾಗೂ ಗಣಪನ ಪ್ರತಿಷ್ಠಾಪನೆ ಮಾಡಿ ಪೂಜಿಸಿದರಂತೆ ಹಾಗೂ ಅಲ್ಲಿಯೇ ಇದ್ದ ಅಶ್ವಥ ಮರದ ಬಳಿ ಬ್ರಹ್ಮ, ವಿಷ್ಣು,ಮಹೇಶ್ವರರು ಮುನಿಗಳಿಗೆ ದರ್ಶನವಿತ್ತರಂತೆ. ಅಂದಿನಿಂದ ಕಾವೇರಿಯು ಇಲ್ಲಿ ಲೋಕ ಪಾವನೆಯಾಗಿ ಚಿಮ್ಮಿ ನದಿಯಾಗಿ ಹರಿಯುತ್ತಿದ್ದಾಳೆ. ಈ ಘಟನೆಯ ಸಾಕ್ಷಿಯಾಗಿ ಶಿವ ಮತ್ತು ಗಣಪನ ದೇವಾಲಯಗಳು ಇಲ್ಲಿವೆ.

**ಐತಿಹಾಸಿಕ ಹಿನ್ನೆಲೆ :**

ಹಿಂದೆ ಈ ಪ್ರದೇಶವನ್ನು ಕದಂಬರು, ಗಂಗರು, ಹೊಯ್ಸಳರು,ವಿಜಯನಗರದೊಡೆಯರು ಆಳ್ವಿಕೆ ನಡೆಸಿದ್ದಾರೆ. ಮಯೂರವರ್ಮ,ವೆಂಕಪ್ಪಯ್ಯ,ಲಿಂಗರಾಜ, ಶಂಕರ, ನಾರಾಯಣ ಭಟ್ಟ,ನಂಜರಾಜ, ಪಿರಿಯರಾಜ, ಟಿಪ್ಪುಸುಲ್ತಾನ, ದೊಡ್ಡ ವೀರ ರಾಜೇಂದ್ರ ಇತರರು ಈ ಪ್ರದೇಶದ ಅಭಿವೃದ್ಧಿಗೆ ಕಾರಣರಾಗಿದ್ದಾರೆ.

**ಇಲ್ಲಿನ ಪ್ರಮುಖ ದೇವಾಲಯಗಳು ಹಾಗೂ ಪ್ರೇಕ್ಷಣೀಯ ಸ್ಥಳಗಳು :**

**ತಲಕಾವೇರಿ :**

ಇದು ಭಾಗಮಂಡಲದಿಂದ 2 ಕಿ.ಮೀ. ದೂರದಲ್ಲಿ ಬ್ರಹ್ಮಗಿರಿಯಲ್ಲಿದೆ. ಇದು ಕಾವೇರಿಯ (ಮೂಲ) ಉಗಮ ಸ್ಥಾನವಾಗಿದ್ದು ಸಮುದ್ರ ಮಟ್ಟದಿಂದ ಸುಮಾರು ೧೨೭೬ ಮೀಟರ್ ಎತ್ತರದಲ್ಲಿದೆ. ಭಗಂಡೇಶ್ವರ ಕ್ಷೇತ್ರವೆಂದು ಕರೆಯಲಾಗುತ್ತದೆ. ಇಲ್ಲಿ ಪ್ರತೀವರ್ಷವು ತುಲಾಸಂಕ್ರಮಣದ ದಿನ ಇಲ್ಲಿನ ಕುಂಡಿಕೆಯಲ್ಲಿ ಕಾವೇರಿ ತೀರ್ಥೋದ್ಭವವಾಗುತ್ತದೆ. ಸಹಸ್ರಾರು ಸಂಖ್ಯೆಯಲ್ಲಿ ಜನ ಇಲ್ಲಿಗೆ ಆಗಮಿಸಿ ಈ ಘಟನೆಗೆ ಸಾಕ್ಷಿಯಾಗುತ್ತಾರೆ. ಇದರ ಮುಂಭಾಗದ ಕಲ್ಯಾಣಿಯಲ್ಲಿನ ತೀರ್ಥದಲ್ಲಿ ಮಿಂದು ಜನರು ತಮ್ಮ ಪಾಪವನ್ನು ತೊಳೆದುಕೊಳ್ಳುತ್ತಾರೆ.

**ಶಿವನ ದೇವಾಲಯ :**

ವಿಶೇಷ ರೂಪದಲ್ಲಿನ ಶಿವಲಿಂಗವಿರುವ (ಅಗಸ್ತ್ಯೇಶ್ವರ) ಈ ದೇವಾಲಯವು ಸುಂದರವಾಗಿದ್ದು ಪಕ್ಕದಲ್ಲೇ ಇದೆ.

**ವಿನಾಯಕನ ದೇವಾಲಯ :**

ಇದು ಸಹ ಇಲ್ಲಿನ ಪ್ರತಿಯೊಂದು ಘಟನೆಗೆ ಸಾಕ್ಷಿಯಾಗಿದೆ.

**ಬ್ರಹ್ಮಗಿರಿ :**

ಈ ಪ್ರದೇಶವು ದೇವಾಲಯಗಳಿಂದ ಬಲಭಾಗದಲ್ಲಿದ್ದು ಅನೇಕ ಮೆಟ್ಟಿಲುಗಳನ್ನು ಹೊಂದಿದೆ ಇದನ್ನು ಏರಿ ಸಾಗಿದರೆ ಬೆಟ್ಟದ ತುದಿಯನ್ನು ತಲುಪುತ್ತೇವೆ. ಇಲ್ಲಿಂದ ಸುಂದರ ಬೆಟ್ಟಗಳ ಸಾಲಿನ ಪ್ರಾಕೃತಿಕ ಸೊಬಗನ್ನು ಮನದಣಿಯ ಕಾಣಬಹುದು. ಇದು ಸಪ್ತಋಷಿಗಳ ಪಾದ ಸ್ಪರ್ಶವಾದ ಹಾಗೂ ತಪಗೈದ ಪವಿತ್ರ ಸ್ಥಳವಾಗಿದೆ.

**ಭಾಗಮಂಡಲ:**

ಇದು ತಲಕಾವೇರಿಯಿಂದ ಸುಮಾರು ೭ ಕಿ.ಮೀ. ದೂರದಲ್ಲಿದೆ. ಇಲ್ಲಿ ಕಾವೇರಿ ಕನಿಕೆ, ಸುಜ್ಯೋತಿಯ ಸಂಗಮ ಸ್ಥಾನವಾಗಿದ್ದು ದಡದಲ್ಲಿ ಭಗಂಡೇಶ್ವರ,ಗಣಪತಿ, ವಿಷ್ಣು, ಸುಬ್ರಮಣ್ಯ ದೇವಾಲಯಗಳಿವೆ.

**ಇಲ್ಲಿಗೆ ಹತ್ತಿರುವಿರುವ ಇನ್ನಿತರ ಪ್ರಮುಖ ಪ್ರೇಕ್ಷಣೀಯ ಸ್ಥಳಗಳು :**

ಓಂಕಾರೇಶ್ವರ ದೇವಾಲಯ, ಅಬ್ಬೆ (ಅಬ್ಬಿ) ಫಾಲ್ಸ್, ಮಡಿಕೇರಿ ಕೋಟೆ, ರಾಜಾಸೀಟ್, ದುಬಾರೆ ಫಾರೆಸ್ಟ್ (ಆನೆಗಳ ಖೆಡ್ಡಾ, ಎಲಿಫೆಂಟ್ಸ್ ಕ್ಯಾಂಪ್), ಕಾವೇರಿ ನಿಸರ್ಗ ಧಾಮ, ಹಾರಂಗಿ ಡ್ಯಾಮ್, ಬೈಲಕುಪ್ಪೆ ಗೊಲ್ಡನ್ ಟೆಂಪಲ್, ಇರುಪ್ಪಾ ಫಾಲ್ಸ್.ಇನ್ನು ಮುಂತಾದ ಪ್ರೇಕ್ಷಣೀಯ ಸ್ಥಳಗಳಿವೆ.



## ತುಳಸಿ ಹಬ್ಬ

**ದೀಪಾವಳಿ ಕಾರ್ತಿಕ ಮಾಸದಲ್ಲಿ ಶುಕ್ಲ ಪಕ್ಷದ 12 ನೇ ದಿನ ಅಂದರೆ ದ್ವಾದಶಿಯಂದು "ಉತ್ಥಾನದ್ವಾದಶಿ" ಹಬ್ಬವನ್ನು ಆಚರಿಸಲಾಗುತ್ತದೆ. ಈ ಪವಿತ್ರ ದಿನದಂದು ವಿಷ್ಣು ತುಲಸಿಯರ ವಿವಾಹ ಮಾಡುವುದು ಪಾರಂಪರ್ಯವಾಗಿ ಆಚರಿಸಲಾಗುತ್ತದೆ. ತುಳಸಿ ಗಿಡದೊಂದಿಗೆ ಬೆಟ್ಟದ ನೆಲ್ಲಿಕಾಯಿ ತುಂಬಿರುವ,ಗಿಡದ ಕೊಂಬೆಯನ್ನು ನೆಟ್ಟು ಪೂಜಿಸಲಾಗುತ್ತದೆ. ದೀಪಗಳಿಂದ ತುಳಸಿ ಬೃಂದಾವನವನ್ನು ಅಲಂಕರಿಸಲಾಗುವುದು. ಮಣ್ಣಿನ ಹಣತೆ, ನೆಲ್ಲಿಕಾಯಿಯ ದೀಪ ಹಚ್ಚುವುದನ್ನು ನೋಡುವುದೇ ಸಂತೋಷ ತುಲಸಿಯ ಜೊತೆಯಲ್ಲಿ ಭಗವಾನ್ ಶ್ರೀ ಕೃಷ್ಣನ ಮೂರ್ತಿಯನ್ನು ಇಟ್ಟು ಪೂಜಿಸಲಾಗುವುದು. ಅಂದು ದೀಪಾವಳಿ ಹಬ್ಬದಂತೆ ಪಟಾಕಿ-ಬಿರುಸು ಬಾಣ ಹಚ್ಚಿ ಸಂತೋಷಿಸುತ್ತಾರೆ.ಇದನ್ನು ಕಿರು ದೀಪಾವಳಿ ಎಂದು ಹೇಳುತ್ತಾರೆ.**

# ಬಾಣಂ ದೇವಸ್ಥಾನ

- ಶ್ರೀಮತಿ. ಮಾಲಾಪ್ರಸಾದ್
81053 65307




ವಿಶಾಖಪಟ್ಟಣವು ಆಂಧ್ರಪ್ರದೇಶದ ಕರಾವಳಿ ನಗರ ಹಾಗೂ ಕಡಲತೀರವೆ ಅಲ್ಲದೆ, ಸಾಕಷ್ಟು ದೇವಸ್ಥಾನಗಳ ಆಗರವಾಗಿದೆ. ಇಂತಹವೊಂದು ದೇವಸ್ಥಾನವೇ ರಾಮ ನಾರಾಯಣಂ ದೇವಸ್ಥಾನ. ಇದು ವಿಶಾಖಪಟ್ಟಣದಿಂದ 35 ಕಿಲೋ ಮೀಟರ್ ದೂರದಲ್ಲಿರುವ ವಿಜಯನಗರಂ ಎಂಬ ಊರಿನಲ್ಲಿದೆ.

ಬಾಣಂ ದೇವಸ್ಥಾನದಲ್ಲಿ ರಾಮನಾರಾಯಣಂ ಮೂಲದೇವರು. ಸುಮಾರು ಹದಿನೈದು ಎಕರೆಗಳಷ್ಟು ವಿಶಾಲ ವಾದ ಪ್ರದೇಶದಲ್ಲಿ ನಿರ್ಮಿತವಾಗಿದೆ. ಆಧ್ಯಾತ್ಮಿಕತೆಯನ್ನು ಜನರಲ್ಲಿ ಬೆಳೆಸುವ ಉದ್ದೇಶದಿಂದಾಗಿ ಎನ್.ಸಿ.ಎಸ್. ಚಾರಿಟಬಲ್ ಟ್ರಸ್ಟ್‌ನವರ ಸತತ ಐದೂವರೆ ವರ್ಷದ ಫಲಿತವೇ ಈ ದೇವಸ್ಥಾನವಾಗಿದೆ. ಈ ದೇವಸ್ಥಾನದ ವಿಶೇಷತೆಯೆಂದರೆ ಈ ಮಂದಿರವು ಕೋದಂಡರಾಮನ ಕೈಯಲ್ಲಿರುವ ಕೋದಂಡ ಅಂದರೆ ಬಾಣದ ಆಕಾರದಲ್ಲಿದೆ. ರಾತ್ರಿ ಹೊತ್ತಿನಲ್ಲಂತೂ ದೀಪಗಳ ಅಲಂಕಾರದಿಂದ ಸ್ವರ್ಗವೇ ಧರೆಗಿಳಿದಂತೆ ಇರುತ್ತದೆ.

ವಾಲ್ಮೀಕಿಯಿಂದ ರಚಿಸಲ್ಪಟ್ಟ ರಾಮಾಯಣವು ನಮ್ಮ ಹಿಂದೂಗಳಿಗೆ ಪವಿತ್ರ ಗ್ರಂಥವಾಗಿದೆ. ತ್ರೇತಾಯುಗದಲ್ಲಿ ನಡೆದ ರಾಮಾಯಣದ ಸಂಪೂರ್ಣ ಸನ್ನಿವೇಶಗಳನ್ನು ಶಿಲ್ಪ ಕಲೆಗಳ ಮೂಲಕ ಚಿತ್ರಿಸಿದ್ದಾರೆ. ರಾಮಾಯಣದ ಒಂದೊಂದು ಪ್ರಸಂಗವೂ, ನಮ್ಮ ಮನ ತಾಕುವಂತೆ ನಮ್ಮ ಕಣ್ಮುಂದೆ ನಿಜವಾಗಿಯೂ ನಡೆಯುತ್ತಿದೆ ಎನ್ನುವಷ್ಟು ಸಹಜವಾಗಿ ಚಿತ್ರ ಲಿಸಲಾಗಿದೆ.

ದೇವಸ್ಥಾನವು ವಿಶಾಲವಾದ ಪ್ರಾಂಗಣದಲ್ಲಿ ನಿರ್ಮಿತ ವಾಗಿದ್ದು, ಮೊದಲಿಗೆ ಆವರಣದಲ್ಲಿ ಕಾಲಿಡುತ್ತಿದ್ದಂತೆಯೇ ಸಿದ್ಧಿ ವಿನಾಯಕ ದರ್ಶನ ನೀಡುತ್ತಾನೆ. ಇಲ್ಲಿಂದ ಮುಖ್ಯ ದೇವ ಸ್ಥಾನವು ತಲುಪಲು ಅರ್ಧ ಕಿಲೋ ಮೀಟರ್ ದೂರದಲ್ಲಿದೆ. ಹೋಗುವ ಮಾರ್ಗ ಮಧ್ಯೆ ಶ್ರೀ ಮಹಾಲಕ್ಷ್ಮಿ ಹಾಗೂ ಶ್ರೀಜ್ಞಾನ ಸರಸ್ವತಿಯ ಬಹುದೊಡ್ಡದಾದ ವಿಗ್ರಹಗಳಿವೆ, ನಡೆದುಕೊಂಡು ಹೋಗುವ ದಾರಿಯ ಎರಡೂ ಕಡೆ ಹಸಿರು ಬಣ್ಣದ ಹೂದೋಟ ಗಳು ಮನಸೆಳೆಯುತ್ತವೆ.ನಮ್ಮ ಹಿಂದೂ ಧರ್ಮದ ಪ್ರಕಾರ ಪವಿತ್ರ ಮರಗಳಾದ ನಕ್ಷತ್ರ, ನಾರಾಯಣ, ರಾಶಿ, ನವಗ್ರಹ, ವಿನಾಯಕ, ಸಪ್ತರ್ಷಿ, ಪಂಚವಟಿ ಮರಗಳನ್ನು ದೇಶದ ಹಲವು ಭಾಗಗಳಿಂದ ತಂದು ಇಲ್ಲಿ ಬೆಳೆಸಲಾಗಿದೆ ಸುತ್ತಲೂ ಬಣ್ಣ ಬಣ್ಣದ ಕಾರಂಜಿಗಳು ರಂಜಿಸುತ್ತವೆ.

ಎರಡು ಅಂತಸ್ತಿನ ಈ ಬೃಹದಾಕಾರದ ಆಲಯದಲ್ಲಿ ಎಡಗಡೆಗೆ ಶ್ರೀಮಹಾವಿಷ್ಣುವಿನ ಚಿಕ್ಕ ಆಲಯವಿದೆ. ಬಲಗಡೆಗೆ ಮೂಲ ದೇವರು ಶ್ರೀರಾಮ ನಾರಾಯಣನ ಆಲಯವಿದೆ. ಈ ಎರಡೂ ಆಲಯಗಳು ಸಂಧಿಸಲು ಬಾಣಾಕಾರವಾಗುತ್ತದೆ. ಈ ಸಂಧಿಸುವ ಪ್ರಣವ ಮಾರ್ಗಗಳಲ್ಲಿ ರಾಮಾಯಣದ ಬಾಲ್ಯ ಕಾಂಡದಿಂದ ಹಿಡಿದು ಯುದ್ಧಕಾಂಡದವರೆಗೂ ಎಲ್ಲಾ ಏಳುಕಾಂಡಗಳಲ್ಲಿ ಪ್ರಮುಖ 70 ಸನ್ನಿವೇಶಗಳನ್ನು ಬಹಳ ಅದ್ಭುತವಾಗಿ ಶಿಲ್ಪ ಕಲೆಗಳ ಮೂಲಕ ಚಿತ್ರಿಸಿದ್ದಾರೆ. ರಾಮಾ ಯಣದ ಬಗ್ಗೆ ಇದು ಇಂದಿನ ಪೀಳಿಗೆಗೆ ಹಾಗೂ ಮುಂಬರುವ ಪೀಳಿಗೆಗೆ ತುಂಬಾ ಉಪಯುಕ್ತವಾದ ಮಾಹಿತಿಯಾಗಿದೆ. ಬಾಣಾಕೃತಿಯ ಕೊನೆಯಲ್ಲಿ 62 ಅಡಿ ಎತ್ತರದ ಅಭಯಾಂ ಜನೇಯ ವಿಗ್ರಹವನ್ನು ಪ್ರತಿಷ್ಠಾಪಿಸಿದ್ದಾರೆ. ಹನುಮಂತನ ಮೂರ್ತಿಗೆ ರಾತ್ರಿ ಹೊತ್ತು ತ್ರೀಡಿ ಲೇಸರ್ ಎಫೆಕ್ಟ್ ಲೈಟನ್ನು ಬಿಡಲಾಗುತ್ತದೆ.

# ಶ್ರೀ ಪದ್ಮಾವತಿ ಅಮ್ಮನವರ ಆಲಯ, ತಿರುಚಾನೂರು

ಶ್ರೀಪದ್ಮಾವತಿ ಅಮ್ಮನವರ ಆಲಯ ತಿರುಪತಿಯ ಸಮೀಪದಲ್ಲಿರುವ ತಿರುಚಾನೂರಿ ನಲ್ಲಿದೆ. ಇದನ್ನು ಅಲಮೇಲುಮಂಗಾಪುರಂ ಎಂದು ಕರೆಯುತ್ತಾರೆ. ತಿರುಮಲೆಯ ಶ್ರೀನಿವಾಸನನ್ನು ದರ್ಶಿಸಿಕೊಂಡ ನಂತರ ಶ್ರೀ ಪದ್ಮಾವತಿ ಅಮ್ಮನವರನ್ನು ದರ್ಶಿಸಿಕೊಳ್ಳದಿದ್ದರೆ ಯಾತ್ರೆ ಫಲಕಾರಿಯಾಗುವುದಿಲ್ಲವೆಂದು ಭಕ್ತರ ನಂಬಿಕೆ. ಈ ಆಲಯದ ಪ್ರಾಂಗಣದೊಳಗೆ ಶ್ರೀಕೃಷ್ಣ, ಶ್ರೀಸುಂದರರಾಜಸ್ವಾಮಿ, ಶ್ರೀಸೂರ್ಯನಾರಾಯಣ ಸ್ವಾಮಿಯ ದೇವಾಲಯಗಳನ್ನು ನೋಡಬಹುದಾಗಿದೆ. ತಿರುಪತಿಯಿಂದ ಪ್ರತೀ 5 ನಿಮಿಷಗಳಿಗೊಮ್ಮೆ ವಾಹನಗಳ ಸೌಕರ್ಯವಿದೆ. ಇದು ತಿರುಪತಿ ಬಸ್‌ಸ್ಟ್ಯಾಂಡ್‌ನಿಂದ 5 ಕಿ.ಮೀ. ದೂರದಲ್ಲಿದೆ.ತ್ರಿಮೂರ್ತಿಗಳನ್ನು ಪರೀಕ್ಷಿಸುವ ಸಮಯದಲ್ಲಿ ಕೋಪೋದ್ರಿಕ್ತನಾದ ಭೃಗು ಮಹರ್ಷಿ ವಿಷ್ಣುವಿನ ವಕ್ಷಃಸ್ಥಳವನ್ನು ಕಾಲಿನಿಂದ ಒದ್ದ. ತನ್ನ ನಿವಾಸ ಸ್ಥಾನವನ್ನು ಅವಮಾನಗೊಳಿಸಿದ್ದರಿಂದ ಲಕ್ಷ್ಮೀದೇವಿ ಕೋಪಿಸಿಕೊಂಡು ತನ್ನ ತವರು ಮನೆ ಯಾದ ಕೊಲ್ಹಾಪುರಕ್ಕೆ ಹೊರಟು ಹೋದಳು. ಲಕ್ಷ್ಮೀ ದೇವಿಗಾಗಿ ಶ್ರೀನಿವಾಸನು ತಿರುಮಲೆಯಲ್ಲಿ 12 ವರ್ಷಗಳ ಕಾಲ ಕಠೋರವಾದ ತಪಸ್ಸು ಮಾಡಿದ. ಪತಿಯ ತಪಸ್ಸಿಗೆ ಮೆಚ್ಚಿದ ಮಹಾಲಕ್ಷ್ಮಿ ತಿರುಚಾನೂರಿನ ಪದ್ಮಸರೋವರದಲ್ಲಿ ಕಾರ್ತೀಕ ಶುಕ್ಲ ಪಂಚಮಿಯ ಶುಕ್ರವಾರ, ಉತ್ತರಾಷಾಢ ನಕ್ಷತ್ರದಲ್ಲಿ ಬಂಗಾರದ ಪದ್ಮದಲ್ಲಿ ಅವತರಿಸಿದಳು. ಆ ಪದ್ಮಾವತಿಯನ್ನು ಶ್ರೀನಿವಾಸನು, ವಿವಾಹ ಮಾಡಿಕೊಂಡನು.



ಇಷ್ಟೇ ಅಲ್ಲದೆ ಈ ಪ್ರಾಂಗಣದಲ್ಲಿ ತಿರುಮಲೆ ತಿರುಪತಿ ದೇವಸ್ಥಾನಗಳ ವತಿಯಿಂದ ವೇದಪಾಠ ಶಾಲೆಯನ್ನು ನಡೆಸಲಾಗುತ್ತಿದೆ. ಇಲ್ಲಿ ಸುಮಾರು 70 ಜನ ವಿದ್ಯಾರ್ಥಿಗಳು ವೇದಗಳನ್ನು ಹಾಗೂ ಉಪನಿಷದ್ಗಳನ್ನು ಕಲಿಯುತ್ತಿದ್ದಾರೆ. ವಿದ್ಯಾರ್ಥಿಗಳಿಗೆ ಬೇಕಾದ ಎಲ್ಲಾ ಸಕಲ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ವೇದಶಾಲೆಯ ಪಕ್ಕದಲ್ಲಿ ಬಹು ದೊಡ್ಡ ದಾದ ಧ್ಯಾನ ಮಂದಿರವನ್ನು ನಿರ್ಮಿಸಿದ್ದಾರೆ. ಇದರ ಪಕ್ಕದಲ್ಲಿ ಭೋಜನ ಹಾಲಿದೆ. ಇಂತಹ ಒಂದು ಅದ್ಭುತವಾದ ದೇವ ಸ್ಥಾನವನ್ನು ದರ್ಶಿಸುವುದರ ಮೂಲಕ ಧನ್ಯರಾಗುತ್ತೇವೆ.

# ವೇದ ಪಾರಂಗತನಾದ ವಸುಧೇಂದ್ರ ತೀರ್ಥರು

– ಶ್ರೀಧರ ರಾಯಸಂ

ಮಂತ್ರಾಲಯದ ಶ್ರೀರಾಘವೇಂದ್ರ ಸ್ವಾಮಿಗಳ ಮರಿ ಮೊಮ್ಮಕ್ಕಳಾದ ಶ್ರೀವಾದೀಂದ್ರತೀರ್ಥರು "ಗುರು ಗುಣ ಸ್ತವನ." ಕಾವ್ಯವನ್ನು ರಚಿಸಿ, ರಾಘವೇಂದ್ರ ಸ್ವಾಮಿಗಳ ಬೃಂದಾವನದ ಮುಂದೆ ನಿಂತು ಭಕ್ತಿಯಿಂದ ಸ್ತೋತ್ರ ಮಾಡಿದರು. ಶ್ರೀ ವಾದಿಂದ್ರರು ಕಾವ್ಯದ ಕೊನೆಯ ಪದ್ಯವಾದ "ವ್ಯಾಸೇನ ವ್ಯಸ್ತಬೀಜ"ಪದ್ಯವನ್ನು ಓದುತ್ತಾ "ಅದ್ಯ ಶ್ರೀರಾಘವೇಂದ್ರಾದ್ವಿಲಸತಿ ಫಲಿತೋ ಮಧ್ವಸಿದ್ಧಾಂತ ಶಾಖೀ" ಎಂದು ಕೊನೆಯ ಚರಣ ಹೇಳಿದ ಕೂಡಲೇ, ಬೃಂದಾವನಸ್ಥರಾದ ರಾಯರು ಸಂತೋಷದಿಂದ ತಲೆಯಾಡಿಸಿದಂತೆ, ವೃಂದಾವನವೇ ಕೆಲ ಕಾಲ ಅಲುಗಾಡಿದ ಅದ್ಭುತ ದೃಶ್ಯ ಶ್ರೀವಾದೀಂದ್ರತೀರ್ಥರ ಪಾಂಡಿತ್ಯದ ಹೆಗ್ಗಳಿಕೆ !!! ಇಂತಹ ಶ್ರೀವಾದೀಂದ್ರತೀರ್ಥರ ಅದ್ಭುತ ಗ್ರಂಥ.

ಗುರು ಗುಣ ಸ್ತವನ ಕಾವ್ಯಕ್ಕೆ ಅಧ್ಭುತ ವ್ಯಾಖ್ಯಾನ ಮಾಡಿದ ಮಹಾನುಭಾವರು ಶ್ರೀವಸುಧೇಂದ್ರತೀರ್ಥರು.

ಶ್ರೀವಸುಧೇಂದ್ರತೀರ್ಥರು ಮಧ್ವಾಚಾರ್ಯರ ಸರ್ವಜ್ಞ ಪೀಠದಲ್ಲಿ 22 ನೇ ಯತಿಗಳಾಗಿ ಹಾಗೂ ಶ್ರೀರಾಘವೇಂದ್ರ ಸ್ವಾಮಿಗಳ ನಂತರ 6 ನೇ ಯತಿಗಳಾಗಿ, ರಾಘವೇಂದ್ರಸ್ವಾಮಿಗಳ ಮಠದ ಪರಂಪರೆಯಲ್ಲಿ ಬಂದ ಯತಿಗಳು. ವಾದೀಂದ್ರ ತೀರ್ಥರ ಪೂರ್ವಾಶ್ರಮದ ಸಹೋದರರಾದ ವೇಣು ಗೋಪಾಲಾಚಾರ್ಯರಿಗೆ ಮೂರು ಪುತ್ರರಿದ್ದರು.

ಮೂರೂ ಪುತ್ರರು ಯತಿಗಳಾಗಿದ್ದುದು ವಿಶೇಷ!!

ಪುರುಷೋತ್ತಮಾಚಾರ್ಯ, ಬಲರಾಮಾಚಾರ್ಯ, ಲಕ್ಷ್ಮೀ ನಾರಾಯಣಾಚಾರ್ಯ, ಕ್ರಮವಾಗಿ, ವಸುಧೇಂದ್ರತೀರ್ಥರು ವರದೇಂದ್ರತೀರ್ಥರು, ಭುವನೇಂದ್ರತೀರ್ಥರು ಎಂದು ಯತಿಗಳಾಗಿ ನಾಮಾಂಕಿತರಾದರು. ಈ ಮೂರೂ ಯತಿಗಳು ಸರ್ವಜ್ಞಪೀಠ ಅಲಂಕರಿಸಿದ ಮಹನೀಯರು.

ಕ್ರಿ.ಶ. 1746 ರಲ್ಲಿ, ಶ್ರೀವಾದೀಂದ್ರತೀರ್ಥರು ಪುರುಷೋತ್ತಮಾಚಾರ್ಯರಿಗೆ ಆಶ್ರಮ ವಹಿಸಿಕೊಟ್ಟು "ವಸುಧೇಂದ್ರ ತೀರ್ಥರೆಂದು" ನಾಮಾಂಕಿತ ಮಾಡಿದರು. ಗುರುಗಳ ಜೊತೆಗೆ ಸದಾ ವಸುಧೇಂದ್ರತೀರ್ಥರು ಸಂಚಾರ ಮಾಡಿ, ಅನೇಕ ಮಧ್ವ ಶಾಸ್ತ್ರಗಳನ್ನು ಪ್ರಚಾರ ಮಾಡಿದರು. ಆಶ್ರಮ ಸ್ವೀಕರಿಸಿದ ಕೆಲ ಕಾಲ ನಂತರ ಮಂತ್ರಾಲಯದಲ್ಲೇ ನೆಲಸಿ, ದೇವತಾರ್ಚನೆ ರಾಯರ ಅಭಿಷೇಕ, ಪೂಜೆ, ಜಪ, ತಪ, ಮಾಡುತ್ತಾ, ಶಿಷ್ಯರಿಗೆ ನಿತ್ಯ ಪಾಠ ಪ್ರವಚನ ಹೇಳುವುದರಲ್ಲಿ ಆಸಕ್ತರಾದರು. ಶ್ರೀವಸುಧೇಂದ್ರತೀರ್ಥರು ನಾಲ್ಕು ವೇದಗಳನ್ನು ಕರತಲಾಮಲಕ ಮಾಡಿಕೊಂಡ ಮಹಾಪಂಡಿತರು. ವೇದದಲ್ಲಿ ಪಾರಂಗತರಾಗಿ ಶಿಷ್ಯವೃಂದಕ್ಕೆ ಗೌರವದ ಗುರುಗಳಾಗಿದ್ದುದು ವಿಶೇಷ !

ಆದೋನಿ ನವಾಬ ಸಬದಲ್ ಜಂಗ್ ಬಹಧ್ದೂರ್ ಮತ್ತು ಬ್ರಿಟೀಷರ ಸರ್ಕಾರದಿಂದ ನಿರಂತರ ಪ್ರಯತ್ನದ ಫಲ ವಾಗಿ ಮಂತ್ರಾಲಯದ ಸ್ಥಳ ಮಠಕ್ಕೆ ಉಳಿಸಿಕೊಂಡ



ಮಂತ್ರಾಲಯದ ಶ್ರೀರಾಘವೇಂದ್ರ ಸ್ವಾಮಿಗಳ ಮರಿ ಮೊಮ್ಮಕ್ಕಳಾದ ಶ್ರೀವಾದೀಂದ್ರತೀರ್ಥರು "ಗುರು ಗುಣ ಸ್ತವನ." ಕಾವ್ಯವನ್ನು ರಚಿಸಿ, ರಾಘವೇಂದ್ರ ಸ್ವಾಮಿಗಳ ಬೃಂದಾವನದ ಮುಂದೆ ನಿಂತು ಭಕ್ತಿಯಿಂದ ಸ್ತೋತ್ರ ಮಾಡಿದರು. ಶ್ರೀ ವಾದಿಂದ್ರರು ಕಾವ್ಯದ ಕೊನೆಯ ಪದ್ಯವಾದ "ವ್ಯಾಸೇನ ವ್ಯಸ್ತಬೀಜ"ಪದ್ಯವನ್ನು ಓದುತ್ತಾ "ಅದ್ಯ ಶ್ರೀರಾಘವೇಂದ್ರಾ ದ್ವಿಲಸತಿ ಫಲಿತೋ ಮಧ್ವಸಿದ್ಧಾಂತ ಶಾಖೀ" ಎಂದು ಕೊನೆಯ ಚರಣ ಹೇಳಿದ ಕೂಡಲೇ, ಬೃಂದಾವನಸ್ಥರಾದ ರಾಯರು ಸಂತೋಷದಿಂದ ತಲೆಯಾಡಿಸಿದಂತೆ, ವೃಂದಾವನವೇ ಕೆಲ ಕಾಲ ಅಲುಗಾಡಿದ ಅದ್ಭುತ ದೃಶ್ಯ ಶ್ರೀವಾದೀಂದ್ರತೀರ್ಥರ ಪಾಂಡಿತ್ಯದ ಹೆಗ್ಗಳಿಕೆ !!! ಇಂತಹ ಶ್ರೀವಾದೀಂದ್ರತೀರ್ಥರ ಅದ್ಭುತ ಗ್ರಂಥ.

ಮಹಾನುಭಾವರು. ರಾಮ ಭೂಪಾಲ, ಪಾಳೇಗಾರ ಒಂದು ಗ್ರಾಮ ಸೋಮನಹಳ್ಳಿ ಮಠಕ್ಕೆ ನೀಡಿದ್ದು ದಾಖಲೆ ಯಾಯಿತು.

ಶ್ರೀವಸುಧೇಂದ್ರತೀರ್ಥರು, ತಂತ್ರಸಾರ ಸಂಗ್ರಹಕ್ಕೆ ಅದ್ಭುತ ಟಿಪ್ಪಣಿ, ಗುರು ಗುಣ ಸ್ತವನಕ್ಕೆ ಅದ್ಭುತ ವ್ಯಾಖ್ಯಾನ ಮತ್ತು ಶ್ರೀಮಧ್ವಾಚಾರ್ಯರಿಂದ ಹಿಡಿದು ತಮ್ಮ ಗುರುಗಳಾದ ಶ್ರೀವಾದೀಂದ್ರತೀರ್ಥರು ವರಗೆ ಬರೆದ ಅದ್ಭುತ ದಂಡಕ." ಗುರು ಸ್ತೋತ್ರದಂಡಕ" ರಚಿಸಿ, ತಮ್ಮ ಗೌರವ ಭಕ್ತಿ ಅಭಿವ್ಯಕ್ತಿ ಪ್ರದರ್ಶಸಿದ ಮಹನೀಯರು.

ಶ್ರೀಮಧ್ವಂ ಪದ್ಮನಾಭಂ ನರಹರಿ ಮುನಿಪ ಮಾಧವ ಅಕ್ಷೋಭ್ಯತೀರ್ಥಂ ವಂದೇ
ಶ್ರೀ ಮತ್ ಜಯಾರ್ಯಂ ಶ್ರುತಗುಣ ಮುನಿವರ ಮತ ವಿದ್ಯಾಧಿರಾಜಂ ಕವೀಂದ್ರಂ
ವಾಗೀಶಂ ರಾಮಚಂದ್ರಂ ವಿಭುದೇಂದ್ರ ಜಿತಾ ಮಿತ್ರವರ್ಯಂ
ರಕ್ಷಾ, ಶಿಕ್ಷಾ ದಕ್ಷೌ ರಘುನಂದನ ತನ್ಯ ಸುರೇಂದ್ರೌ ಜಯೀಂದ್ರ, ಸುಧೀಂದ್ರಂ
ಶ್ರೇಷ್ಠಂ ಶ್ರೀರಾಘವೇಂದ್ರಂ ಸಕಲಗುಣನಿಧಿಂ ಧೀರ ಯೋಗೀಂದ್ರ ತೀರ್ಥಂ
ಸುರೀಂದ್ರಂ ಸದ್ಗುಣಾಢ್ಯಂ ರಘುಪತಿ ಚರಣ ಧ್ಯಾ ನಾದೂತಾಘಸಂಘಂ
ಶ್ರೀರಾಮ ವ್ಯಾಸ ಪೂಜಾಮಿತಾಮತಿ ಸುಮತೀಂದ್ರಾಭಿ ಸಮ್ಯಮೀಂದ್ರಂ
ಭಕ್ತ್ಯಾ ಪ್ರಸ್ತುಮ್ಯಾಯುಪೇಂದ್ರ ಗುರುವರಾಮಪಿ ಪ್ರೌಢ ವಾದೀಂದ್ರವರ್ಯಂ

ಶ್ರೀವಸುಧೇಂದ್ರ ತೀರ್ಥರು 11 ವರ್ಷ ಸರ್ವಜ್ಞ ಪೀಠ ಅಲಂಕರಿಸಿ, ಮಧ್ವಶಾಸ್ತ್ರ ಪ್ರಚಾರ ಮಾಡಿ (1750 -1761 ) ಬಲರಾಮಾಚಾರ್ಯರಿಗೆ ಆಶ್ರಮ ನೀಡಿ, ವರದೇಂದ್ರತೀರ್ಥರೆಂದು ನಾಮಾಂಕಿತ ಮಾಡಿದರು. ಶ್ರೀವಸುಧೇಂದ್ರತೀರ್ಥರು ಬಳ್ಳಾರಿ ಜಿಲ್ಲೆ ಸಿರುಗುಪ್ಪಾ ತಾಲೂಕು ಕೆಂಚನಗುಡ್ಡ, ತುಂಗಭದ್ರ ನದಿ ತೀರದಲ್ಲಿ "ಆಶ್ವೀಜ ಕೃಷ್ಣ ಸಪ್ತಮಿ" ಬೃಂದಾವನ ಸ್ಥರಾದರು. ಇವರ ಶಿಷ್ಯರಾದ ವರದೇಂದ್ರತೀರ್ಥರು ಅವತಾರ ತ್ರಯವಾದ ಪ್ರಾಣದೇವರ ವಿಗ್ರಹವನ್ನು ಬೃಂದಾವನದ ಎದುರಿಗೆ ಪ್ರತಿಷ್ಠಾಪಿಸಿದ್ದಾರೆ. ಪ್ರಾಣ ದೇವರು ಸೀತಾದೇವಿ ನೀಡಿದ ಆಭರಣಗಳನ್ನು ಧರಿಸಿ



ಬಲಗೈಯಲ್ಲಿ ರುದ್ರದೇವರ ಲಿಂಗಾಕೃತಿ ಹಿಡಿದಿರುವುದು ಕಾಣಬಹುದು.

ವಸುಧಾತಲವಿಖ್ಯಾತಂ ವೈರಾಗ್ಯಾದಿಗುಣಾರ್ಣವಮ್
ವೇದ ವೇದಾಂಗಚತುರಂ ವಸುಧೇಂದ್ರ ಗುರುಂಭಜೇ॥


## ಸ್ವಾಮಿಯ ಆಲಯದಲ್ಲಿ ಸೆಲ್‌ಫೋನ್ ನಿಷೇಧ

ತಿರುಮಲೆ ಸ್ವಾಮಿಯವರ ಆಲಯದಲ್ಲಿ ಸೆಲ್ ಫೋನ್,ಕೆಮರಾ, ಇತರ ಎಲೆಕ್ಟ್ರಾನಿಕ್ ವಸ್ತುಗಳನ್ನು ನಿಷೇಧಿಸಲಾಗಿದೆ. ನಿಷೇಧಿಸಿದ ವಸ್ತುಗಳೊಂದಿಗೆ ಭಕ್ತರು ಕಂಡು ಬಂದರೆ ಅಂತಹ ವ್ಯಕ್ತಿಯರನ್ನು ಆಲಯದೊಳಗೆ ಅನುಮತಿಸಲಾಗುವುದಿಲ್ಲ. ಆದ್ದರಿಂದ ಭಕ್ತರು ತಿ.ತಿ.ದೇ.ಯೊಂದಿಗೆ ಸಹಕರಿಸಬೇಕಾಗಿ ಕೋರಲಾಗಿದೆ.

- ಕಾರ್ಯನಿರ್ವಹಣಾಧಿಕಾರಿ

ತುಮಕೂರು ಜಿಲ್ಲೆ,ಗುಬ್ಬಿ ತಾಲ್ಲೂಕಿಗೆ ಸೇರುವ ಮೂಕನಹಳ್ಳಿ ಪಟ್ಟಣವು ತಾಲ್ಲೂಕು ಕೇಂದ್ರ ಗುಬ್ಬಿಯಿಂದ ಐದು ಕಿ.ಮೀ. ದೂರದಲ್ಲಿರುವ ಗ್ರಾಮ.ಮೂಕನಹಳ್ಳಿಯಲ್ಲಿ ಶ್ರೀಲಕ್ಷ್ಮೀ ನರಸಿಂಹಸ್ವಾಮಿ, ರಾಮೇಶ್ವರ, ಕಲ್ಲೇಶ್ವರ ಹಾಗೂ ಮಣ್ಣೆಮ್ಮ ದೇವಾಲಯಗಳಿವೆ.

**ಲಕ್ಷ್ಮೀನರಸಿಂಹ ದೇವಾಲಯ**

ಮೂಕನಹಳ್ಳಿ ಪಟ್ಟಣದಲ್ಲಿರುವ ಶ್ರೀಲಕ್ಷ್ಮೀನರಸಿಂಹ ದೇವಾಲಯವು ತನ್ನದೇ ಆದ ವಿಶೇಷವನ್ನು ಹೊಂದಿರುವ ಆಲಯವಾಗಿರುತ್ತದೆ. ವಿವಿಧ ದೇವಾಲಯಗಳಲ್ಲಿ ನರಸಿಂಹಸ್ವಾಮಿಯು ಸಾಮಾನ್ಯವಾಗಿ ಆಸೀನ, ಸ್ಥಾನಕ ಭಂಗಿಯಲ್ಲಿರುತ್ತಾನೆ. ಇನ್ನೂ ಹಲವೆಡೆ ಸ್ತಂಭರೂಪದಲ್ಲಿ ನಿರಾಕಾರವಾಗಿ ಸಾಲಿಗ್ರಾಮ ರೂಪದಲ್ಲಿಯೂ ಪೂಜೆಗೊಳ್ಳುತ್ತಿರುವನು.

ಬಾದಾಮಿಯ ಗುಹಾಂತರ ದೇವಾಲಯದಲ್ಲಿ ನರಸಿಂಹನು ಸ್ಥಾನಕ ಭಂಗಿಯಲ್ಲಿರುವನು. ಹಾಗೆಯೇ ತುರುವೇಕೆರೆಯಲ್ಲಿರುವ ನರಸಿಂಹಸ್ವಾಮಿಯು ಶ್ರೀಲಕ್ಷ್ಮಿಯೊಡನೆ ನಿಂತಿರುವ ಭಂಗಿಯಲ್ಲಿರುವನು.

ಮೂಕರಾಯನ ಪಟ್ಟಣದ ಸ್ವಾಮಿಯೂ ನಿಲುವಿನ ಭಂಗಿಯಲ್ಲಿದ್ದು, ಎಡಬಲಗಳಲ್ಲಿ ಶ್ರೀದೇವಿ ಭೂದೇವಿಯರ ಸಣ್ಣ ಶಿಲ್ಪಗಳನ್ನು ಬಿಡಿಸಲಾಗಿದೆ. ದೇವಾಲಯದಲ್ಲಿ ಲಕ್ಷ್ಮೀದೇವಿಯ ವಿಗ್ರಹವೂ ಇದೆ.

ದೇವಾಲಯವು 150 **x** 120 ಅಡಿ ಅಗಲದ ಪ್ರಾಕಾರದಲ್ಲಿದ್ದು ಪ್ರಾಕಾರದ ಗೋಡೆಯ ಮೇಲೆ ಇತ್ತೀಚೆಗೆ 56 ದೇವತಾ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದೆ. ದೇವಾಲಯವು ಪ್ರವೇಶದ್ವಾರವನ್ನು ಹೊಂದಿದ್ದು ಅಂದವಾದ ರಾಯಗೋಪುರವಿದೆ.

ಈ ದೇವಾಲಯದ ಸಮೀಪದಲ್ಲಿಯೇ ರಾಮೇಶ್ವರ ದೇವಾಲಯವೂ ಸಹ ಇದೆ. ಮೂಕನಹಳ್ಳಿ ಲಕ್ಷ್ಮೀನರಸಿಂಹ ಸ್ವಾಮಿಯ ದೇವಾಲಯದ ಬಗ್ಗೆ ಇಲ್ಲಿ ಒಂದು ಐತಿಹ್ಯವಿದೆ. ಇದರ ಪ್ರಕಾರ ಲಕ್ಷ್ಮೀನರಸಿಂಹಸ್ವಾಮಿ ಚನ್ನರಾಯಪಟ್ಟಣ ಬಳಿಯ ದಿಡಗ ಎಂಬ ಗ್ರಾಮದಲ್ಲಿತ್ತೆಂದೂ, ಅಲ್ಲಿ ನಡೆದ ಗಲಭೆಯಲ್ಲಿ ವಿಗ್ರಹ ನಾಶವಾಗಬಾರದೆಂದು ಸ್ತ್ರೀಯೊಬ್ಬಳು ಪುರುಷ ವೇಷದಲ್ಲಿ ಎತ್ತಿನಗಾಡಿಯಲ್ಲಿ ಹುಲ್ಲಿನ ಮೆದೆ ನಡುವೆ ಸಾಗಿಸುತ್ತಾ ಮೂಕನಹಳ್ಳಿ ಪಟ್ಟಣಕ್ಕೆ ಬಂದಾಗ ಗಾಡಿಯ ಮೂಕು ಹಾಲಿತ್ತಂತೆ . ಆಗ ಆಕೆಯು ಅಲ್ಲಿಯೇ ವಿಶ್ರಾಂತಿ ತೆಗೆದುಕೊಂಡಳಂತೆ. ಆ ದಿನ ಊರಿನ ಗೌಡನಿಗೆ ಸ್ವಪ್ನವಾಗಿ ನರಸಿಂಹಸ್ವಾಮಿಯನ್ನು ಪ್ರತಿಷ್ಠಾಪಿಸಿದನೆಂದು ಸ್ಥಳಪುರಾಣದಿಂದ ತಿಳಿದು ಬರುತ್ತದೆ.

ಮೂಕನಹಳ್ಳಿಯ ಶ್ರೀಲಕ್ಷ್ಮೀನರಸಿಂಹ ಸ್ವಾಮಿಯ ಬ್ರಹ್ಮ ರಥೋತ್ಸವವು



# ಮೂಕನಹಳ್ಳಿ ಪಟ್ಟಣದ ಶ್ರೀ ಲಕ್ಷ್ಮೀನರಸಿಂಹ ದೇವಾಲಯ

- ಕೆಂಗೇರಿ ಚಕ್ರಪಾಣಿ
94483 86886

ಪ್ರತಿವರ್ಷ ಚೈತ್ರಮಾಸದ ಪೂರ್ಣಿಮೆಯ ದಿನ ಬೆಂಗಳೂರು ಕರಗದ ದಿನ ಬಹಳ ಅದ್ದೂರಿಯಾಗಿ ನೆರವೇರುತ್ತದೆ. ಐದು ದಿನಗಳ ಕಾಲ ನಡೆಯುವ ಉತ್ಸವದಲ್ಲಿ ಕ್ರಮವಾಗಿ ಧ್ವಜಾರೋಹಣ, ಅಂಕುರಾರ್ಪಣೆ, ಪ್ರಹ್ಲಾದ ಪರಿಪಾಲನೋತ್ಸವ, ಸೂರ್ಯ ಮಂಡಲೋತ್ಸವ, ಶೇಷವಾಹನೋತ್ಸವ, ಕಲ್ಯಾಣೋತ್ಸವ, ವಸಂತೋತ್ಸವ, ಡೋಲೋತ್ಸವ ಮುಂತಾದ ಉತ್ಸವಗಳು ಬಹು ವಿಜೃಂಭಣೆಯಿಂದ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಬಹಳ ಅದ್ದೂರಿಯಾಗಿ ಜರುಗುತ್ತದೆ.

ಲಕ್ಷ್ಮೀ ನರಸಿಂಹ ಸ್ವಾಮಿ ದೇವಾಲಯದ ನಿರ್ಮಾಣದ ಕಾಲವನ್ನು ಸುಮಾರು 300 ವರ್ಷಗಳಷ್ಟು ಹಿಂದಕ್ಕೆ ಒಯ್ಯಬಹುದು. ಇಲ್ಲಿ ದೊರೆತಿರುವ ತೇದಿರಹಿತವಾದ ಶಿಲಾಶಾಸನದಲ್ಲಿ ಆಯಣ್ಣನ ಅಪ್ಪಣೆಯಲ್ಲಿ ದೇಸಾಯಿವೇದಪ್ಪನೆಂಬ ಭಕ್ತನು ದೇವರಿಗೆ ಶಂಕು - ಚಕ್ರ ಮಾಡಿಸಿಕೊಟ್ಟಿರುವ ಉಲ್ಲೇಖವಿದೆ.

ಮೂಕನಹಳ್ಳಿ ಗ್ರಾಮದ ಸಮೀಪ ನೆಟಗುಂಟೆಯೆಂಬ ಗ್ರಾಮದಲ್ಲಿ ವೀರಭದ್ರ ಮತ್ತು ಆಂಜನೇಯ ದೇವಾಲಯಗಳಿವೆ.

**ಹೀಗೆ ಬನ್ನಿ:**

ಬೆಂಗಳೂರು - ಹೊನ್ನಾವರ ರಸ್ತೆಯಲ್ಲಿ ತುಮಕೂರಿನಿಂದ ಹದಿನೈದು ಕಿ.ಮೀ. ಸಾಗಿದ ನಂತರ ಮೂಕನಹಳ್ಳಿ ತಿರುವು ಸಿಗುತ್ತದೆ. ಅಲ್ಲಿ ಬಲಕ್ಕೆ ತಿರುಗಿ ಸುಮಾರು ಒಂದು ಕಿ.ಮೀ. ಸಾಗಿ ಮೂಕನಹಳ್ಳಿ ಪಟ್ಟಣವನ್ನು ಸೇರಬಹುದು.







ಶ್ರೀ ಪ್ರಸನ್ನವೆಂಕಟ ದಾಸಾರ್ಯವಿರಚಿತ

# ಶ್ರೀನಿವಾಸನ ಚರಣ ಕಮಲವ ನೆನೆವೆ

## ಆತ್ಮನಿವೇದನೆ ಕೀರ್ತನೆಯ ಒಳನೋಟ

ಧಾರಾವಾಹಿ

- ಡಾ॥ ಸುಭಾಸ ಕಾಖಂಡಕಿ

79754 42458

ಈ ಕೀರ್ತನೆಯಲ್ಲಿ ದಾಸರು - “ಮುನಿಗಳಿಂದ ಧ್ಯೇಯನಾದ, ಗಂಧರ್ವರಿಂದ ಗೇಯನಾದ ವೇದವೇದ್ಯನಾದ ದೋಷದೂರನಾದ ಭೂವೈಕುಂಠ ತಿರುಮಲದಲ್ಲಿ ವಾಸವಾಗಿರುವ, ಭಕ್ತರಿಗೆ ಕಾಮಿತಾರ್ಥವನ್ನು ಕೊಡುವ ಕರುಣಾಪೂರ್ಣನಾದ, ಭಕ್ತರ ಅಭೀಷ್ಟೆಗಳನ್ನು ಪೂರೈಸುವ ಸರ್ವೋತ್ತಮನಾದ, ಮುಕ್ತಿದಾಯಕನು, ಮತ್ತು ಮೃತ್ಯುವಿಗೂ ಮಾರಕನಾದ, ಅನಂತ ಶ್ರೀಯುತನು ಆದ ಶ್ರೀಪ್ರಸನ್ನ ವೆಂಕಟೇಶನನ್ನು ನೆನೆವೆ'' ಎಂದು ಆತ್ಮನಿವೇದನೆ ಮಾಡಿ ಕೊಂಡಿದ್ದಾರೆ.

ಶ್ರೀನಿವಾಸನ ಚರಣ ಕಮಲ ನೆನೆವೆ ನಾ ನಿತ್ಯ ದಣಿಯನಾ
ಮೌನಿಧ್ಯೇಯ ಗಂಧರ್ವಗೇಯ ವೇದವೇದ್ಯನ ಅನುವದ್ಯನ ಶ್ರೀ ಶ್ರೀ ॥ಪ॥

“ಮುನಿಗಳಿಂದ ಧ್ಯೇಯನಾದ, ಗಂಧರ್ವರಿಂದ ಗೇಯನಾದ,ವೇದಗಳಿಂದ ವೇದ್ಯನಾದ, ದೋಷದೂರನಾದ, ಶ್ರೀಸಹಿತನೂ ಆದ ಶ್ರೀನಿವಾಸನ ಚರಣ ಕಮಲವನ್ನು ನಿತ್ಯ ನೆನೆವೆ'', ಎಂದಿದ್ದಾರೆ ದಾಸರು.

ಇಲ್ಲಿ ದಾಸರು ಕಪಿಲ ಗೀತೆಯಲ್ಲಿ ತಿಳಿಸಿದರಂತೆ ಶ್ರೀ ವಜ್ರ, ಅಂಕುಶ, ಧ್ವಜ ಮುಂತಾದ ಪರಮ ಮಂಗಳಕರವಾದ ಚಿಹ್ನೆಗಳಿಂದ ಅಲಂಕಾರಗೊಂಡ,ಉನ್ನತವಾದ,ರಕ್ತವರ್ಣೋಪೇತವಾದ, ನಖಮಂಡಲದಿಂದ ಸೂಸೂವ ಪ್ರಕಾಶ ವಿಶೇಷದಿಂದ ಭಕ್ತರಲ್ಲಿರುವ ಅಜ್ಞಾನವೆಂಬ ಕತ್ತಲೆಯನ್ನು ನಾಶಪಡಿಸುವಂಥ ಶ್ರೀನಿವಾಸನ ಪಾದಕಮಲಗಳನ್ನು ಮುಮುಕ್ಷಗಳು ಧ್ಯಾನ ಮಾಡುತ್ತಾರೆ. ಅಂಥ ಪರಮ ಪವಿತ್ರವಾದ ಶ್ರೀನಿವಾಸನ ಚರಣಕಮಲವನ್ನು ನೆನೆವೆ'' ಎಂದು ಸ್ಮರಿಸಿದ್ದಾರೆ. ಪಲ್ಲವಿಯಲ್ಲಿ ದಾಸರು ಶ್ರೀನಿವಾಸನಿಗೆ ನಾಲ್ಕು ವಿಶೇಷಣಗಳನ್ನು ಕೊಟ್ಟಿದ್ದಾರೆ. 1.ಮೌನಿಧ್ಯೇಯ, 2. ಗಂಧರ್ವಗೇಯ, 3.ವೇದ ವೇದ್ಯ 4.ಅನವದ್ಯ, ಅಧ್ಯಯನ ಮಾಡಿ ಜಿಜ್ಞಾಸೆ ಮಾಡಿದಾಗ ಯಾವಾಗಲೂ ಮುನಿಗಳಿಂದ ಧ್ಯೇಯನಾಗಿದ್ದಾನೆ ಶ್ರೀನಿವಾಸನು ಗಂಧರ್ವರಿಂದ ಗಾನ ಮಾಡಲ್ಪಡುತ್ತಾನೆ ಆದ್ದರಿಂದ ಅವದು ಗಂಧರ್ವಗ್ಯೇಯ, ಇನ್ನು ಶ್ರೀ ಆದಿತ್ಯ ಪುರಾಣ ವೇಂಕಟೇಶ ಮಹಾತ್ಮೆ(5-43) ಯಲ್ಲಿ “ ಯಾಯಂಗತ್ವಾ ವೆಂಕಟೇಶಂ ರಮೇಶಂ॥ ನತ್ವಾಸ್ತುತ್ವಾ ವೇದವೇದ್ಯಂ ಚ ಭಕ್ತ್ಯಾ॥ ಹೇಳಿದಂತೆ ಶ್ರೀವೆಂಕಟೇಶನು ವೇದವೇದ್ಯ ಅನವದ್ಯನ - ಅಂದರೆ ದೋಷ ರಹಿತನು. ಶ್ರೀನಿವಾಸನು ದೋಷ ದೂರನಾಗಿದ್ದಾನೆ. ಹೀಗೆ ದಾಸರು ಪಲ್ಲವಿಯ ಒಂದೇ ಪಾದದಲ್ಲಿ ನಾಲ್ಕು ವಿಶೇಷಣ ಗಳಿಂದ ಸುತ್ತಿಸಿದ್ದಾರೆ.

### ನುಡಿ -೧ ರಲ್ಲಿ

ಧರಿಯ ವೈಕುಂಠಾಧಿವಾಸನ ಶ್ರೀಶನಾಕ್ಷಯ ಕೋಶನಾ।
ಪರಮ ಪಾವನ ನಾಮಧೇಯ ಪರಪುರುಷನಾಚಿದ್ಧರುಷಾನಾ ॥1॥

ಭೂವೈಕುಂಠದಲ್ಲಿ ವಾಸವಾದ, ಲಕ್ಷ್ಮೀದೇವಿಯರಿಗೆ ಪತಿಯಾದ, ಅಕ್ಷಯವಾದ ಕೋಶಕ್ಕೆ ಸ್ವಾಮಿಯಾದ ಶ್ರೇಷ್ಠ ಮಂಗಳಕರ ನಾಮ ಧ್ಯೇಯವುಳ್ಳವನಾದ, ಶ್ರೇಷ್ಠ ಪುರುಷನಾದ, ಸರ್ವೋತ್ತಮನಾದ ಹಾಗೂ ಜ್ಞಾನಾನಂದವುಳ್ಳವನಾದ ಶ್ರೀನಿವಾಸನ ಚರಣ ಕಮಲಗಳನ್ನು ನೆನೆಯುವೆ'' ಎಂದು ಸ್ಮರಿಸಿದ್ದಾರೆ.

### ನುಡಿ - ೨ ರಲ್ಲಿ

ಸ್ವಾಮಿ ಪುಷ್ಕರ ವರಹಾ ವೆಂಕಟನಾಥನಾ ಪುಣ್ಯ ನಾಥನಾ
ಕಾಮಿತಾರ್ಥದ ಕರುಣನಿಧಿ ಪೂರ್ಣ ಕಾಮನಾಂತನಾಮನಾ ಶ್ರೀ ಶ್ರೀ ॥ 2॥

ದಾಸರು- “ಸ್ವಾಮಿ ಪುಷ್ಕರ ವರಹ ವೆಂಕಟನಾಥನಾ ಪುಣ್ಯ ನಾಥನಾ'' - ಎನ್ನುವಲ್ಲಿ ಶ್ರೀವೆಂಕಟೇಶ ಮಹಾತ್ಮೆಯಲ್ಲಿ ವರ್ಣಿಸಿದಂತೆ - “ ಶ್ರೀಸ್ವಾಮಿ ಪುಷ್ಕರಣಿ ತೀರ್ಥವೆಂಬ ಕ್ಷೀರಸಮುದ್ರದಲ್ಲಿ ಶ್ವೇತ ದ್ವೀಪ ದಂತಿರುವ ಸುಂದರವಾದ ಮಂಟಪದಲ್ಲಿ ಶ್ರೀಭೂದೇವಿಯರಿಂದ ಸಹಿತನಾಗಿ ವರಾಹರೂಪಿ ವೆಂಕಟನಾಥನು ವಿಹರಿಸುತ್ತಾನೆ. ಇನ್ನು ಕಾಮಿತಾರ್ಥದ ಕರುಣನಿಧಿ ಪೂರ್ಣ ಕಾಮನಾಂತನಾಮನಾ ಶ್ರೀ ಶ್ರೀ ಎನ್ನುವಲ್ಲಿ ಭಕ್ತರು ಅಪೇಕ್ಷಿಸಿದ ವರಗಳನ್ನೂ ಕೊಡುವ, ತನ್ನ ಇಚ್ಛೆಯಂತೆ ನಾಮಗಳನ್ನು ಧರಿಸುವಂಥ ಈ ಶ್ರೀನಿವಾಸನ ಚರಣ ಕಮಲವನ್ನು ನೆನೆವೆ - ಎಂದಿದ್ದಾರೆ.

### ಇನ್ನು ಕೊನೆಯ ನುಡಿಯಲ್ಲಿ

ಭಕ್ತಾಭಿಷ್ಟದಿ ವಿಬುಧ ಧೇನುಮಣಿ ಭೂಜನಾರ್ಕಾನಂತತೇಜನಾ।
ಮುಕ್ತಿದಾಯಕ ಮೃತ್ಯು ಮಾರಕ ಪ್ರಸನ್ನ ವೆಂಕಟಾದ್ರೀಶನಾ ಶ್ರೀ ಶ್ರೀ ॥3॥

ಭಕ್ತರ ಅಭೀಷ್ಟೆಗಳನ್ನು ಕೊಡುವ ಕಾಮಧೇನು ಚಿಂತಾಮಣಿಗಳಂತೆ ಇರುವ , ಅನಂತ ಸೂರ್ಯರ ತೇಜಸ್ಸುಳ್ಳ, ಮುಕ್ತಿಯನ್ನು ಕೊಡುವ ಮೃತ್ಯುವಿಗೂ ಮೃತ್ಯುವೆನಿಸಿದ ಪ್ರಸನ್ನ ವೆಂಕಟಾದ್ರೀಶನ ಚರಣಕಮಲವನ್ನು ನೆನೆವೆ ಎಂಬುದಾಗಿ ಶ್ರೀದಾಸರು ತಿಳಿಸಿ, ಇಂಥ ಸರ್ವೋತ್ತಮನಾದ ಶ್ರೀನಿವಾಸನ ಚರಣ ಕಮಲವನ್ನು ಸದಾ ನೆನೆಯಿರಿ ಎಂದು ಎಲ್ಲಾ ಸಭ್ಭಕ್ತರಿಗೆ ಸೂಚಿಸಿದ್ದಾರೆ.



# ತಿರುಮಲ ತಿರುಪತಿ ದೇವಸ್ಥಾನಗಳು

# ಪಂಚಗವ್ಯ ಉತ್ಪಾದನೆಗಳು



**ಉರ್ವಿ ನಾಸಲ್ ಡ್ರಾಪ್ಸ್**

ನೆಗಡಿ, ತಲೆನೋವುಗಳನ್ನು ನಿವಾರಿಸುತ್ತದೆ. (ಕಣ್ಣು,ಮೂಗು, ಕಿವಿ)



**ಭೂಮಿ ಹರ್ಬಲ್ ಫ್ಲೋರ್ ಕ್ಲೀನರ್**

ನೆಲದ ಮೇಲಿನ ಬ್ಯಾಕ್ಟೀರಿಯಾಗಳನ್ನು ನಾಶಪಡಿಸುತ್ತದೆ.



**ನಂದಿನಿ ಗೋ - ಅರ್ಕ್**

ಸತತವಾಗಿ ಕ್ರಮದಿಂದ ಬಳಸಿದಲ್ಲಿ ದೀರ್ಘಾಯುಷ್ಯ ಜೀವನಕಾಲದ ಪ್ರಮಾಣ ವೃದ್ಧಿಸುತ್ತದೆ.



**ಕ್ಷಮಾ ಕೌ - ಡಂಗ್ ಕೇಕ್ಸ್**

ಯಜ್ಞ,ಯೋಗಾದಿಗಳಿಗೆ ಉತ್ತಮವಾದ ವಾತಾವರಣವನ್ನು ಕಲ್ಪಿಸಿ ಕೊಡುತ್ತದೆ.



**ಭುವತಿ ಡಂಗ್ ಲಾಗ್ಸ್ (ಕೇಕ್ಸ್)**

ಹೋಮ - ಹವನಾದಿಗಳಿಗೆ ಶ್ರೇಷ್ಠವಾದ ಪರಿಸರವನ್ನು ಕಲ್ಪಿಸಿ ಕೊಡುತ್ತದೆ.



**ಅವನಿ ಧೂಪ ಚೂರ್ಣ**

ಸುವಾಸನೆಯನ್ನು ಪಸರಿಸುತ್ತದೆ.



**ಧರಣಿ ಊದುಬತ್ತಿ**

ಆಹ್ಲಾದಕರ ವಾತಾವರಣವನ್ನು ನಿರ್ಮಿಸುತ್ತದೆ.



**ಧಾತ್ರಿ ಸಾಂಬ್ರಾಣಿ ಕಪ್ಸ್**

ಉತ್ತಮ ಆರೋಗ್ಯವನ್ನು ಮೈಗೂಡಿಸುತ್ತದೆ.



**ವೈಷ್ಣವಿ ಧೂಪ್ ಸ್ಟಿಕ್ಸ್**

ವಾತಾವರಣವನ್ನು ಶುಭ್ರವನ್ನಾಗಿ ಮಾಡುತ್ತದೆ.



**ವಾರಾಹಿ ಧೂಪ್ ಕೋನ್ಸ್**

ಸುತ್ತಮುತ್ತಲಿನ ಪರಿಸರವನ್ನು ಪವಿತ್ರಗೊಳಿಸುತ್ತದೆ.



**ಪೃಥ್ವಿ ವಿಭೂತಿ**

ಈಶ್ವರಾನುಗ್ರಹ ಪ್ರಾಪ್ತಿಯನ್ನು ಕಲ್ಪಿಸುತ್ತದೆ.



**ಧನ್ಶಿಕ ಹರ್ಬಲ್ ಟೂತ್‌ಪೌಡರ್**

ಹಲ್ಲು ಮತ್ತು ವಸಡುಗಳನ್ನು ರಕ್ಷಿಸುತ್ತದೆ.



**ಹಿರಣ್ಮಯಿ ಹರ್ಬಲ್ ಫೇಸ್ ಪ್ಯಾಕ್**

ಕಾಂತಿ ಮತ್ತು ಮುಖದ ವರ್ಣವನ್ನು ವೃದ್ಧಿಸುತ್ತದೆ.



**ಮಹಿ ಹರ್ಬಲ್ ಸೋಪ್**

ಚರ್ಮವನ್ನು ಸಂರಕ್ಷಿಸುತ್ತದೆ.



**ಕಶ್ಯಪಿ ಹರ್ಬಲ್ ಶಾಂಪೂ**

ಕೇಶರಾಶಿಯನ್ನು ಸಂರಕ್ಷಿಸುತ್ತದೆ.

**ಸಂಪರ್ಕಿಸಬೇಕಾದ ವಿಳಾಸ :**

**0877-22633333 ಮತ್ತು 0877-22677777**





ಧಾರಾವಾಹಿ

# ಶ್ರೀ ವೇಂಕಟೇಶ್ವರಸ್ವಾಮಿ ಆಲಯ

## ಪ್ರಾಚೀನ ಕಾಲದ ಸಾಹಿತ್ಯದಲ್ಲಿ ಶ್ರೀವೇಂಕಟೇಶ್ವರಸ್ವಾಮಿ ಆಲಯ (ಕ್ರಿ.ಶ. ಮೊದಲ ಶತಮಾನದಿಂದ 9ನೇ ಶತಮಾನದವರೆಗೆ)

### ಪೊಯ್ಗೈ ಆಳ್ವಾರ್

ಆಳ್ವಾರರಲ್ಲಿ ಪ್ರಥಮರು ಪೊಯ್ಗೈ ಆಳ್ವಾರ್,ನಾಲಾಯರ ದಿವ್ಯಪ್ರಬಂಧದ ಕಡೆಯ ಸಹಸ್ರದ ಮೊದಲ ಶತಕದ ಕರ್ತೃ. ಹಿರಿಯ ವೈಷ್ಣವ ಭಕ್ತರೇ ಅಲ್ಲದೆ ತಮಿಳು ಸಾಹಿತ್ಯದ ಪ್ರಮುಖರಲ್ಲಿ ಒಬ್ಬರೆಂದು ಗಣಿತರಾಗಿದ್ದಾರೆ. ಇವರ ಮೊದಲಾಂತಿರುವಂದಾದಿಯಲ್ಲಿ (ಮೊದಲ ಶತಕ ಪಾಶುರಗಳು) ಹನ್ನೆರಡರಿಂದ ಹದಿನೈದು ಬಾರಿ ತಿರುಮಲೆಯ ಬಗ್ಗೆ ನೇರವಾದ ಉಲ್ಲೇಖಗಳಿವೆ. ಭಗವನ್ನಾರಾಯಣನು ಪರಮ ಕರುಣೆಯಿಂದ ಪ್ರತ್ಯಕ್ಷವಾದ ಪವಿತ್ರಸ್ಥಳ ಇದು ಎಂದು ಅವರು ತಿಳಿಸುತ್ತಾರೆ. 5 ಹಾಗೂ 74 ನೆಯ ಪಾಶುರಗಳು ಇಲ್ಲಿನ ದೇವರ ಲಕ್ಷಣಗಳನ್ನೂ ಅವನು ಹಿಡಿದಿರುವ ಆಯುಧಗಳನ್ನೂ ವಿವರಿಸುತ್ತವೆ. 26 ನೇ ಪಾಶುರ ತಿರುಮಲೆಯು ದೇವತೆಗಳೂ ಇರಲು ಬಯಸತಕ್ಕ ಪವಿತ್ರ ಕ್ಷೇತ್ರವೆನ್ನುತ್ತದೆ. 37 ನೇ ಪಾಶುರ ಇನ್ನೂ ಮುಂದುವರಿದು ವೆಂಗಡವನ್ನು ಬಹುಸುಂದರವಾದ ಶಂಖವನ್ನು ಧ್ವನಿಗೊಳಿಸುವ ದೇವನು ನೆಲೆಸಲು ಆಯ್ಕೆಮಾಡಿಕೊಂಡ ಸ್ಥಳವೆಂದೂ, 9 ನೇ ಪಾಶುರದಲ್ಲಿ ವಿಷ್ಣುವನ್ನು ಆಶ್ರಯಿಸುವುದರ ಮೂಲಕ ತಮಗೆ ಮೋಕ್ಷ ದೊರೆಯುವುದೆಂಬ ಸನ್ಮಾರ್ಗ ಪ್ರವರ್ತನೆಯಿಂದಾಗಿ ತಮಗೆ ತೃಪ್ತಿಯಿದೆ ಎನ್ನುವರು, ಹೀಗೆಯೇ 69,70, 71,72,73,75 ರಲ್ಲಿ ವೆಂಗಡದ ಬಗ್ಗೆ ಸಾಮಾನ್ಯ ಉಲ್ಲೇಖಗಳಿವೆ. 69,70 ರಲ್ಲಿ ಸಾಮಾನ್ಯ ಲಕ್ಷಣಗಳನ್ನು ಹೇಳಿದರೆ, 71 ರಲ್ಲಿ 68 ರಲ್ಲಿ ಹೇಳಿದ ಘಟನೆಗಳೇ ಪುನರಾವೃತವಾಗಿವೆ. 72 ರಲ್ಲಿ ವೆಂಗಡದಲ್ಲಿ ಯುವಕರ ರಾಜಕುಮಾರನ ಮನೆಯಿದೆ (ಇಳಂ ಕುಮಾರರ್ ಕೋಮಾನ್) ಎನ್ನುವರು.73ರಲ್ಲಿ ಸಾಮಾನ್ಯ ಉಲ್ಲೇಖವಿದ್ದರೆ 75 ರಲ್ಲಿ ತಿರುಮಲೆಯ ವಿಷ್ಣು-ಕೃಷ್ಣರ ಬೆಟ್ಟವೆಂಬ ವರ್ಣನೆಯಿದೆ. 76 ರಲ್ಲಿ ವೇಂಕ್ಕಾದಲ್ಲಿ ದೇವರಿಗೆ ಹೂವನ್ನರ್ಪಿಸಿ,ದೇವರ ಮುಂದೆ ಕೈಮುಗಿದು ನಿಂತರೆ ಯಾವುದೇ ದುಃಖ ಪಾಪವೂ ಅವನನ್ನು ಸೋಕದು.ಇದಕ್ಕಾಗಿ, ಬೆಟ್ಟಗಳ ಮೇಲೆ, ನೀರಿನಲ್ಲಿ,ಬೆಂಕಿಯಲ್ಲಿ ನಿಂತು ತಪಸ್ಸು ಮಾಡಬೇಕಾಗಿಲ್ಲ ಎನ್ನುವರು. 77,78 ರಲ್ಲಿ ವಿಷ್ಣುವಿನಲ್ಲಿನ ಅಚಂಚಲ ಭಕ್ತಿಯಿಂದ ಆ ಪದಗಳಿಂದ ದೂರವಾಗಿ ನಿಶ್ಚಯವಾಗಿಯೂ ಮೋಕ್ಷ ಪಡೆಯಬಹುದೆಂದು ಹೇಳುವರು. 89 ನೇ ಪಾಶುರವು ವೆಂಗಡವು ಮುರಳೀಧರನ ಪವಿತ್ರ ಧಾಮವಾಗಿದೆ ಎನ್ನುತ್ತದೆ. 90,93 ನೇ ಪಾಶುರಗಳು ಸಾಮಾನ್ಯ ಉಲ್ಲೇಖವಾದರೂ

94 ನೇ ಪಾಶುರ ಧ್ಯಾನದ ದೀಪದಿಂದ ತನ್ನಲ್ಲಿ ಬೆಳಕು ಉಂಟಾಗಿಸಿ ಇತರೆಡೆಗಳಲ್ಲಿ ಕುಳಿತು ನಿಂತು ಮಲಗಿರುವ ಅವ ನನ್ನು ತನ್ನ ಹೃದಯದಲ್ಲಿ ಕುಳ್ಳಿರಿಸಿಕೊಂಡು ನಿಲ್ಲಿಸಿ,ಪ್ರತಿಷ್ಠೆ ಮಾಡಿಕೊಂಡೆ ಎಂದು ತೃಪ್ತಿಪಟ್ಟಿದ್ದಾರೆ.

ಈ ಮೂವರು ಆಳ್ವಾರರೂ ಸಮಕಾಲೀನರಾಗಿದ್ದ ರೆಂಬುದರಿಂದ ಇವರನ್ನು ಮೊದಲಾಳ್ವಾರರೆಂದು ಕರೆಯ ಲಾಗಿದೆ.ಇವರುಗಳ ತಿರುವಂದಾದಿಗಳು ಎಷ್ಟು ಸಮಾನ ಅಂಶ ಗಳನ್ನು ಹೊಂದಿವೆಯೆಂದರೆ ಅವುಗಳಿಂದಾಗಿಯೇ ಮೂವರೂ ಏಕ ಕಾಲದಲ್ಲಿ ಪ್ರವರ್ಧಮಾನರಾಗಿರಬೇಕು ಎಂದು ತೀರ್ಮಾ ನಿಸಬಹುದು. ವಿಷ್ಣುವಿನ ಭಕ್ತರಾಗಿದ್ದರಿಂದ ಹಲವಾರು ವೈಷ್ಣವ ಕ್ಷೇತ್ರಗಳ ಬಗ್ಗೆ ಹೇಳುತ್ತ ತಿರುಮಲೆಯ ಬಗ್ಗೆ ಹೆಚ್ಚಿಗೆ ಹೇಳಿದರು. ಇದರಿಂದಾಗಿ ವ್ಯಾಖ್ಯಾನಕಾರರು ಇವರ ಪಾಶುರಗಳು ವೆಂಗಡಕ್ಕೇ ಮೀಸಲೆಂದು ಭಾವಿಸಿದರು.

ವೈದಿಕ ಆಚಾರಗಳನ್ನು ಬಹುಮುಖವೆಂದು ಆಳ್ವಾರರು ಉಲ್ಲೇಖಿಸುತ್ತಾರೆ. ಮೊದಲ ತಿರುವಂದಾದಿಯಲ್ಲಿ ಪೊಯ್ಗೈ ಆಳ್ವಾರ್ ಹೇಳುತ್ತಾರೆ - ಇನ್ನು ಮುಂದೆ ನರಕವನ್ನಾರು ಪ್ರವೇಶಿ ಸುತ್ತಾರೆ? ಅದರ ಬಾಗಿಲು ಮುಚ್ಚಿರಿ,ಯಾವ ದಾಕ್ಷಿಣ್ಯವೂ ಬೇಡ. ಕಾರಣ ನೇರಿಳೆಮರದ ಈ ನೆಲದಲ್ಲಿ ಕರುವಿನ ವೇಷ ದಲ್ಲಿ ಬಂದ ವತ್ಸಾಸುರನನ್ನು ಮೇಲೆಸೆದು ಬಿಲ್ವದ ಮರದ ಹಣ್ಣು ಗಳನ್ನು ಬೀಳಿಸಿದ ಕೃಷ್ಣಾವತಾರಿ, ನಾರಾಯಣನೇ ಸರ್ವ ರನ್ನೂ ರಕ್ಷಿಸುವನೆಂಬುದು ಚೆನ್ನಾಗಿ ತಿಳಿದಿದೆ.- ಇದರಿಂದಾಗಿ ಅಂದಿಗೆ ಧರ್ಮಬೋಧನೆ ಪಡೆದಿದ್ದ ವ್ಯಾಪ್ತಿ ಹಾಗೂ ಪ್ರಸಿದ್ಧಿ ಯನ್ನು ತಿಳಿಯಬಹುದು.

### ಶಿಲಪ್ಪದಿಕಾರದಲ್ಲಿ ತಿರುಮಲೆ

ತಮಿಳು ಪ್ರಾಚೀನ ಮಹಾಕಾವ್ಯ ಶಿಲಪ್ಪದಿಕಾರದ ಕರ್ತೃ ಜೈನನಾದರೂ ತಿರುಮಲೆಯು ವಿಷ್ಣುದೇವಾಲಯದ ಸ್ಥಳವೆಂದು ಹೇಳಿದ್ದಾನೆ. ಈ ಕೃತಿಯ ಕರ್ತೃ ಇಳಂಗೋ ಅಡಿಗಳ್ ತನ್ನ ಪುಸ್ತಕದ 2 ನೇ ಅಧ್ಯಾಯದಲ್ಲಿ ಬೆಟ್ಟದ ಮೇಲಿನ ವೆಂಕ ಟೇಶ್ವರನ್ನು ವರ್ಣಿಸಿರುವುದು ಹೀಗೆ -

ತುಂಬಿ ಹರಿಯುವ ಝರಿಗಳಿಂದಾ ವೃತ ನಾದ  
ಸೂರ್ಯಚಂದ್ರರ ಪ್ರಕಾಶದಲಿ ಹೊಳೆಯುವ  
ವೆಂಗಡದ ಶಿಖರಾಗ್ರದ ಕೊನೆಯಲ್ಲಿ  
ಮಿಂಚಿನಾಗಸದ ಮಧ್ಯದ ನೀಲಿಮೆಯೊಲು  
ಕಾಮನ ಬಿಲ್ಲಿನೆಲ್ಲ ವಿಭವದಲ್ಲಿ  
ನಿಂತಿರುವ ಮಹಾನುಭಾವ ರಕ್ತನೇತ್ರ  
ಕುಸುಮ ಸದೃಶದುಡುಗೆಯಲ್ಲಿ,  
ಬೆಳಗುವ ಹಾರದೊಡನೆ  
ಕಮಲಕರದಲಿ ಚಕ್ರಹಿಡಿದವ,  
ಹಾಲುಬಿಳಿಶಂಖ ಹಿಡಿದವನು

- ಮಲೈನಾಡುವಿನ ಮಾಂಗಾಡುವಾಸಿಯಾದ ಒಬ್ಬ ಬ್ರಾಹ್ಮಣ ಯಾತ್ರಿಕನ ಬಾಯಲ್ಲಿ ಈ ವಿವರಣೆ ಹೊರಬರುತ್ತದೆ. ಈ ಯಾತ್ರಿಕನು ಪಾಂಡ್ಯನಾಡಿನಲ್ಲಿ ಹಾಯ್ದು ಹೋಗುವಾಗ ರಾತ್ರಿಯಲ್ಲಿ ಚೋಳರಾಜಧಾನಿ ಉರೈಯೂರಿನಲ್ಲಿ ತಂಗಿದ್ದ. ತನ್ನ ಯಾತ್ರೆಯ ಸಂದರ್ಭದಲ್ಲಿ ಈತ ಶಿಲಪ್ಪದಿಕಾರದ ನಾಯಕ ಕೋವಲನ್ ಅನ್ನು ಸಂಧಿಸಿ, ಮಾತನಾಡುವಾಗ ಪಾಂಡ್ಯ ನಾಡನ್ನು ಕುರಿತು ಹೇಳಿ ತಾನು ತೀರ್ಥಯಾತ್ರೆಗಾಗಿ ಹೊರಟಿರು ವುದಾಗಿಯೂ ಶ್ರೀರಂಗ ಹಾಗೂ ವೆಂಗಡಗಳ ವಿಷ್ಣು ದೇವಾ ಲಯಗಳನ್ನು ಕಾಣುವುದಾಗಿಯೂ ಹೇಳುವನು. ತಿರುಮಲೆಯ ಉಲ್ಲೇಖ ಈ ಸಮಯದಲ್ಲಿ ಬರುತ್ತದೆ.

ಈ ಹೇಳಿಕೆಯಿಂದಾಗಿ ಅಂದಿನ ಕಾಲದಲ್ಲಿ ತಿರು ಮಲೆಯನ್ನು ಒಂದು ಪವಿತ್ರ ವೈಷ್ಣವ ಕೇಂದ್ರವೆಂದು ಪರಿ ಗಣಿಸಲಾಗಿತ್ತಿತ್ತು ಎಂಬುದು ಖಚಿತವಾಗುತ್ತದೆ. ಇಲ್ಲಿ ಉಲ್ಲೇಖಿತ ವಾದ ಶ್ರೀರಂಗ ಹಾಗೂ ತಿರುಮಲೆಗಳ ಮತ್ತು ತಿರುಮಾಲ್ ಇರುಂಸೋಲೈಗಳ ಆಲಯಗಳು, ಅಂದಿಗೇ ತಿರುಮಲೆಯಲ್ಲಿನ ವಿಷ್ಣು ದೇವಾಲಯ ಬಹು ಪ್ರಸಿದ್ಧವಾಗಿದ್ದಿತೆಂಬುದನ್ನೂ ಅದರ ಪ್ರಸಿದ್ಧಿ ಪಶ್ಚಿಮ ಸಮುದ್ರದವರೆಗೆ ಹರಡಿದ್ದಿತೆಂದೂ, ಇಂದಿ ನಂತೆಯೇ ಅಂದೂ ಜನರು ಈ ತೀರ್ಥಕ್ಷೇತ್ರ ಯಾತ್ರೆಗೆ ಹೋಗು ತ್ತಿದ್ದರೆಂದೂ ನಿರ್ದಂದ್ವವಾಗಿ ಹೇಳಿಕೆ ನೀಡುವುದರಿಂದಲೇ ತಿರುಮಲೆಯು ವಿಷ್ಣುವಿನ ದೇವಾಲಯವನ್ನು ಹೊಂದಿ ಪ್ರಸಿದ್ಧ ವಾಗಿದ್ದಿತು ಎಂಬುದು ಸ್ಪಷ್ಟವಾಗುತ್ತದೆ.

### ತಿರುಮಳಿಶೈ ಆಳ್ವಾರ್

ಈ ಆಳ್ವಾರರೂ ವಿಷ್ಣುವನ್ನು ನೂರು ಅಂತಾದಿಗಳಲ್ಲಿ ಕೀರ್ತಿಸಿದ್ದಾರೆ. 42 ಹಾಗೂ 43 ನೇ ಪಾಶುರಗಳಲ್ಲಿ ಆಳ್ವಾರರು ವೆಂಗಡದಲ್ಲಿ ಬ್ರಹ್ಮ ಹಾಗೂ ಶಿವ ಇಬ್ಬರೂ ಅರ್ಚನೆ ಗೈಯುತ್ತಾ ರೆಂದು ತಿಳಿಸುತ್ತಾರೆ.

ಮೊದಲನೆಯ ಉಲ್ಲೇಖ 31 ನೇ ಪಾಶುರದಲ್ಲಿದೆ. ಇಲ್ಲಿ ಕೊಟ್ಟಿಯೂರಿನ ಇತರ ವೈಷ್ಣವ ಕ್ಷೇತ್ರಗಳೊಡನೆ ವೆಂಗಡದ ಸಾಧಾರಣ ಉಲ್ಲೇಖವಿದೆ. 39ನೇ ಪಾಶುರದಲ್ಲೂ ಸಾಮಾನ್ಯ ಹೆಸರಿದೆ. 40 ನೇ ಪಾಶುರದಲ್ಲಿ ಆಳ್ವಾರರು ವೆಂಗಡದ ದೈವದಲ್ಲಿ ತನಗೆ ಭಕ್ತಿಯುಂಟೆಂದು ಹೇಳುತ್ತ -ವಿಜ್ಞಾನದಲ್ಲಿ ಅತಿ ಹಿರಿಯಳಾದವಳಿಗೆ ಪ್ರಿಯನಾದ ಅವನ ಪಾದಗಳ ಬಲೆಯಲ್ಲಿ ಬಿಡಿಸಿಕೊಳ್ಳಲಾಗದಂತೆ ಸೇರಿಹೋಗಿದ್ದೇನೆ - ಎನ್ನುತ್ತಾರೆ. 41 ನೇ ಪಾಶುರದಲ್ಲಿ ಆಸಕ್ತಿದಾಯಕವಾದ ರೀತಿಯಲ್ಲಿ ವೆಂಗಡದ ಬೆಟ್ಟದಲ್ಲಿ ನೆಲೆಸಿರುವವನು ತನ್ನ ಮನವನ್ನು ಪ್ರವೇಶಿಸಿದ್ದಾನೆ ಎನ್ನುವರು. ಈ ಬೆಟ್ಟವನ್ನು ವರ್ಣಿಸುವಾಗ ಎರಡು ಅಂಶ ಪ್ರಕಟವಾಗುತ್ತವೆ. ಮೊದಲನೆಯದು ಬೆಟ್ಟದಲ್ಲಿನ ಝರಿಗಳು ನೀರನ್ನು ಕೆಳಕ್ಕೆ ತರುವಾಗ ಮುತ್ತುಗಳನ್ನು ಹೊರ ಹಾಕುತ್ತವೆ. ಇದರಿಂದಾಗಿ ಝರಿ ಹರಿವಾಗ ಝುಳು ಝುಳುನಾದ ಮುಖ್ಯವಾಗುತ್ತದೆ. ವೆಂಗಡದಲ್ಲಿ ಇನ್ನೊಂದು ಸಾಮಾನ್ಯ ಶಬ್ದವೆಂದರೆ ಇಲ್ಲಿ ಓಣಂ ಹಬ್ಬದ ದಿನಗಳಲ್ಲಿ ನಡೆಯುವ ಉತ್ಸವಗಳ ಕಲರವ. ಈ ನಕ್ಷತ್ರೋತ್ಸವ ವಿಷ್ಣುವಿನೊಂದಿಗೆ ಸಂಬಂಧ ಹೊಂದಿದ್ದು ಅವನ ಹುಟ್ಟಿಗೆ (ಹುಟ್ಟಿಲ್ಲದವನಿಗೆ) ಹೊಂದಿಕೊಂಡದ್ದು. ಈ ನಕ್ಷತ್ರದ ಹಬ್ಬ ಹರಿದಿನಗಳು ತಿರುಮಲೆಗೆ ವಿಶಿಷ್ಟವಾದದ್ದು ಹಾಗೂ ಶ್ರೀನಿವಾಸ ದೇವರಿಗೆ (ಲಕ್ಷ್ಮಿ ದೇವಾಲಯಕ್ಕೆ) ವಿಶಿಷ್ಟವಾದದ್ದು. ವರ್ಷ ದಲ್ಲಿ ಅತಿ ಪವಿತ್ರವಾದ ದಿನವೆಂದರೆ ಭಾದ್ರಪದ ತಿಂಗಳಿನಲ್ಲಿ ಬರುವ ಶ್ರವಣ ನಕ್ಷತ್ರದ ದಿನ. ಮುಂದಿನ ಪಾಶುರದಲ್ಲಿ ವೆಂಗಡವನ್ನು ಕುರಿತು ಹೇಳುತ್ತಾ ಆಳ್ವಾರರು ತಿರುಮಲೆಯ ದೇವರ ಪಾದಗಳಲ್ಲಿ ಕಮಲಪುಷ್ಪಗಳನ್ನು ಶಿವ ಬ್ರಹ್ಮರೂ ಇಟ್ಟು ಅರ್ಚಿಸುವವರಾಗಿ, ಸರ್ವಪಾಪಹರನಾದ ಈ ದೇವರ ಸನ್ನಿಧಿ ಸೇರಿ ಅರ್ಚಿಸಲು ಎಲ್ಲ ಜನರಿಗೂ ಕರೆನೀಡುತ್ತಾರೆ. ಮುಂದಿನ ಪಾಶುರದಲ್ಲಿಯೂ ಬ್ರಹ್ಮ ಶಿವರು ವೆಂಗಡದ ದೈವವನ್ನು ಅರ್ಚಿಸುವ ಚಿತ್ರವಿದೆ. 44 ನೇ ಪಾಶುರ ಗಮನಾರ್ಹವಾಗಲು ಕಾರಣ ಆಳ್ವಾರರು ಯುವಕರನ್ನು ವೆಂಗಡದ ದೈವವನ್ನು ಆರಾಧಿಸಲು ಒತ್ತಾಯಿಸುವುದೇ ಆಗಿದೆ.

ಸಾಮಾನ್ಯವೇ ಆದರೂ 90 ನೇ ಪಾಶುರದಲ್ಲಿ ಮತ್ತೆ ವೆಂಗಡದ ಉಲ್ಲೇಖವಿದೆ. ತಿರುಮಳಿಶೈ ಆಳ್ವಾರರ ಈ ನೂರು ಪಾಶುರಗಳಲ್ಲಿ ಪದೇ ಪದೇ ಅವಧಾರಿತವಾಗುವ ಅಂಶವೆಂದರೆ ವೆಂಗಡವು ವಿಷ್ಣುವಿನ ಪವಿತ್ರ ಕ್ಷೇತ್ರಗಳಲ್ಲಿ ಒಂದು ಎಂಬುದೂ, ಇಲ್ಲಿರುವ ದೈವ ವಿಷ್ಣುವಿನ ಹೊರತು ಬೇರಲ್ಲ ವೆಂಬುದು. ಇತರ ದೇವರುಗಳ ವಿಶೇಷವಾಗಿ ಬ್ರಹ್ಮ ಶಿವರುಗಳ ಉಲ್ಲೇಖವಿದ್ದರೂ ಅವನ ದೇಹದ ಭಾಗಗಳಾಗಿ ಮಾತ್ರ. ಏನೇ ಆದರೂ ಇಲ್ಲಿ ಆರಾಧಿತನಾಗುವವ ವಿಷ್ಣು,

(ಮುಂದುವರೆಯುತ್ತದೆ)




## ಆಗಸ್ಟ್ ತಿಂಗಳ ರಸಪ್ರಶ್ನೆಯ ಉತ್ತರಗಳು

1. ನವಮಿ
2. ಆದಿಶೇಷ
3. ಪೂಜೆಗೆ ಅರ್ಹವಾದುದು
4. ತಿರುಮಲನಂಬಿ
5. ಸುಯೋಧನ
6. ವಿದುರ
7. ವಿಶ್ವಾಮಿತ್ರ ಆಶ್ರಮ
8. ಭೀಷ್ಮ
9. 4 (ನಾಲ್ಕು)
10. ಮತ್ಸ್ಯ
11. ಹಿರಣ್ಯಕಶಿಪು
12. ತ್ರೇತಾಯುಗ
13. ದಕ್ಷಪ್ರಜಾಪತಿ
14. ಭಗೀರಥ
15. ದ್ವಾಪರಯುಗ

**2022, ಆಗಸ್ಟ್ 07 ರಿಂದ 10 ರ ವರೆಗೆ ನಡೆದ ಸ್ವಾಮಿಯವರ ಪವಿತ್ರೋತ್ಸವದ ದೃಶ್ಯಗಳು. ಈ ಉತ್ಸವದಲ್ಲಿ ಶ್ರೀ ಶ್ರೀ ಶ್ರೀ ಪೆದ್ದಜೀಯರ್ ಸ್ವಾಮಿ, ಶ್ರೀ ಶ್ರೀ ಶ್ರೀ ಚಿನ್ನಜೀಯರ್ ಸ್ವಾಮಿಯವರು, ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ.ಧರ್ಮಾರೆಡ್ಡಿ, ಐ.ಡಿ.ಈ.ಎಸ್., ದಂಪತಿಗಳು ಪಾಲ್ಗೊಂಡರು.**









### ತಿರುಮಲೆ ತಿರುಪತಿ ದೇವಸ್ಥಾನಗಳು



## ತಿರುಚಾನೂರು ಶ್ರೀ ಪದ್ಮಾವತೀ ಅಮ್ಮನವರ ಬ್ರಹ್ಮೋತ್ಸವಗಳು

### 2022 ನವೆಂಬರ್ 20 ರಿಂದ 28 ರ ವರೆಗೆ



**20-11-2022 ಭಾನುವಾರ**
ಹಗಲು : ತಿರುಚ್ಚಿ ಉತ್ಸವ , ಧ್ವಜಾರೋಹಣ
ರಾತ್ರಿ : ಚಿಕ್ಕಶೇಷವಾಹನ

**21-11-2022 ಸೋಮವಾರ**
ಹಗಲು : ದೊಡ್ಡಶೇಷವಾಹನ
ರಾತ್ರಿ : ಹಂಸವಾಹನ

**22-11-2022 ಮಂಗಳವಾರ**
ಹಗಲು : ಮುತ್ತಿನಚಪ್ಪರವಾಹನ
ರಾತ್ರಿ : ಸಿಂಹ ವಾಹನ

**23-11-2022 ಬುಧವಾರ**
ಹಗಲು : ಕಲ್ಪವೃಕ್ಷವಾಹನ
ರಾತ್ರಿ : ಹನುಮದ್ವಾಹನ

**24-11-2022 ಗುರುವಾರ**
ಹಗಲು : ಪಲ್ಲಕಿ ಉತ್ಸವ , ಸಾ॥ ವಸಂತೋತ್ಸವ
ರಾತ್ರಿ : ಗಜವಾಹನ

**25-11-2022 ಶುಕ್ರವಾರ**
ಹಗಲು : ಸರ್ವಭೂಪಾಲವಾಹನ
ರಾತ್ರಿ : ಗರುಡವಾಹನ

**26-11-2022 ಶನಿವಾರ**
ಹಗಲು : ಸೂರ್ಯಪ್ರಭವಾಹನ
ರಾತ್ರಿ : ಚಂದ್ರಪ್ರಭವಾಹನ

**27-11-2022 ಭಾನುವಾರ**
ಹಗಲು : ರಥೋತ್ಸವ
ರಾತ್ರಿ : ಅಶ್ವವಾಹನ

**28-11-2022 ಸೋಮವಾರ**
ಹಗಲು : ಪಲ್ಲಕಿಯಲ್ಲಿ ತಿರುಚ್ಚಿ ಉತ್ಸವ
ತಿಥವಾರಿ ಅವಭೃಥೋತ್ಸವ, ಚಕ್ರಸ್ನಾನ
ಪಂಚಮೀ ತೀರ್ಥ
ರಾತ್ರಿ : ತಿರುಚ್ಚಿ ಉತ್ಸವ ಧ್ವಜಾವರೋಹಣ

# ಶ್ರೀ ಕನಕ ದುರ್ಗ ಅಲಂಕಾರಗಳು

**ಆಶ್ವಯುಜ ಪಾಡ್ಯಮಿಯಿಂದ ದಶಮಿಯವರೆಗೆ ವೈಭವದಿಂದ ದಸರಾ ಶರನ್ನವರಾತ್ರಿ, ಮಹೋತ್ಸವಗಳು ನಡೆಯುತ್ತವೆ. ಅಧಿಷ್ಠಾನ ದೇವತೆಯನ್ನು ಒಂದೊಂದು ದಿನ ಒಂದೊಂದು ಅವತಾರದಲ್ಲಿ 9 ದಿನಗಳು 9 ಅಲಂಕಾರಗಳು ಮಾಡಿ ಹತ್ತನೆಯ ದಿನ ವಿಜಯದಶಮಿ ಮಾಡುತ್ತಾರೆ. ಈ ಸಂದರ್ಭದಲ್ಲಿ ಅಮ್ಮನವರಿಗೆ ಮಾಡುವ ಅಲಂಕಾರಗಳು ಸಪ್ತಗಿರಿ ಓದುಗರಿಗಾಗಿ ...**



## ಶ್ರೀ ಸ್ವರ್ಣಕವಚಾಲಂಕೃತ ದುರ್ಗಾದೇವಿ

ನವರಾತ್ರಿ ಉತ್ಸವಗಳಲ್ಲಿ ಮೊದಲ ದಿನದಂದು ದುರ್ಗಾದೇವಿಯನ್ನು ಸರ್ವಕವಚಗಳಿಂದ ಅಲಂಕರಿಸುತ್ತಾರೆ. ಅಷ್ಟ ಭುಜಗಳೊಂದಿಗೆ, ನಕ್ಷತ್ರಗಳಿಗಿಂತ ಅಧಿಕವಾದ ಕಾಂತಿಯುಳ್ಳ ಮೂಗುತಿಯನ್ನು ಧರಿಸಿ ನಸು ಹಳದಿ ಮೊಗದೊಂದಿಗೆ ಅಮ್ಮನವರು ದರ್ಶನ ನೀಡುವಳು. ಸಿಂಹವಾಹನದ ಮೇಲೆ ಕುಳಿತು ಶಂಖ, ಚಕ್ರ ,ಗದೆ, ಶೂಲ,ಪಾಶವನ್ನು ಧರಿಸಿರುತ್ತಾಳೆ. ಸಕಲ ಶತ್ರು ಬಾಧೆಗಳನ್ನು ನಿವಾರಿಸುವಳು. ಈ ಅಮ್ಮನವರನ್ನು ಆರಾಧಿಸಿದರೆ ಸಕಲ ವಿಜಯಗಳು ಲಭಿಸುತ್ತದೆ. ಪೂಜಾದ್ರವ್ಯಗಳು : ಅರಿಶಿನಬಣ್ಣದ ಅಕ್ಷತೆ, ಹಳದಿ ಪುಷ್ಪಗಳು. ನೈವೇದ್ಯ : ಪುಳಿಯೋಗರೆ.



## ಶ್ರೀ ಬಾಲಾತ್ರಿಪುರಸುಂದರಿದೇವಿ

ತ್ರಿಪುರಾತ್ರಯದಲ್ಲಿ ಬಾಲಾತ್ರಿಪುರ ಸುಂದರಿ ಮೊದಲದೇವತೆ. ಮನಸ್ಸು, ಬುದ್ಧಿ, ಅಹಂಕಾರ ಈ ತಾಯಿಯ ಅಧೀನದಲ್ಲಿರುತ್ತದೆ. ಅಭಯಹಸ್ತ ವರದ ಮುದ್ರೆ ತೋರುತ್ತಾ ಅಕ್ಷಮಾಲೆ ಧರಿಸಿರುತ್ತಾಳೆ. ಈಕೆಯನ್ನು ಆರಾಧಿಸಿದರೆ ನಿತ್ಯ ಸಂತೋಷ ದೊರೆಯುತ್ತದೆ. ಶ್ರೀಚಕ್ರ ಸಂಪ್ರದಾಯದಲ್ಲಿ ಷೋಡಷ ವಿದ್ಯೆಗಳಿಗೆ ಈಕೆ ಅಧಿದೇವತೆ ಈಕೆಯ ಅನುಗ್ರಹದಿಂದ ಉತ್ತಮ ಸಂತಾನವಾಗುತ್ತದೆ. ಪೂಜಾವಿಧಿ : ಕುಮಾರಿ ಪೂಜೆ ಮಾಡಬೇಕು. ನೈವೇದ್ಯ : ಪಾಯಸ.



## ಶ್ರೀ ಗಾಯಿತ್ರಿದೇವಿ

ವೇದಮಾತೆ ಗಾಯಿತ್ರಿದೇವಿ ಎಲ್ಲ ಮಂತ್ರಗಳಿಗೂ ಮೂಲ ಶಕ್ತಿ. ಐದು ಮುಖಗಳಿಂದ, ಶಂಖ, ಚಕ್ರ, ಗದೆ, ಅಂಕುಶ ಧರಿಸಿರುತ್ತಾಳೆ. ಗಾಯಿತ್ರಿ ಉಪಾಸನೆಯಿಂದ ಬುದ್ಧಿ ವಿಕಾಸವಾಗುತ್ತದೆ. ಅನಂತವಾದ ಮಂತ್ರಶಕ್ತಿ ಲಭಿಸುತ್ತದೆ. ಸಕಲದುರಿತ ಉಪದ್ರವಗಳು ತೊಲಗುತ್ತವೆ, ಬ್ರಹ್ಮಜ್ಞಾನವುಂಟಾಗುತ್ತದೆ. ಗಾಯಿತ್ರಿ ಮಂತ್ರ ಪಾರಾಯಣದಿಂದ ವೇದ ಮಂತ್ರ ಪಾರಾಯಣ ಮಾಡಿದ ಫಲಗಳು ಸಿಗುತ್ತದೆ. ಪೂಜಾವಿಧಿ : ವೇದಪಂಡಿತರನ್ನು ಪೂಜಿಸಬೇಕು. ನೈವೇದ್ಯ : ವಡೆ.



## ಶ್ರೀ ಅನ್ನಪೂರ್ಣದೇವಿ

ಒಂದು ಕೈಯಲ್ಲಿ ಮಧುರಸಗಳಿಂದ ಕೂಡಿದ ಮಾಣಿಕ್ಯಪಾತ್ರೆ, ಮತ್ತೊಂದು ಕೈಯಲ್ಲಿ ಅನ್ನವನ್ನು ಅನುಗ್ರಹಿಸುವ ರತ್ನದ ಸೌಟನ್ನು ಧರಿಸಿದ ರೂಪದಲ್ಲಿ ಅನ್ನಪೂರ್ಣಾದೇವಿ ರೂಪದಲ್ಲಿ ದರ್ಶನ ನೀಡುತ್ತಾರೆ. ಈ ಅವತಾರದಲ್ಲಿ ಅಮ್ಮನವರು ಕೆಂಪನೆಯ ಶರೀರದಿಂದ ಕೊರಳಲ್ಲಿ ತಾರಾಹಾರಗಳನ್ನು ಧರಿಸಿ ಪೂರ್ಣ ಚಂದ್ರನಂತೆ ಅಂದವಾದ ಮುಖದಿಂದ ವಿಶಾಲವಾದ ತ್ರಿನೇತ್ರಗಳೊಂದಿಗೆ ಮೆರೆಯುತ್ತಿರುತ್ತಾಳೆ. ಈಕೆಯನ್ನು ಆರಾಧಿಸಿದರೆ ಪುತ್ರ ಪೌತ್ರಾಭಿವೃದ್ಧಿ , ಬ್ರಹ್ಮ ತೇಜಸ್ಸನ್ನು ಹೊಂದುವರು. ಪೂಜಾದ್ರವ್ಯಗಳು : ಎಳೆಯ ಕೆಂಪು ಅಥವಾ ಬಿಳಿ ಹೂಗಳು. ನೈವೇದ್ಯ : ಮೊಸರನ್ನ, ಸಿಹಿ ಪೊಂಗಲ್.



## ಶ್ರೀ ಲಲಿತಾತ್ರಿಪುರಸುಂದರಿದೇವಿ

ತ್ರಿಪುರಾತ್ರಯದಲ್ಲಿ ಎರಡನೆಯ ದೇವತೆ ಮಣಿದ್ವೀಪವಾಸಿನಿ, ಶ್ರೀ ವಿದ್ಯಾಸ್ವರೂಪಿಣಿ ಉಪಾಸಕರಿಗೆ ಮುಖ್ಯ ಆರಾಧ್ಯ ದೇವತೆ. ಅಗ್ನಿಗುಂಡದಿಂದ ಈಕೆ ಆವಿರ್ಭವಿಸಿರುವಳು. ಈ ಅಲಂಕಾರದಲ್ಲಿ ಕೋಟಿಸೂರ್ಯ ಪ್ರಕಾಶಕ್ಕೆ ಸಮನಾದ ಕಾಂತಿಯೊಂದಿಗೆ ಬೆಳಗುತ್ತಿರುತ್ತಾಳೆ. ಹಸ್ತದಲ್ಲಿ ಪಾಶ, ಅಂಕುಶ, ಕಬ್ಬಿನ ಬಿಲ್ಲು , ಹೂ ಬಾಣಗಳನ್ನು ಧರಿಸಿರುತ್ತಾಳೆ. ಈಕೆಯ ಇಕ್ಕೆಲಗಳಲ್ಲಿ ಲಕ್ಷ್ಮಿ, ಸರಸ್ವತಿಯರು ಚಾಮರಗಳನ್ನು ಬೀಸುತ್ತಾ ಸೇವೆ ಮಾಡುತ್ತಿರುತ್ತಾರೆ. ಈಕೆಯ ಆರಾಧನೆಯಿಂದ ಸಕಲ ಅಷ್ಟೈಶ್ವರ್ಯಗಳು ಲಭಿಸುತ್ತದೆ. ದಾರಿದ್ರ್ಯ ದುಃಖಗಳು ನಶಿಸುತ್ತದೆ. ನೈವೇದ್ಯ : ಕುಂಕುಮ, ನಿವೇದನೆ, ಪಾಯಸ.

# ಶ್ರೀ ಕನಕ ದುರ್ಗ ಅಲಂಕಾರಗಳು





## ಶ್ರೀ ಮಹಾಲಕ್ಷ್ಮಿದೇವಿ

ಇಕ್ಕೆಲಗಳಲ್ಲಿ ಗಜರಾಜರು ಸೇವಿಸುತ್ತಿರುವಾಗ, ಎರಡು ಕೈಗಳಲ್ಲಿ ಕಮಲಗಳನ್ನು ಧರಿಸಿ, ಅಭಯ ವರದಹಸ್ತ ಮುದ್ರೆಯೊಂದಿಗೆ ಶ್ರೀಮಹಾಲಕ್ಷ್ಮೀ ಭಕ್ತರಿಗೆ ದರ್ಶನ ನೀಡುತ್ತಾಳೆ. ತ್ರಿಪುರಾತ್ರಯದಲ್ಲಿ ಮಹಾಲಕ್ಷ್ಮಿ ಮಧ್ಯಶಕ್ತಿ ಈಕೆಯ ಉಪಾಸನೆಯಿಂದ ಸಂಪತ್ತು ಹಾಗೂ ಮೋಕ್ಷ ಲಭಿಸುತ್ತದೆ. ಈಕೆ ಶೀಘ್ರ ಫಲದಾಯಿನಿ. ಪೂಜಾ ದ್ರವ್ಯ : ಕೆಂಪು ಹೂಗಳು. ನೈವೇದ್ಯ : ಹೂರಣಗಳು.



## ಶ್ರೀ ಮಹಾಸರಸ್ವತಿ ದೇವಿ

ಮೂಲಾ ನಕ್ಷತ್ರದಂದು ಸರಸ್ವತಿ ದೇವಿಯ ಅಲಂಕಾರಕ್ಕೆ ಹೆಚ್ಚಿನ ಪ್ರಾಮುಖ್ಯತೆ ಇದೆ. ವಾಕ್, ಬುದ್ಧಿ, ವಿಜ್ಞಾನ ಕಲೆ ಎಲ್ಲದಕ್ಕೂ ಈಕೆ ಅಧಿಷ್ಠಾನದೇವತೆ, ಕಚ್ಛಪಿ ಎಂಬ ವೀಣೆ, ಪುಸ್ತಕ, ಅಕ್ಷಮಾಲೆ ಶ್ವೇತ ವಸ್ತ್ರಗಳನ್ನು ಧರಿಸಿ, ನವಿಲುವಾಹನ ವೇರಿದ ರೂಪದಲ್ಲಿ ಈಕೆ ದರ್ಶನ ನೀಡುತ್ತಾಳೆ. ಸರಸ್ವತಿಯ ಆರಾಧನೆಯಿಂದ ಲೌಕಿಕ ವಿದ್ಯೆಗಳೊಂದಿಗೆ ಅಲೌಕಿಕವಾದ ಮೋಕ್ಷ ವಿದ್ಯೆಯು ಲಭಿಸುತ್ತದೆ. ಪೂಜಾ ದ್ರವ್ಯ : ಬಿಳಿಯ ಹೂಗಳು. ನೈವೇದ್ಯ : ಮೊಸರನ್ನ



## ಶ್ರೀ ದುರ್ಗಾದೇವಿ

ದುರ್ಗಾದೇವಿ ಸರ್ವ ದುಃಖಗಳನ್ನು ನಾಶಮಾಡುತ್ತಾಳೆ. ಉಗ್ರರೂಪದಿಂದ ದುಷ್ಟರನ್ನು ಸಂಹರಿಸುತ್ತಾಳೆ. ಪರಮಶಾಂತ ಮೂರ್ತಿಯಾಗಿ ಭಕ್ತರನ್ನು ಕಾಪಾಡುತ್ತಾಳೆ. ಪಂಚಪ್ರಕೃತಿ ಸ್ವರೂಪಗಳಲ್ಲಿ ಮೊದಲ ಮೂರ್ತಿ , ಕೆಂಪು ಸೀರೆ, ಮಣಿಗಳುಳ್ಳ ಕಿರೀಟ, ಎಂಟು ಕೈಗಳಲ್ಲಿ ಕತ್ತಿ, ಶಂಖ, ಚಕ್ರ, ಗದೆ, ಕಲಶ, ತ್ರಿಶೂಲ, ಧನುರ್ಬಾಣಗಳನ್ನು ಧರಿಸಿರುತ್ತಾಳೆ. ಸಿಂಹ ವಾಹನವೇರಿದ ಈ ತಾಯಿಯನ್ನು ಧ್ಯಾನಿಸಿದರೆ ಸರ್ವರೋಗಗಳು ದೂರವಾಗುತ್ತವೆ. ಪೂಜಾ ದ್ರವ್ಯಗಳು ಸೇವಂತಿಗೆ, ಸಂಪಿಗೆ, ಮಲ್ಲಿಗೆ ಹೂಗಳು, ದಾಳಿಂಬೆ ಕೆಂಪು ಅಕ್ಷತೆ. ನೈವೇದ್ಯ : ಪೊಂಗಲ್(ಹುಗ್ಗಿ) ಪುಳಿಯೋಗರೆ.



## ಶ್ರೀ ಮಹಿಷಾಸುರ ಮರ್ದಿನಿದೇವಿ

ದಿವ್ಯವಾದ ತೇಜಸ್ಸಿನಿಂದ, ಸಿಂಹವಾಹಿನಿಯಾಗಿ ಈ ತಾಯಿ ದರ್ಶನ ನೀಡುತ್ತಾಳೆ. ಮಹಿಷಾಸುರ ಸಂಹಾರವಾದ ನವಮಿಯಂದು ಮರ್ಹನವಮಿಯನ್ನು ಆಚರಿಸಲಾಗುತ್ತದೆ. ಈ ದಿನ ಚಂಡಿಯನ್ನು ಆರಾಧಿಸಿದವರಿಗೆ ಶತ್ರು ಭಯ ಇರುವುದಿಲ್ಲ. ಎಲ್ಲ ಕಡೆಗಳಲ್ಲೂ ವಿಜಯವಾಗುತ್ತದೆ. ಪೂಜಾ ವಿಧಿ : ಸುವಾಸಿನಿಯರ ಪೂಜೆ ಮಾಡಿ ಮಂಗಳ ದ್ರವ್ಯಗಳು, ಅರಿಶಿನ ಕುಂಕುಮಗಳು. ನೂತನ ವಸ್ತ್ರಗಳನ್ನು ತಮ್ಮ ಶಕ್ತಿಗೆ ತಕ್ಕಂತೆ ದಾನ ಮಾಡಬೇಕು. ನೈವೇದ್ಯ : ಪಾನಕ, ಪಾಯಸ, ಪುಳಿಯೋಗರೆ, ವಡೆ, ಕೋಸಂಬರಿ.



## ಶ್ರೀ ರಾಜರಾಜೇಶ್ವರಿ ದೇವಿ

ಅಪರಾಜಿತಾದೇವಿಯಾಗಿ ಸಹ ಈಕೆ ಪೂಜೆಗಳನ್ನು ಮಾಡಿಸಿಕೊಳ್ಳುವಳು. ಸಕಲ ಭುವನ ಬ್ರಹ್ಮಾಂಡಗಳಿಗೆ ಆರಾಧ್ಯದೇವತೆ, ಸ್ವಪ್ರಕಾಶ ಜ್ಯೋತಿ ರೂಪದಿಂದ ಪರಮೇಶ್ವರನ ಅಂಕವನ್ನು ಆಸನವನ್ನಾಗಿ ಮಾಡಿಕೊಂಡವಳು. ನಿಶ್ಚಲ ಮನದಿಂದ ತನನ್ನು ಆರಾಧಿಸುವವರಿಗೆ ಇಚ್ಛಾ, ಜ್ಞಾನ, ಕ್ರಿಯಾಶಕ್ತಿಗಳನ್ನು ವರವಾಗಿ ಕರುಣಿಸುವಳು. ಮಾಯಾ ಮೋಹಿತವಾದ ಮಾನವ ಮನೋಚೈತನ್ಯ ಈ ತಾಯಿಯ ಉಪಾಸನೆಯಿಂದ ಸಿದ್ಧಿಸುತ್ತದೆ. ಪೂಜಾದ್ರವ್ಯಗಳು : ಹಳದಿ ಬಣ್ಣದ, ಹಸಿರು ಬಣ್ಣದ ಹೂಗಳು. ನೈವೇದ್ಯ : ಭಕ್ಷ ಭೋಜ್ಯಗಳು, ಲಾಡುಗಳ ಮಹಾನಿವೇದನೆ







ಭಾರತವು ಸ್ವಾತಂತ್ರ್ಯವನ್ನು ಪಡೆದು 75 ವರ್ಷಗಳಾದ
ಸಂದರ್ಭದಲ್ಲಿ 'ಆಜಾದಿ ಕಾ ಅಮೃತ್ ಮಹೋತ್ಸವ್' ಅಂಗವಾಗಿ
ತಿ.ತಿ.ದೇ., ನಿರ್ವಹಿಸಿದ ಸ್ವಾತಂತ್ರ್ಯ ದಿನೋತ್ಸವದ
(15-08- 2022) ದೃಶ್ಯಗಳು. ಈ ಕಾರ್ಯಕ್ರಮದಲ್ಲಿ
ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ
ಶ್ರೀ ಎ.ವಿ. ಧರ್ಮಾರೆಡ್ಡಿ ಐ.ಡಿ.ಈ.ಎಸ್., ತಿ.ತಿ.ದೇ.,
ಸಂಯುಕ್ತಕಾರ್ಯನಿರ್ವಹಣಾಧಿಕಾರಿಗಳು
ಶ್ರೀ ವಿ. ವೀರಬ್ರಹ್ಮ ಐ.ಎ.ಎಸ್., ಮತ್ತು ಶ್ರೀಮತಿ. ಎಸ್. ಭಾರ್ಗವಿ ,
ಐ.ಎ.ಎಸ್., ಮತ್ತು ತಿ.ತಿ.ದೇ., ಉನ್ನತಾಧಿಕಾರಿಗಳು, ಪಾಲ್ಗೊಂಡರು.










# ನಂಬಿಕೆ, ಕಲ್ಪನೆ, ಸಂಸ್ಕೃತಿಗಳ ಸಂಗಮ - ದೀಪಾವಳಿ

**ಬೆಳಕೆಂಬ ಸಂಭ್ರಮದಲ್ಲಿ ಮಿಂದು ಧನ್ಯರಾಗೋಣ**

- ಎ.ಆರ್. ರಘುರಾಮ
9916138436

ದೀಪಗಳ ಒಡಲಲ್ಲಿ ಅಡಗಿರುವುದೇ ಬೆಳಕೆಂಬ ಸಂಭ್ರಮ.ಸಂಭ್ರಮದೊಂದಿಗೆ ಬೆರೆತು ಬೆಳೆಯುವುದೇ ನಾಡಿನ ಸಂಸ್ಕೃತಿ. ಹಾಗಾಗಿ ದೀಪಾವಳಿ ಸಂಸ್ಕೃತಿ - ಸಂಭ್ರಮಗಳ ಸಂಗಮ. ಹಣತೆಯ ಅಂತರಂಗದಲ್ಲೂ ಬೆಳಕೆಂಬ ಸಂಭ್ರಮ ಅಡಗಿದೆ. ಇಂತಹಾ ಸಂಭ್ರಮವನ್ನು ನಮ್ಮ ಅಂತರಾಳದಲ್ಲೂ ಚಿಗುರಿಸಿಕೊಂಡು ಪ್ರಗತಿ ಹೊಂದುವುದೇ ನಮ್ಮ ಉದಾತ್ತ, ಸನಾತನ ಸಂಸ್ಕೃತಿಯ ಪ್ರತೀಕ.

ಸಂಸ್ಕೃತಿಯ ಸರಳ ಸೌಂದರ್ಯವನ್ನು ಇನ್ನಷ್ಟು ಬೆಳಗಿಸುವುದು, ಅರಳಿಸುವುದು,ಸೊಬಗಾಗಿಸುವುದೇ ಈ ದೀಪಾವಳಿ ಹಬ್ಬ. ಆದ ಕಾರಣ ದೀಪಾವಳಿಯ ಸಾಂಸ್ಕೃತಿಕ ಮುಖ ಜನಜೀವನದ ಸಹಜಮುಖವೇ ಆಗಿದೆ. ಇದು ಜೀವನದ ಸರಳತೆಯೊಂದಿಗೆ ಬೆಸೆದ ಮುಖ. ಅನುಭವದೊಂದಿಗೆ ಅರಳುವ ಮುಖ.ಜನಪದದ ಭಾವಾಭಿವ್ಯಕ್ತಿಯ ಮುಖ. ಸಾಮರಸ್ಯವನ್ನು ಸಾರುವ ಮುಖ.

ಒಳಬಗೆಯ ಹಣತೆಯಲ್ಲಿ ಪ್ರೀತಿಯ ಎಣ್ಣೆ ಸುರಿದು ಅರಿವಿನ ದೀಪ ಹಚ್ಚಿ ಬಿಟ್ಟರೆ ಬಾಳು ಬಂಗಾರವಾಗುತ್ತದೆ. ಅರಿವು ಮತ್ತು ಪ್ರೀತಿ ದೇವಲೋಕದ ಎರಡು ದಿವ್ಯ ಕೊಡುಗೆಗಳು, ಇದನ್ನು ಉಳಿಸಿಕೊಳ್ಳುವ ಪ್ರಯತ್ನವೇ ದೀಪಾವಳಿ ಆಚರಣೆ,

ನಮ್ಮ ಪೂರ್ವಿಕರು ಈ ಎಲ್ಲಾ ಮಹತ್ತರ ಉದ್ದೇಶಗಳನ್ನು ಇಟ್ಟುಕೊಂಡೇ ದೀಪಾವಳಿ ಆಚರಣೆಯನ್ನು ಅತ್ಯಂತ ಅರ್ಥಪೂರ್ಣವಾಗಿ ಕಟ್ಟಿಕೊಟ್ಟಿದ್ದಾರೆ. ಇಲ್ಲಿ ಸಂಪ್ರದಾಯವಿದೆ. ಆಚರಣೆ ಇದೆ, ವಿಜ್ಞಾನವಿದೆ. ಎಲ್ಲಕ್ಕಿಂತ ಮುಖ್ಯವಾಗಿ ಆಧ್ಯಾತ್ಮದ ಸೆಲೆಧಾಳಾಗಿ ಇದೆ.

ಪ್ರೀತಿಯ ಹಿಂದೆ ಜ್ಞಾನವಿದೆ. ದ್ವೇಷದ ಹಿಂದೆ ಅಜ್ಞಾನವಿದೆ.ಅರಿವಿನ ಜೋಡಿ ಪ್ರೀತಿ. ತಿಳಿಗೇಡಿತನದ ಜೋಡಿ ದ್ವೇಷ.ಇದು ದೈವೀಸಂಪತ್ತಲ್ಲ ಮಾನವೀ ಸಂಪತ್ತು ಅಲ್ಲ ರಾಕ್ಷಸೀ ಸಂಪತ್ತು. ಧರ್ಮದ ಹೆಸರಲ್ಲಿ ದ್ವೇಷವನ್ನು ಬಿತ್ತಿ ಹಿಂಸೆಯನ್ನು ಬೆಳೆಯುವವರು ಮನುಷ್ಯರಲ್ಲ. ರಾವಣ - ಜರಾಸಂಧ- ಕಂಸನ ಸಂತಾನದವರು ಎನ್ನುತ್ತವೆ ನಮ್ಮ ಮಹಾ ಪವಿತ್ರ ಗ್ರಂಥಗಳು. ಕತ್ತಲು ಎಂದರೆ ರಾಕ್ಷಸರಿಗೆ ಇಷ್ಟ. ಅಂಥ ವರಿಗೆ ದೀಪದ ಬೆಳಕು ಬೇಡ. ಅಂಥ ಕತ್ತಲು ನಮ್ಮೊಳಗೆ ಕವಿಯ ದಿರಲಿ. ನಮ್ಮ ಒಳಬಗೆಯ ಓಣಿಗಳಲ್ಲಿ ಇಂಥ ಕೊಳಕು ರಾಕ್ಷಸರು ಓಡಾಡದಿರಲಿ ಎಂದು ಅರಿವಿನ ದೀಪ ಹಚ್ಚಬೇಕು. “ಕಿಚ್ಚು ಹಚ್ಚುವುದಲ್ಲ ದೀಪ ಹಚ್ಚಬೇಕು” ಇದೇ ದೀಪಾವಳಿ ಹಿಂದಿರುವ ದಿವ್ಯ ಅರ್ಥ.

### ಎಲ್ಲರಿಗೂ ಸಡಗರದ ಹಬ್ಬ

ಜ್ಞಾನದ ಜ್ಯೋತಿಯಿಂದ ಅಜ್ಞಾನವೆಂಬ ಕತ್ತಲನ್ನು ಹೊಡೆದೋಡಿಸುವ ದೀಪಾವಳಿ ಬಂತೆಂದರೆ ಎಲ್ಲರಿಗೂ ಸಡಗರ ಸಂಭ್ರಮ. ದೊಡ್ಡವರು ಅಭ್ಯಂಗ ಸ್ನಾನ, ಸಿಹಿ ತಿನಿಸುಗಳನ್ನು ಸವಿದು ಸಂಭ್ರಮಿಸಿದರೆ ಪುಟಾಣಿ ಮಕ್ಕಳಿಗೆ ಪಟಾಕಿ ಹೊಡೆದು ಸಂಭ್ರಮಿಸುವ ಆನಂದ. ನೂತನ ದಂಪತಿಗಳಿಗಂತೂ ಮಾವನ ಮನೆಯಲ್ಲಿ ಆದರಾಥಿತ್ಯ.

ನರಕಚತುರ್ದಶಿಯಿಂದ ಬಲಿಪಾಡ್ಯಮಿಯವರೆಗೆ ಮೂರು ದಿನಗಳ ಕಾಲ ಆಚರಿಸುವ ಹಬ್ಬದ ಸಂಭ್ರಮ ವರ್ಣಿಸಲುಸಾಧ್ಯ. (ಹಿಂದೆಲ್ಲಾ ಪಾಡ್ಯದ ನಂತರ ಭಾವನ ಬಿದಿಗೆ, ಅಕ್ಕನ ತದಿಗೆ. ಹೀಗೆ ತುಳಸೀ ಕಾರ್ತೀಕದವರೆಗೂ ಒಂದಿಲ್ಲೊಂದು ಹಬ್ಬದ ಸರಣಿ ಇರುತ್ತಲೇ ಇತ್ತು. ಇಂದು ಅವುಗಳ ಆಚರಣೆಗೆ ನಮಗೆ ಸಮಯವಿಲ್ಲದಾಗಿದೆ.) ಶ್ರೀಕೃಷ್ಣನು ನರಕಾಸುರನನ್ನು ಸಂಹರಿಸಿ 16 ಸಾವಿರ ನಾರಿಯರನ್ನು ಸಂರಕ್ಷಿಸಿದ ಹಿನ್ನೆಲೆಯಲ್ಲಿ ಆಚರಿಸುವ ನರಕಚತುರ್ದಶಿ ಜ್ಞಾನಕ್ಕೂ ಧರ್ಮಕ್ಕೂ ಜಯ ದೊರೆತ ದಿನ. ಅಂದು ನಸುಕಿನಲ್ಲೆ ಎಲ್ಲರೂ ಎದ್ದು ಅಭ್ಯಂಗ (ಎಣ್ಣೆಸ್ನಾನ) ಮಾಡಿ ದೇವರಿಗೆ ಭಕ್ತಿಯಿಂದ ನಮಿಸುತ್ತಾರೆ. ಯತಿಗಳೂ ಸಹ ಅಂದು ಅಭ್ಯಂಗ ಮಾಡುವುದು ವಿಶೇಷ. “ಉಂಡಿದ್ದೇ ಉಗಾದಿ, ಮಿಂದದ್ದೇ ದೀಪಾವಳಿ” ಎಂಬ ನಾಣ್ಣುಡಿ ಈ ಉದ್ದೇಶವನ್ನು ಸರಳವಾಗಿ ಸಾರುತ್ತದೆ.

### ದೀಪಾವಳಿ ಅಮಾವಾಸ್ಯೆ:

ದೀಪಾವಳಿಯ ಎರಡನೇ ದಿನವಾದ ಅಮಾವಾಸ್ಯೆಯಂದು ಎಲ್ಲಡೆ ಲಕ್ಷ್ಮೀ ಪೂಜೆ ಮಾಡುವುದೇ ಒಂದು ದೊಡ್ಡ ಸಂಭ್ರಮ. ಮನೆಗಳಲ್ಲಿ ಅಂದು ವನಿತೆಯರ ಪೂಜಾ ಸಡಗರ ಹೇಳತೀರದು. ವ್ಯಾಪಾರ-ಉದ್ಯಮಿಗಳ ಮಾಲೀಕರು ತಮ್ಮ ಅಂಗಡಿಯನ್ನು ಸಿಂಗರಿಸಿ ಸಂಭ್ರಮ ಸಡಗರದಿಂದ ಲಕ್ಷ್ಮೀ ಪೂಜೆ ಮಾಡುತ್ತಾರೆ. ಗೋಧೂಳಿ ಲಗ್ನದಲ್ಲಿ ಲಕ್ಷ್ಮೀಪೂಜೆ ಮಾಡುವ ಮೂಲಕ ಸಿರಿ ಸಂಪತ್ತು ಸಮೃದ್ಧಿಗೆ ಲಕ್ಷ್ಮೀದೇವಿಯಲ್ಲಿ ಪ್ರಾರ್ಥನೆ ಮಾಡುತ್ತಾರೆ.

ವ್ಯಾಪಾರಿಗಳ ಹೊಸ ಲೆಕ್ಕಾಚಾರ ಆರಂಭವಾಗುವುದೇ ದೀಪಾವಳಿಯಿಂದ. ಹಿಂದಿನ ವರ್ಷಗಳ ಲೆಕ್ಕಾಚಾರವನ್ನು ಮುಕ್ತಾಯ ಗೊಳಿಸಿ ದೀಪಾವಳಿಯಂದು ಹೊಸ ಲೆಕ್ಕ ಆರಂಭಿಸುವುದು ಶುಭ ಸೂಚಕ ಎಂಬುದು ವ್ಯಾಪಾರಿಗಳ ನಂಬಿಕೆ.

### ತ್ಯಾಗ, ಬಲಿದಾನದ ಸಂಕೇತ ಬಲಿಪಾಡ್ಯಮಿ:

ತ್ಯಾಗ, ಬಲಿದಾನದ ಸಂಕೃತ ಬಲಿಪಾಡ್ಯಮಿಯನ್ನು ದೀಪಾವಳಿಯಲ್ಲಿ ವಿಶೇಷವಾಗಿ ಆಚರಿಸಲಾಗುತ್ತದೆ. ದಾನಶೂರ ಬಲಿಚಕ್ರವರ್ತಿಯ ಬಳಿ ಬಂದ ವಾಮನ ಸ್ವರೂಪಿ ಪರಮಾತ್ಮ ಮೂರು ಪಾದಗಳಷ್ಟು ಜಾಗ ಕೇಳಿದಾಗ



ಒಂದು ಹೆಜ್ಜೆಯನ್ನು ಭೂಮಿಯ ಮೇಲೂ, ಇನ್ನೊಂದು ಹೆಜ್ಜೆಯನ್ನು ಆಕಾಶದ ಮೇಲೂ ಇಟ್ಟಾಗ ಉಳಿದೊಂದು ಹೆಜ್ಜೆಯನ್ನು ತನ್ನ ತಲೆಯ ಮೇಲೆ ಇರಿಸಿಕೊಂಡ ಹೆಗ್ಗಳಿಕೆ ಬಲಿ ಚಕ್ರವರ್ತಿಯದು. ಬಲಿಯ ತ್ಯಾಗದ ಸಂಕೇತವಾಗಿ ಆಚರಿಸಲಾಗುವ ಬಲಿಪಾಡ್ಯಮಿಯಂದು ಭಾರತೀಯರೆಲ್ಲರೂ ಬಲಿಯ ಹಿರಿಮೆ ನೆನೆಯುತ್ತಾರೆ. ಆಚರಿಸುವ ಮೂಲಕ ಅವರನ್ನು ಸ್ಮರಿಸುವುದು ಸಂಪ್ರದಾಯವಾಗಿದೆ. ಪ್ರತಿ ಮನೆಗಳಲ್ಲೂ ಸಗಣಿಯಲ್ಲಿ ಬಲೀಂದ್ರನನ್ನು ಇಟ್ಟು ಪೂಜಿಸುವ ಮೂಲಕ ಬಲಿ ಚಕ್ರವರ್ತಿಗೆ ಕೃತಜ್ಞತೆ ಸಲ್ಲಿಸಲಾಗುತ್ತದೆ.

ವರ್ಷವಿಡೀ ನಮಗಾಗಿ ದುಡಿಯುವ ದನಕರುಗಳಿಗೂ ಕೃತಜ್ಞತೆ ಸಲ್ಲಿಸಲು ದೀಪಾವಳಿಯಂದು ಪೂಜೆ ಮಾಡಲಾಗುತ್ತದೆ. ದನಕರುಗಳ ಮೈತೊಳೆದು ಸಿಂಗರಿಸಲಾಗುತ್ತದೆ. ಉತ್ತರ ಕರ್ನಾಟಕ ಮತ್ತು ಮೈಸೂರು ಸೀಮೆಯ ಕೆಲವೆಡೆ ದನಗಳಿಗೆ ಕಿಚ್ಚು ಹಾಯಿಸುವ ಸಂಪ್ರದಾಯವೂ ಇದೆ ರೋಗಗಳು ಬಾರದಿರಲಿ ಎಂದು ಹಿರಿಯರು ಮಕ್ಕಳಿಗೆ ಚುಟಿಕೆ ಹಾಕುವ ಪದ್ಧತಿಯೂ ಇದೆ.

### ನೆಲದ ಹಬ್ಬ ಇದು ಮನುಕುಲದ ಹಬ್ಬ...

ನಾಡಿನ ಸಾಂಸ್ಕೃತಿ ಮತ್ತು ದೀಪಾವಳಿ ಹಬ್ಬದ ಮಧುರ ಸಂಬಂಧವನ್ನು ವಿವೇಚಿಸಹೊರಟರೆ ನಮ್ಮ ಅರಿವಿಗೆ ಬರುವುದೇ ಮಾನವ ಸಂಸ್ಕೃತಿ ಒಳಗೊಂಡ ಜಾನಪದ ಸೊಗಸಿನ ಹತ್ತು ಹಲವು ಮುಖಗಳು. ಪ್ರಾದೇಶಿಕವಾಗಿ ಒಂದಿಷ್ಟು ವ್ಯತ್ಯಾಸ ಅಲ್ಲಲ್ಲಿ ಕಂಡು ಬಂದರೂ ಸಮಸ್ತ ಭಾರತದಾದ್ಯಂತ ಈ ಮುಖಗಳ ನಡುವೆ ಸಮಾನ ಬಂಧುತ್ವವಿದೆ. ಎಲ್ಲ ಕಡೆ ಇದು ನೆಲದ ಹಬ್ಬ, ಹೊಲದ ಹಬ್ಬ, ಕುಲದ ಹಬ್ಬ, ಎಲ್ಲರಿಗೂ ಇದು ಜಳಕದ ಹಬ್ಬ, ಥಳಕಿನ ಹಬ್ಬ, ಥಳಥಳಿಸುವ ಹಬ್ಬ, ಎಲ್ಲ ಕಡೆ ಇದು ಲಕುಮಿಯನ್ನು ಪೂಜಿಸುವ ಹಬ್ಬ. ಲಕ್ಷ್ಮಿ ಎಂದರೆ ಸಂಪತ್ತು, ಸೌಭಾಗ್ಯ ಮತ್ತು ಸಂಭ್ರಮಗಳನ್ನು ಬದುಕಿನ ಎಲ್ಲದರಲ್ಲೂ ಕಾಣುವ ಪ್ರತೀಕ. ನಮ್ಮ ಬದುಕನ್ನು ಸುಗಮಗೊಳಿಸುವ ಎಲ್ಲ ಸಾಧನಗಳಿಗೆ ಕೃತಜ್ಞತೆ ಸಲ್ಲಿಸುವ ವಿಶೇಷ ಪ್ರಕ್ರಿಯೆ. ಹಾಗಾಗಿಯೇ ಈ ಹಬ್ಬದಲ್ಲಿ ಲಕ್ಷ್ಮಿಯನ್ನು ಆರಾಧಿಸುವುದು ನಮ್ಮ ಸಂಪ್ರದಾಯವೇ ಆಗಿದೆ.

ಅದು ನೇಗಿಲು ನೊಗವಿರಬಹುದು, ಹಾಲು ಕರೆಯುವ ಕಾಮಧೇನುವಿರಬಹುದು. ಅಂಗಡಿಯ ಗಲ್ಲಾ ಪೆಟ್ಟಿಗೆ ಇರಬಹುದು, ಧಾನ್ಯ ರಾಶಿಯೇ ಇರಬಹುದು, ಈ ಎಲ್ಲದರಲ್ಲಿ ಸರಳ ಸಂಸ್ಕೃತಿಯ ಸಂಭ್ರಮ - ಸೊಗಸು, ಬೆಡಗು, ಬಿನ್ನಾಣವನ್ನು ನಾವು ಕಾಣುತ್ತೇವೆ.

ಅದುವೇ ದೀಪಾವಳಿ ವಿಶೇಷತೆ, ಪುಟ್ಟ ಹಣತೆ ದೊಡ್ಡ ಬೆಳಕಿಗೆ ನಾಂದಿಯಾಗಲಿ ಎಂಬ ಸಾಂಸ್ಕೃತಿಕ ಸಂದೇಶಗಳನ್ನು ಹೊತ್ತು ದೀಪಾವಳಿ ಒಂದು ಕಲಾತ್ಮಕ ಒಳನೋಟದ ಸಂಭ್ರಮ. ಇದು ಕೇವಲ ಹಬ್ಬವಲ್ಲ .

ನಮ್ಮ ಬದುಕಿನ ಬೆಳಕು. ಆ ಮಹಾ ಬೆಳಕು ಮಹಾದ್ವಾರದ ಮೂಲಕ ಬಂದು ನಮ್ಮೆಲ್ಲರ ಬಾಳನ್ನು ನಿತ್ಯವೂ ಬೆಳಗಲಿ ಎಂದು ಆಶಿಸೋಣ.

**ಶ್ರೀ ಕೃಷ್ಣನ ಗೀತೆಯಲ್ಲಿ ಹೀಗೆ ಹೇಳಿದ್ದಾನೆ.**

ದೀಪಾವಳಿ ಹಿಂದಿರುವ ವಿಶೇಷ ಸಂಗತಿಯೊಂದು ಹಲವರಿಗೆ ತಿಳಿದಿಲ್ಲ. ದ್ವಾಪರ ಯುಗದ ಸಂದರ್ಭದಲ್ಲಿ ಭಾರತೀಯರ ವರ್ಷಾರಂಭ ಚೈತ್ರದಲ್ಲಲ್ಲ,ಮಾರ್ಗಶಿರದಲ್ಲಿ ಆಗುತ್ತಿತ್ತು. ಅದಕ್ಕೆಂದೇ ಮಾರ್ಗಶಿರ ಮಾಸವನ್ನು ಆಗ್ರಹಾಯಣ (ವರ್ಷದ ಮೊದಲ ತಿಂಗಳು) ಎಂದು ಕರೆಯುತ್ತಿದ್ದರು. ಮಾಸಗಳಲ್ಲಿ ನಾನು ಮಾರ್ಗಶೀರ್ಷ. "ಮಾಸಾನಾಂ ಮಾರ್ಗಶೀರ್ಷೋಸ್ಮಿ..." ಎಂದು ಶ್ರೀಕೃಷ್ಣ ಗೀತೆಯಲ್ಲಿ ಹೇಳಿದ್ದೂ ಈ ಕಾರಣಕ್ಕಾಗಿಯೇ. ಈ ಪದ್ಧತಿಯಂತೆ ವರ್ಷದ ಕೊನೆಯ ತಿಂಗಳು ಫಾಲ್ಗುಣ ಅಲ್ಲ ಕಾರ್ತೀಕ.ಹೀಗಾಗಿ ಕಾರ್ತಿಕ ಮಾಸದಲ್ಲಿ ಆಚರಿಸುವ ದೀಪಾವಳಿ - ಮುಗಿದ ವರ್ಷದ ಬೀಳ್ಕೊಡುಗೆ ಬರಲಿರುವ ವರ್ಷದ ಸ್ವಾಗತ. ದೀಪದ ಸಾಲು ನಮ್ಮನ್ನು ಬಿಟ್ಟು ತೆರಳುತ್ತಿರುವ ಕಾಲಪುರುಷನಿಗೆ ಹಿಡಿದ ಹಿಲಾಲು ನಮ್ಮೆಡೆಗೆ ಬರುತ್ತಿರುವ ಕಾಲ ಪುರುಷನಿಗೆ ಹಿಡಿದ ದೀವಟಿಗೆ.

ಕತ್ತಲು ಎಂದರೆ ತಮೋಗುಣ, ಕತ್ತಲು ಎಂದರೆ ಅಜ್ಞಾನ, ಬೆಳಕು ಎಂದರೆ ಸತ್ವಗುಣ, ಬೆಳಕು ಎಂದರೆ ಜ್ಞಾನ, ಕತ್ತಲನ್ನು ಮನೆಯಿಂದ ಓಡಿಸಬೇಕು, ಮನದಿಂದಲೂ, ಈ ಎರಡೂ ಕತ್ತಲನ್ನೋಡಿಸುವ ಹಬ್ಬವೇ ದೀಪಾವಳಿ.

**ಸುಖ ದುಃಖೇ ಸಮೇ ಕೃತ್ವಾ...**

ವಿಚಿತ್ರವೆಂದರೆ ದೀಪ ಹಚ್ಚಿ ಕತ್ತಲನ್ನೋಡಿಸಬೇಕೆಂದರೆ ಮೊದಲು ಕತ್ತಲಾಗಬೇಕು. ಮೊದಲು ಕತ್ತಲಿಂದ ಮುಚ್ಚಿಕೊಳ್ಳಬೇಕು, ಮತ್ತೆ ಬೆಳಕಿನಲ್ಲಿ ಬೆತ್ತಲಾಗಬೇಕು, ಕತ್ತಲಿಲ್ಲದೆ ಬೆಳಕಾಗುದು, ಬೆಳಕಾಗದೆ ಕತ್ತಲು ಹರಿಯದು. ಇದು ಬಗೆಹರಿಯದ ದ್ವಂದ್ವ. ಸುಖ ದುಃಖಗಳೂ ಹೀಗೇ, ದುಃಖವಿಲ್ಲದೆ ಸುಖವಿಲ್ಲ, ಸುಖವಿರುದ ದುಃಖವಿಲ್ಲ, ಎರಡರ ಹೊಂದಾಣಿಕೆಯೇ ಬಾಳಿನ ಬೆಳಕು. 'ಸುಖದುಃಖೇ ಸಮೇ ಕೃತ್ವಾ' ಎಂದು ಉಪನಿಷತ್ತು ಸಾರುತ್ತದೆ. ತಮಸೋ ಮಾ ಜ್ಯೋತಿರ್ಗಮಯ - ಕೈ ಹಿಡಿದು ನಡೆಸು ನಮ್ಮನ್ನು ಕತ್ತಲಿನಿಂದ ಬೆಳಕಿನೆಡೆಗೆ ಒಳ್ಳೆಯ ಮಾತು ಒಳ್ಳೆಯ ಬೆಳಕೇ. ನಮ್ಮ ಭಾರತೀಯ ಮೂಲ ಸಂಸ್ಕೃತಿಯಲ್ಲೇ ಬೆಳಕಿನ ಪ್ರವಾಹವಿದೆ ಎಂದರು ಆಚಾರ್ಯಮಧ್ವರು. ಮಾತೆಲ್ಲವೂ ಜ್ಯೋತಿಯೇ ಎಂದರು ಬಸವಣ್ಣ. ನಾವೆಲ್ಲರೂ ಪ್ರೀತಿಯ ಮಾತಿನ ಜ್ಯೋತಿ ಹಚ್ಚೋಣ. ಆಗ ಎಲ್ಲ ಪುರಾಣಪುರುಷರ, ಸಾಧು ಸಂತರ ಸಂದೇಶದ ದೀಪಾವಳಿ ನಮ್ಮೆಲ್ಲರ ಬಾಳಿಗೆ ಮಹಾ ಬೆಳಗಾಗುತ್ತದೆ.

ಬಲ್ಮೆ ತೋಳಿಗೆ ದೀಪ, ದುಡಿಮೆ ಬೆವರಿನ ದೀಪ,
ಸಹನೆ ಅನುಭವ - ದೀಪ ಬದುಕಿನಲ್ಲಿ,
ಮುನಿಸು ಒಲವಿಗೆ ದೀಪ,
ಕರುಣೆ ನಂದಾದೀಪ ಲೋಕದಲ್ಲಿ!

ಎಂದು ದೀಪಾವಳಿ ಹಬ್ಬವನ್ನು ಬಣ್ಣಿಸಿದ್ದಾರೆ ಪ್ರಸಿದ್ಧ ಕನ್ನಡದ ಕವಿ ಡಾ॥ ಕೆ. ಎಸ್. ನರಸಿಂಹಸ್ವಾಮಿ. ಈ ಸಾಲುಗಳು ಎಷ್ಟು ಅರ್ಥಪೂರ್ಣ ಅಲ್ಲವೇ? ಬನ್ನಿ... ಮನೆಮನೆ ಗಳಲ್ಲಿ ದೀಪ ಬೆಳಗೋಣ. ಮನಗಳಿಗೆ ಜ್ಞಾನದ ದೀವಿಗೆ ಹಚ್ಚೋಣ. ಈ ಭವ್ಯವಾದ, ದಿವ್ಯವಾದ ಬೆಳಕು ನಮ್ಮ ಬಾಳನ್ನು ನಿತ್ಯವೂ ಬೆಳಗಲಿ ಎಂದು ಮನದುಂಬಿ ಹಾರೈಸೋಣ.

**ಹಬ್ಬಗಳ ರಾಜ...**

ಎಲ್ಲ ಹಬ್ಬಗಳೂ ಒಂದಿಲ್ಲೊಂದು ಧಾರ್ಮಿಕ ಆಚರಣೆ ಮೂಲಕ ಗಮನ ಸೆಳೆದರೆ ಹಬ್ಬಗಳ ರಾಜನಾದ ದೀಪಾವಳಿ ಎಲ್ಲ ವಯೋಮಾನದವರಿಗೂ ಕಣ್ಣಿಗೆ ಕಾಣುವ ಹಬ್ಬ. ನಾಡಿನ ಸಂಸ್ಕೃತಿ ಮತ್ತು ದೀಪಾವಳಿ ಹಬ್ಬದ ಮಧುರ ಸಂಬಂಧವನ್ನು ವಿವೇಚಿಸಹೊರಟರೆ ನಮ್ಮ ಅರಿವಿಗೆ ಬರುವುದೇ ಮಾನವ ಸಂಸ್ಕೃತಿ ಒಳಗೊಂಡ ಜಾನಪದ ಸೊಗಸಿನ ಹತ್ತು ಹಲವು ಮುಖಗಳು, ಪ್ರಾದೇಶಿಕವಾಗಿ ಒಂದಿಷ್ಟು ವ್ಯತ್ಯಾಸ ಅಲ್ಲಲ್ಲಿ ಕಂಡು ಬಂದರೂ ನಾಡಿನಾದ್ಯಂತ ಈ ಮುಖಗಳ ನಡುವೆ ಸಮಾನ ಬಂಧುತ್ವವಿದೆ.

ನಮ್ಮ ಬದುಕನ್ನು ಸುಗಮಗೊಳಿಸುವ ಎಲ್ಲ ಸಾಧನೆಗಳಿಗೆ ಕೃತಜ್ಞತೆ ಸಲ್ಲಿಸುವ ಹಬ್ಬವೇ ದೀಪಾವಳಿ. ಒಟ್ಟಿನಲ್ಲಿ ಪದಗಳ ವರ್ಣನೆಗೆ ನಿಲುಕಲಾರದ ಹಬ್ಬವಾಗಿದೆ ನಮ್ಮ ಈ ದೀಪಾವಳಿ. ಅದು ನೇಗಿಲು ನೊಗರವಿರಬಹುದು. ಹಾಲು ಕರೆಯುವ ಕಾಮಧೇನುವಿರಬಹುದು, ಅಂಗಡಿಯ ಗಲ್ಲಾಪೆಟ್ಟಿಗೆ ಇರಬಹುದು. ಧಾನ್ಯ ರಾಶಿಯೇ ಇರಬಹುದು, ಈ ಎಲ್ಲದರಲ್ಲಿ ಸರಳ ಸಂಸ್ಕೃತಿಯ ಸಂಭ್ರಮ ಸೊಗಸು, ಬೆಡಗು - ಬಿನ್ನಾಣವನ್ನು ನಾವು ಕಾಣುತ್ತೇವೆ. ಪುಟ್ಟ ಹಣತೆ ದೊಡ್ಡ ಬೆಳಕಿಗೆ ನಾಂದಿಯಾಗಲಿ ಎಂಬ ಸಾಂಸ್ಕೃತಿಕ ಸಂದೇಶಗಳನ್ನು ಹೊತ್ತ ದೀಪಾವಳಿ ಒಂದು ಕಲ್ಮಾತಕ ಒಳನೋಟದ ಸಂಭ್ರಮವೇ ಆಗಿದೆ ಎನ್ನಬಹುದು. ಹಾಗೆಯೇ ಇದನ್ನು 'ಹಬ್ಬಗಳ ರಾಜ' ಎನ್ನುತ್ತಾರೆ.



ಧಾರಾವಾಹಿ

# ಹರಿಕಥಾಮೃತಸಾರ ಮಹಿಮೆ ಬಲು ಅಪಾರ



- ಶ್ರೀಮತಿ. ಪ್ರಿಯಾ ಪ್ರಾಣೇಶ ಹರಿದಾಸ ಕಾಬಂಡಕಿ
8059436752

**ಹಿಂದಿನ ಸಂಚಿಕೆಯಲ್ಲಿ...**

ಹರಿಕಥಾಮೃತಸಾರದ ಮಹತ್ವ ಮತ್ತು ಮಂಗಳಾ ಚರಣೆ ಸಂಧಿಯಲ್ಲಿ ಅಭಿಮಾನಿ ದೇವಿಗಳು ಸ್ಮರಿಸುತ್ತಾರೆ ಮತ್ತು ಪಂಚಬೇಧಗಳ ತತ್ವವನ್ನು ತಿಳಿಸಿ ನಂತರ ಕರುಣಾ ಸಂಧಿಯಲ್ಲಿ ಭಕ್ತರಿಗೆ ಯಾವ ರೀತಿ ಕರುಣಿಯಾಗಿ, ಸೇವಕ ನಾಗಿ ಕೆಲಸ ಮಾಡುತ್ತಾನೆ ಎಂದು ಹೇಳಿದ್ದಾರೆ.

**ಮುಂದುವರಿದ ಭಾಗ....**

ವ್ಯಾಪ್ತಿ ಸಂಧಿ ಇದು ಹರಿಕಥಾಮೃತಸಾರದ ಮೂರನೇ ಸಂಧಿಯಾಗಿದೆ. ಇಲ್ಲಿ ಭಗವಂತನ ಸರ್ವತ್ರ ವ್ಯಾಪ್ತನಾಗಿ ಸಮಸ್ತ ಜೀವಿಯ ಅಂತರಯಾಮಿಯಾಗಿ ನಿಯಾಮಕನಾಗಿರುವನು. ಭಗವಂತ ದೋಷವಿದೂರ, ನಿರ್ಲಿಪ್ತ ಅವನು ಅವರ್ಣನೀಯ ವರ್ಣಾತೀತನು ಭಗ ವಂತನು ಐದು ರೂಪದಲ್ಲಿ (ಶಾಂತಿ ಪತಿ ಅನಿರುದ್ಧ, ಕೃತಿ ಪತಿ ಪ್ರದ್ಯುಮ್ನ, ಜಯಾ ಪತಿ ಸಂಕರ್ಷಣ, ಮಾಯಾಪತಿ ವಾಸುದೇವ, ಲಕ್ಷ್ಮೀಪತಿ ನಾರಾಯಣ) ಸರ್ವವ್ಯಾಪ್ತನಾಗಿರು ವನು.

**ಮೊದಲ ನುಡಿಯಲ್ಲಿ ಹೀಗೆ ಹೇಳಿದ್ದಾರೆ.**

**ನುಡಿ**

ಪುರುಷ ರೂಪತ್ರಯ ಪುರಾತನ
ಪುರುಷ ಪುರುಷೋತ್ತಮ ಕ್ಷರಾಕ್ಷರ
ಪುರುಷ ಪೂಜಿತ ಪಾದ ಪೂರ್ಣಾನಂದ ಜ್ಞಾನಮಯ।
ಪುರುಷಸೂಕ್ತಸುಮೇಯ ತತ್ಪುರುಷ
ಹೃತ್ಪುಷ್ಕರನಿಲಯ ಮಹಾ
ಪುರುಷ ಜಾಂಡಾಂರದಿ ಬಹಿರದಿ ವ್ಯಾಪ್ತ ನಿರ್ಲಿಪ್ತ॥

ಅಂದರೆ "ಪುರಿ" ಎಂಬ ನಾಡಿಯಿಂದ ಜೀವ ಮತ್ತು ದೇವನಲ್ಲಿ ಇರುವನು. ಭಗವಂತನು ಪುರುಷರೂಪ ತ್ರಯನು. ಅಂದರೆ ಮಹತ್ತತತ್ವ ಸೃಷ್ಟಿ ಮಾಡಿ, ಬ್ರಹ್ಮಾಂಡದೊಳಗೆ ನಲಿಸಿ, ಸರ್ವಜೀವರ ಹೃದಯಕಮಲದಲ್ಲಿ ಇರುವನು. ಪುರಾತನ ಪುರುಷ ಪುರುಷೋತ್ತಮ ಭಗವದ್ಗೀತೆಯ 15 ನೇ ಅಧ್ಯಾಯವಾದ ಪುರುಷೋತ್ತಮ ಯೋಗದಲ್ಲಿ ಹೇಳಿದ್ದಾರೆ. ಪುರುಷೋತ್ತಮ ಎಂದರೆ ಕ್ಷರ (ನಾಶ) ಮತ್ತು ಅಕ್ಷರ (ನಾಶವಿಲ್ಲದವರು ಪುರುಷರಿಗಿಂತ ಮಿಗಿಲಾದವ ಎಂದರ್ಥ.)

**ಹಾಗೇ ಮುಂದೆ ಪ್ರತಿ ನುಡಿಯಲ್ಲಿ**

ಸರ್ವ ವ್ಯಾಪ್ತಿಯಲ್ಲಿ ಅಂದರೆ ಪಂಚಭೂತ (ಭೂಮಿ, ನೀರು, ಅಗ್ನಿ, ಗಾಳಿ, ಆಕಾಶ) ಮತ್ತು ಸ್ತ್ರೀ ಪುರುಷ, ನಪುಂಸಕರಲ್ಲಿ ಪಂಚತನ್ಮಾತ್ರ (ಗಂಧ, ರಸ, ರೂಪ, ಸ್ಪರ್ಶ, ಶಬ್ದ,) ಮನಸ್ಸಿನಲ್ಲಿ ಚಂದ್ರ ಕಾಲಗುಣ ಸಮಸ್ತ ಪ್ರಕೃತಿಯಲ್ಲೂ ತುಂಬಿರುವ ಹರಿಯನ್ನು ಬ್ರಹ್ಮಾದಿ ದೇವತೆಗಳಿಗೆ ತಿಳಿಯಲು ಆಗುವುದಿಲ್ಲ ಇನ್ನು ನಮ್ಮಂತಹ ಹುಲು ಮಾನವರಿಗೆ ಆಗುವುದಿಲ್ಲ ಎಂದು ನಮಗೆ ಸಾಧ್ಯವಿಲ್ಲ ಎನ್ನುತ್ತಾ ಪ್ರತಿಯೊಂದರಲ್ಲಿ, ಪ್ರತಿಯೊಬ್ಬರಲ್ಲಿ ಅದರದರ ಅವರವರ ಗುಣವಾಗಿ ಮತ್ತು ಗುಣಿಯಾಗಿ ಇರುತ್ತಾನೆ. (ವಸ್ತು ಅಥವಾ ಜೀವಿ) ಆದರೆ ಯಾವ ಬಂಧನ ಹೊಂದಿರುವುದಿಲ್ಲ. ಹಾಗೆ ಪ್ರತಿ ಜೀವಿಯಲ್ಲಿ ಇಂದ್ರಿಯಾಭಿಮಾನಿ ದೇವತೆಗಳ ಮೂಲಕ ಈ ಇಂದ್ರೀಯ ದೇವತೆಗಳಲ್ಲಿ ನಿಂತು ಕೃತಿಪತಿ ಪ್ರದ್ಯುಮ್ನ ನಾದ ಶ್ರೀಹರಿಯೇ ಕರ್ಮ ಮಾಡಿಸುವನು. (ಈಗಿನ ಆಧುನಿಕ ಯುಗದಲ್ಲಿ ಪ್ರತಿ ದೇಹದ ಅಂಗಾಂಗಗಳಿಗೆ ಸ್ಪೇಷಲಿಸ್ಟ್ ಡಾಕ್ಟರು ಇದ್ದಾರೆಯೋ, ಹಾಗೆ ನಮ್ಮ ದೇಹದಲ್ಲಿ ಇಂದ್ರಿಯಗಳಿಗೆ ಇಂದ್ರೀಯಾಭಿಮಾನಿ ದೇವತೆಗಳು ಇದ್ದಾರೆ. ಅಂದರೆ ನಮ್ಮ ಶರೀರದಲ್ಲಿ ಪ್ರತಿ ಇಂದ್ರೀಯಗಳಿಗೆ ದೇವತೆಗಳು ಇದ್ದಾರೆ.)

ಸತ್ವ, ತಮ, ರಜಗಳಿದ್ದು ಅವರಿಗೆ ಉಣಿಸಿ, ಹೀಗೆ ಪಾಪ ನಾಶಕನಾದ ಹರಿ ಕೊನೆಗೆ ಜೀವ ಜಗತ್ತನ್ನು ಭುಂಜಿಸಿ  ತಾನು ಮಾತ್ರ ನಾಶವಾಗದೇ ಇರುವನು.

ನಾವುಗಳು ಜೀವನದಲ್ಲಿ ಗಳಿಸುವ ವಿದ್ಯೆ , ಬುದ್ಧಿ,ಸಿದ್ಧ, ಪ್ರಸಿದ್ಧಿ ಎಲ್ಲದರಲ್ಲಿಯೂ ಕಾರ್ಯ ಕಾರಣವಾಗಿ, ಸೇವ್ಯೆ (ಸೇವೆ ಸ್ವೀಕರಿಸುವ) ಸೇವಕನಾಗಿ ಸಕಾಲದಲ್ಲಿ ಜೀವರಿಗೆ ಏಕಾದಶ ಇಂದ್ರಿಯಗಳಲ್ಲಿದ್ದು ಭೋಗ ವಿಷಯಗಳನ್ನು ಕೊಟ್ಟು ಭೋಗಿಸುತ್ತಾನೆ.

ಇಷ್ಟಾಗ್ಯೂ ನಾವು ಮಲಗಿದಾಗ ಯಾವ ರೀತಿ ಹರಿಯ ಕೃಪೆಯ ಬಗ್ಗೆ ಹೇಳಿದ್ದಾರೆ. ಈ ಕೆಳಗಿನ ನುಡಿಯಲ್ಲಿ

"ಜಾಗರ ಸ್ವಪ್ನಂಗಳೊಳು ವರ ಭೋಗಿಷಯನ ಬಹು ಪ್ರಕಾರ
ವಿಭಾಗಗೈಸಿ ನಿರಂಶ ಜೀವರ ಚಿಚ್ಚ ರೀರವನು
ಭೋಗವಿತ್ತು ಸುಷುಪ್ತಿ ಕಾಲದಿ ಸಾಗರವ ನದಿ ಕೂಡುವಂತೆ
ವಿಯೋಗ ರಹಿತನು ಅಂಶಗಳನೇಕತ್ರಯೈದಿಸುವ ॥

ಜಗನ್ನಾಥದಾಸರು ಎಳೆ ಎಳೆಯಾಗಿ ನಮ್ಮ ಕನಸಿನ ಬಗ್ಗೆ ಹೇಳಿದ್ದಾರೆ,

ಜಾಗರ ಸ್ವಪ್ನ ಸುಶುಪ್ತಿಗಳಲ್ಲಿ ಹರಿಯು ನಮ್ಮ ಸೂಕ್ಷ್ಮ ಶರೀರದಲ್ಲಿ ವಿಭಾಗ ಮಾಡಿ ಒಂದಂಶದಲ್ಲಿ ನಿದ್ರೆ, ಇನ್ನೊಂದಂಶದಲ್ಲಿ ಸ್ವಪ್ನ ತೋರಿಸಿ ಭೋಗ ನೀಡಿ ಸುಶುಪ್ತಿ (ಗಾಢನಿದ್ರೆ) ಕಾಲದಲ್ಲಿ ಅಂದರೆ ಎಲ್ಲ ನದಿಗಳು ಸಾಗರ ಸೇರುವಂತೆ ಎಲ್ಲ ಅಂಶಗಳನ್ನು ಒಂದು ಮಾಡಿ ನಮಗೆ ಎಚ್ಚರ ಮಾಡುತ್ತಾನೆ ಇಲ್ಲವೆ ನಿದ್ರೆಯಲ್ಲಿ ಮುಂದುವರಿಸುತ್ತಾನೆ.

**ಮತ್ತೊಂದು ನುಡಿಯಲ್ಲಿ**

ವಾರಿದನು ಮಳೆಗರೆಯೆ ಬೆಳದಿಹ
ಭೂರುಹಂಗಳ ಚಿತ್ರ ಫಲರಸ
ಬೇರೆ ಬೇರಿಪ್ಪಂತೆ ಬಹುವಿಧ ಜೀವರೊಳಗಿದ್ದು ॥
ಮಾರಮಣನವರವರ ಯೋಗ್ಯತೆ
ಮೀರದಲೆ ಗುಣ ಕರ್ಮಗಳ
ಸಾರ ನಡೆಸುವ ದೇವನಿಗೆ ವೈಷಮ್ಯವೆಲ್ಲಿಹುದೋ ॥


ಎಷ್ಟು! ಅರ್ಥ ಪೂರ್ಣ ಉದಾಹರಣೆ ಎಂದರೆ ಮೋಡ ಮಳೆ  ಸುರಿಸುತ್ತದೆ. ಅದೇ ಮಳೆ ನೀರನ್ನು ಪಡೆದು ಅನೇಕ ತರಹದ ರುಚಿ ಹೊಂದಿದ ಫಲಗಳು ಇರುವಂತೆ ಈ ಭಗವಂತ ತಾನು ನಿರ್ಮಿಸಿದ ಸೃಷ್ಟಿಯಲ್ಲಿದ್ದು ಜೀವರ ಸ್ವಭಾವ ಬೇರೆ ಬೇರೆ ಕೊಟ್ಟು ಅವರ ಯೋಗ್ಯತಾ ಅನುಸಾರ ಸುಖದುಃಖ ಕೊಡುತ್ತಾನೆ. ಹಾಗೇ ಮೂರು ಲೋಕದಲ್ಲಿರುವ ಸಾತ್ವಿಕ ರಾಜಸ ತಾಮಸರಲ್ಲಿದ್ದು ಅವರಲ್ಲಿಯೂ ಸಹ ಯಾವ ವ್ಯತ್ಯಾಸ ಮಾಡದೇ ಯೋಗ್ಯತಾನುಸಾರ ಕರ್ಮ ಭೋಗ ಕೊಟ್ಟು ವಿಹಾರ ಮಾಡುತ್ತಾನೆ.

ಸತ್ವ, ರಜ, ತಮೋ ಮೂರು ಗುಣಗಳೊಂದಿಗೆ ಸಂಬಂಧ ಹೊಂದಿ ಸುಖದುಃಖ ಕೊಟ್ಟು ಒಟ್ಟಾರೆ ಭಗವಂತ ತಂದೆ ತಾಯಿಯಂತೆ ಮಕ್ಕಳ ಆಟ, ಸಂಭ್ರಮ ನೋಡಿ ಸಂಭ್ರಮಿ ಸುತ್ತಾನೆ.

**ಇನ್ನೊಂದು ನುಡಿಯಲ್ಲಿ ಹೇಳುತ್ತಾರೆ.**

ಮಳಲ ಮನೆಗಳ ಮಾಡಿ ಮಕ್ಕಳು ಕೆಲವು ಕಾಲದಲಾಡಿ ಮೋದದಿ
ತುಳಿದು ಕೆಡಿಸುವ ತೆರದಿ ಲಕುಮಿ ರಮಣ ಲೋಕಗಳ//
ಹಲವು ಬಗೆಯಲಿ ನಿರ್ಮಿಸುವ ನಿಶ್ಚಲನು ತಾನಾಗಿದ್ದು ಸಲಹುವ
ಯಲರುಣಿಯೊಪೋಲ್ ನುಂಗುವವ ಗೆಲ್ಲಿಹದೊ ಸುಖ - ದುಃಖ//

ಅಂದರೆ ಮಕ್ಕಳು ಮರಳಿನಲ್ಲಿ ಮನೆ ಮಾಡಿ, ಆಡಿ ಆನಂದಿಸಿ ಆಟ ಮುಗಿದ ಮೇಲೆ ಕೆಡಿಸಿ ಹೋಗುವಂತೆ ಭಗವಂತ ತಾನು ಸೃಷ್ಟಿಸಿದ ಜಗತ್ತನ್ನು ಸಲುಹಿ ಕೊನೆಗೆ ತಾನೇ



ಸಂತೋಷದಿಂದ ನಾಶ ಮಾಡುವನು.

ಹೀಗೆ ವ್ಯಾಪ್ತಿ ಸಂಧಿ ಯಲ್ಲಿ 32 ಪದ್ಯಗಳು ಇವೆ. ನಾನು ಕೆಲವೊಂದು ಪದ್ಯಗಳ ಉದಾಹರಣೆ ಹೇಳಿರುವೆ.

ಆದರೆ ಈ ಹರಿಕಥಾ ಮೃತಸಾರದ ಚಿಂತನೆ ನಿತ್ಯ ನೂತನವಾಗಿದೆ. ಒಂದೊಂದು ಸಂಧಿ ನಮ್ಮ ಜೀವನಕ್ಕೆ ದಾರಿ ದೀಪವಾಗಿದೆ. ಈ ಸಂಧಿಯಲ್ಲಿ ಭಗವಂತನ ವ್ಯಾಪ್ತತೆ ಬಗ್ಗೆ ತಿಳಿದಿದ್ದಿರಿ ಇನ್ನು,

ಮುಂದಿನ ಸಂಧಿಯಲ್ಲಿ ನಾವು ಉಣ್ಣುವ ಆಹಾರದಲ್ಲಿನ ಚಿಂತನೆಯನ್ನು ತಿಳಿಯೋಣ ಹರಿಕಥಾಮೃತಸಾರದ ಸವಿ ಸವಿಯೋಣ.

**(ಮುಂದುವರಿಯುವುದು)**

# ತಿರುಮಲ ತಿರುಪತಿ ದೇವಸ್ಥಾನಗಳು

## ವಿಜ್ಞಪ್ತಿ


'ಸಪ್ತಗಿರಿ' ಬಗ್ಗೆ ತೋರಿಸುವ ಅಭಿಮಾನ ಅನನ್ಯ ಸಾಮಾನ್ಯ

ತಿ.ತಿ.ದೇ. ಹಾಗೂ ಪಾಠಕರಿಗೆ ಮಧ್ಯ ವಾರಧಿಯಾಗಿ ಇರುವ 'ಸಪ್ತವರ್ಣ' ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

'ಸಪ್ತಗಿರಿ' ಪತ್ರಿಕೆ ಬೆಲೆಯಲ್ಲಿ ಬದಲಾವಣೆ

ನಿಮ್ಮ ಮನೆಗೆ ಸಪ್ತಗಿರೀಶನು ಬಂದ ಅನುಭೂತಿಯನ್ನು ಪಡೆಯಿರಿ.

'ಸಪ್ತಗಿರಿ' ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆಗೆ ಚಂದಾದಾರರಾಗಿ ಕಟ್ಟಿ.



ಸ್ವಾಮಿಯವರ ಅಕ್ಷರ ಪ್ರಸಾದವನ್ನು ಪ್ರತಿ ತಿಂಗಳು ಪಡೆದು ಕೊಳ್ಳಿ




# ಸಪ್ತಗಿರಿ




### ಆಧ್ಯಾತ್ಮಿಕ ಸಚಿತ್ರಮಾಸಪತ್ರಿಕೆ

(ತೆಲುಗು, ತಮಿಳು, ಕನ್ನಡ, ಹಿಂದಿ, ಆಂಗ್ಲ, ಸಂಸ್ಕೃತ ಭಾಷೆಗಳು)

..... ಚಂದಾ ವಿವರಗಳು.....

ಬಿಡಿ ಪ್ರತಿ ರೂ. 20/-

ವಾರ್ಷಿಕ ಚಂದಾ : ರೂ. 240/-

ಆಜೀವ ಚಂದಾ : (12 ವರ್ಷಗಳು) ರೂ. 2,400/-

ವಿದೇಶಿ ವಾರ್ಷಿಕ ಚಂದಾ : ರೂ. 1030/-

ಬೆಲೆಯಲ್ಲಿ ಬದಲಾವಣೆ ಸೆಪ್ಟೆಂಬರ್, 2022 ರಿಂದ ಜಾರಿಗೆ ಬಂದಿದೆ.
ನೂತನ ಚಂದಾದಾರರಿಗೆ ಮಾತ್ರವೇ ಈ ಬದಲಾವಣೆ ವರ್ತಿಸುತ್ತದೆ.

ವಿವರಗಳಿಗೆ:
ಪ್ರಧಾನ ಸಂಪಾದಕರು, ತಿ.ತಿ.ದೇ., ಪ್ರೆಸ್ ಕಾಂಪೌಂಡ್ ಕೆ.ಟಿ.ರೋಡ್ಡು, ತಿರುಪತಿ : 517 507.
ಫೋನ್ : 0877 - 2264363 ,2264543



# ರಾಶಿ ಫಲಗಳು



ಮೂಲ- ಬ್ರಹ್ಮಶ್ರೀ ತಂಗಿರಾಲ ವೆಂಕಟಕೃಷ್ಣ ಪೂರ್ಣಪ್ರಸಾದ್ ಸಿದ್ಧಾಂತಿ
ಅನುವಾದ- ಕೆ.ಎನ್.ಎಸ್

**ಮೇಷ**

ಧೈರ್ಯ, ಚಾಕಚಕ್ಯತೆ ತೋರಿಸಿ ಪ್ರಯತ್ನಿಸಿದ ಕಾರ್ಯಕ್ರಮಗಳಲ್ಲಿ ಜಯ. ಆಕಸ್ಮಿಕವಾಗಿ ಅದೃಷ್ಟವು ನಿಮ್ಮನ್ನು ವರಿಸಲಿದೆ. ದೂರ ಪ್ರಾಂತ್ಯಗಳಲ್ಲಿ ಓದು ಸುಗಮವಾಗಲಿದೆ. ಉನ್ನತ ವಿದ್ಯಾಭ್ಯಾಸಕ್ಕೆ ಶ್ರೀಕಾರ ಹಾಕುವಿರಿ. ಉದ್ಯೋಗ ವಿಷಯಗಳಲ್ಲಿ ನ್ಯಾಯ ಸಂಬಂಧಿ ಸಲಹೆಗಳನ್ನು, ಪರಿಷ್ಕಾರ ಮಾರ್ಗಗಳನ್ನು ನೀರೀಕ್ಷಿಸಲಿದ್ದೀರಿ.

**ವೃಷಭ**

ಮಾತನ್ನು ಹತೋಟಿಯಲ್ಲಿಟ್ಟುಕೊಳ್ಳುವುದು ಉತ್ತಮ. ಅವಶ್ಯವೂ ಹೌದು. ಗೃಹದಲ್ಲಿ ಸಮಸ್ತ ಕಾರ್ಯಗಳನ್ನು ಚೊಕ್ಕವಾಗಿ ಮಾಡುವುದನ್ನು ಅನುಷ್ಠಾನಕ್ಕೆ ತರುವಿರಿ. ಯಾವುದೇ ಕಾರ್ಯಶ್ರಮವಿಲ್ಲದೇ, ನೆರವೇರಲಿದೆ, ಸೋಮಾರಿತನ, ಬಂಧುವೈರ ಇಲ್ಲದೇ ಇರುವುದಿಲ್ಲ. ಪವಿತ್ರ ಗ್ರಂಥ ಪಠನದಿಂದ ಮನಃ ಶಾಂತಿವುಂಟಾಗುವುದು. ಪುತ್ರ -ಪುತ್ರಿಯರ ಸಂತಾನ ವಿದ್ಯಾರ್ಜನೆಯಲ್ಲಿ ಮುನ್ನಡೆಯುವುದರಿಂದ ನಿಮಗೆ ಆನಂದ ದೊರೆಯಲಿದೆ.

**ಮಿಥುನ**

ಆಕಸ್ಮಿಕ ಧನಲಾಭವು ನಿಮ್ಮನ್ನು ಕೂಡಲಿದೆ. ಅಂದವಾದ, ಅಲಂಕರಿಸಲ್ಪಡುವ ಗೃಹವನ್ನು ಖರೀದಿಸಬೇಕೆಂಬ ಆಲೋಚನೆ ಸಾಕಾರವಾಗಲಿದೆ. ಅಧಿಕ ಧನವ್ಯಯ, ಅನಾವಶ್ಯಕವಾದ ಖರ್ಚುಗಳು, ಪ್ರಯಾಣದಲ್ಲಿ ವಿಘ್ನಗಳು, ವೇಳಾತ್ರಿಕ್ರಮದ ಭೋಜನ ಸೇವಿಸದಿರುವಿಕೆ, ಮಾತೃವರ್ಗದವರಿಗೆ ಸುಖ ಸಂತೋಷಗಳು, ಮನಃ ಶುದ್ಧಿಯಿಂದ ಮಾಡಿದ ಕೆಲಸಗಳು ಅನುಕೂಲಕರವಾಗಿದೆ.

**ಕರ್ಕಾಟಕ**

ವೃತ್ತಿ ನೈಪುಣ್ಯದಿಂದ ಸಮಾಜದಲ್ಲಿ ಮುನ್ನಡೆ ಕಾಣುವಿರಿ. ಎಲ್ಲರ ಆಶೀರ್ವಾದ ಹಾರೈಕೆಗಳು ನಿಮಗೆ ಸದಾ ಇರಲಿವೆ. ಎಷ್ಟು ಸಮಸ್ಯೆಗಳಿದ್ದರೂ ಅವುಗಳಿಗೆ ಪರಿಷ್ಕಾರ ಲಭಿಸಲಿದೆ. ಅಲ್ಲದೇ ಗುರು ಬಲ ಪುಷ್ಕಳವಾಗಿರಲಿದೆ. ಧೈರ್ಯದಿಂದ, ಚಾಕಚಕ್ಯತೆಯಿಂದ ವ್ಯವಹರಿಸುವಿರಿ ದೈವಿ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವಿರಿ. ಈ ಮಾಸದಲ್ಲಿ ನಿಮಗೆ ವಿಶೇಷ ಶುಭ ಯೋಗ ಕೈಗೂಡಲಿದೆ.

**ಸಿಂಹ**

ದೇವತಾರಾಧನೆಯಲ್ಲಿ ಪಾಲ್ಗೊಳ್ಳುವುದು, ಮಂತ್ರಸಿದ್ಧಿ, ದೈವ ಕಾರ್ಯಾಚರಣೆ, ಅಲಂಕಾರ ಪ್ರಿಯತೆ , ನೂತನವಾದ ಗೃಹ -ವಾಹನಾದಿಗಳ ಖರೀದಿ ಮಾಡಲಿದ್ದೀರಿ ವೃತ್ತಿ, ವ್ಯವಹಾರಗಳು ಕೂಡಿ ಬರಲಿವೆ. ವ್ಯವಸಾಯದಾರರಿಗೆ ಅನುಕೂಲವಾದ ಸಮಯ, ಧೈರ್ಯದಿಂದ ಸಮಸ್ಯೆಗಳಿಗೆ ಪರಿಷ್ಕಾರದ ಹಾದಿಯಲ್ಲಿ ಅಸ್ಥೆ ತೋರುವಿರಿ, ನಿಲುವು ಸಾಧಿಸುತ್ತೀರಿ ಹೊಸ ಹಾದಿಗೆ ನಾಂದಿ ಹಾಡಲಿದ್ದೀರಿ.

**ಕನ್ಯ**

ಪಿತೃವರ್ಗದಲ್ಲಿ ಆರೋಗ್ಯಲೋಪ, ಚತುಷ್ಪಾದ ಜಂತುಗಳ ಕಾಟ, ಅಧಿಕಾರ ವೃದ್ಧಿ, ಕಲಾಪೋಷಣೆ, ದೂರ ಪ್ರದೇಶಗಳಿಗೆ ಭೇಟಿ, ಕುಟುಂಬದಿಂದ ದೂರವಾಗಿದ್ದು ಸಮಯ ಕಳೆಯುವ ಪರಿಸ್ಥಿತಿ, ಧನ ಸಂಪಾದನೆಯ ಮಾರ್ಗ ಜೊತೆಗೆ ಧನವ್ಯಯವೂ ಬೆಳೆದು ನಿಲ್ಲಲಿದೆ. ಪರಿಣಾಮ ಆರೋಗ್ಯ ಕುಗ್ಗಲಿದೆ. ನಂತರ ಸ್ವಾಸ್ಥ್ಯ ಕೈಗೂಡಲಿದೆ. ವಾಕ್ಚಾತುರ್ಯ ಅದ್ಭುತವಾಗಿ ಪ್ರದರ್ಶಿಸಿ ಎಲ್ಲರ ಮನ್ನಣೆಗೆ ಪಾತ್ರರಾಗುವಿರಿ.

**ತುಲಾ**

ತಿಳುವಳಿಕೆಯಿದ್ದರೂ ಸಮಯ ಅನುಕೂಲವಾಗಿಲ್ಲದಿರುವುದರಿಂದ ಇತರರೊಡನೆ ಜಗಳಕ್ಕಿಳಿಯುವ ಅವಕಾಶವಿದೆ. ಇತರರೊಂದಿಗೆ ಸಂಯಮ ಪಾಲಿಸುವುದು ಅವಶ್ಯ. ಗ್ರಹಸ್ಥಿತಿ ಸಾಮಾನ್ಯವಾಗಿದೆ. ಗೌರವಕ್ಕೆ, ಧನಕ್ಕೆ ಕೊರತೆಯಿಲ್ಲ. ಅವಸರದ ನಿರ್ಣಯಗಳನ್ನು ನಿಲ್ಲಿಸಿ ದೈವತಾನುಗ್ರಹ ಉಂಟಾಗಲಿದೆ. ಉಪಾಸನಾ ಬಲ ವೃದ್ಧಿಯಾಗಲಿದೆ. ಆಧ್ಯಾತ್ಮಿಕವಾಗಿ ಕಾಲ ಸಂದಾಯ ಮಾಡಲಿದ್ದೀರಿ. ಮನಃ ಸಂತೃಪ್ತಿಯುಂಟಾಗಲಿದೆ.

**ವೃಶ್ಚಿಕ**

ಶರೀರ ಬಾಧೆ ತೀರಿ ಎಲ್ಲಾ ಬಗೆಯ ಸೋಂಕು ನಾಶವಾಗುತ್ತದೆ. ಸ್ವಚ್ಛವಾದ, ನಿರ್ಮಲವಾದ ಆಲೋಚನೆಗಳು ಬರಲಿದೆ. ಸಮಸ್ತ ದೋಷಗಳು ತೊಲಗಿ ಸಕಲೈಶ್ವರ್ಯಗಳು ಬರಲಿವೆ. ಹಿಂದೆ ಹೊಡೆದ ನೋವು ಬಡಿತಗಳು ಸತ್ಫಲಗಳನ್ನು ನೀಡಲಿವೆ. ಹೊಸ ವ್ಯವಹಾರಗಳಿಗೆ ಶ್ರೀಕಾರ ಹಾಡಲಿದ್ದೀರಿ. ಆಲೋಚನೆಯ ವಿಧಾನದಲ್ಲಿ ನೂತನ ಅಧ್ಯಾಯ ಆರಂಭವಾಗಲಿದೆ. ಇತರರಿಗೆ ಮಾದರಿಯಾಗುವ ವ್ಯಕ್ತಿತ್ವವನ್ನು ಹೊಂದಲಿದ್ದೀರಿ.

**ಧನಸ್ಸು**

ಸಮಸ್ತ ದೋಷಗಳು ಕೊನೆಗೊಂಡು, ಸಕಲೈಶ್ವರ್ಯಗಳು ಉಂಟಾಗಲಿವೆ. ಹೊಸಮನೆ ಖರೀದಿ ಇಲ್ಲವೇ ಗೃಹ ನಿರ್ಮಾಣಕ್ಕೆ ಪ್ರಯತ್ನ ಮಾಡುವುದು ಘಟಿಸಲಿದೆ ಗೃಹ ನಿರ್ಮಾಣಕ್ಕೆ ಸಕಾಲ ಒದಗಿ ಬರಲಿದೆ. ಆರ್ಥಿಕವಾಗಿ ಧೃಡವಾಗಿ ಎಂತಹ ಖರ್ಚನ್ನು ನಿಭಾಯಿಸುವಿರಿ. ವೃತ್ತಿ ವ್ಯವಹಾರಗಳು ಕಲಿತು ಬರುವ ಸಮಯ ಗೃಹ ಸ್ಥಿತಿ ಅನುಕೂಲಕರವಾಗಲಿದೆ. ನಿಮ್ಮ ಸಹಾಯ ಕೋರುವವರು ನಿಮಗೆ ಶುಭ ಕೋರುವರು.

**ಮಕರ**

ಹನುಮಾನ್ ಚಾಲೀಸ, ಆಂಜನೇಯ ಸಂಬಂಧವಾದ ಸ್ತೋತ್ರಗಳನ್ನು ಪಠಿಸುವುದರ ಮೂಲಕ ಕಾರ್ಯ ಸಿದ್ಧಿಯಾಗಲಿದೆ. ಅತಿಶ್ರಮ, ಉದ್ಯೋಗ ವಿಷಯಗಳು ಅನುಕೂಲಕರವಾಗಿರದೆ. ಚಿಂತೆ ಮುಂತಾದ ವ್ಯತಿರಿಕ್ತ ಗ್ರಹ ಪ್ರಭಾವಗಳು ಬೀರಲಿವೆ. ದುರ್ಗಾ ಮಾತೆಯನ್ನಾಶ್ರಯಿಸಿ ಶರಣು ಹೋಗಿ, ಕಷ್ಟಗಳನ್ನು ಎದುರಿಸಿರಿ. ಸಂತಾನ, ಸನ್ಮಾರ್ಗದಲ್ಲಿ ನಡೆಸುವುದು ತುಂಬಾ ಅವಶ್ಯಕವಾಗಿದೆ.

**ಕುಂಭ**

ಶ್ರೀ ವೆಂಕಟೇಶನ ಆರಾಧನೆ ಉತ್ತಮ ಫಲ ನೀಡಲಿದೆ. ಧನವೃದ್ಧಿ ಖ್ಯಾತಿಗೊಳಗಾಗುವಿರಿ ವೃತ್ತಿ - ವ್ಯವಹಾರಗಳು ಅನುಕೂಲವಾಗಲಿವೆ. ಸೋದರ ವರ್ಗದೊಂದಿಗೆ ಭೇದವುಂಟಾಗಲಿದೆ. ರಕ್ತದೊತ್ತಡ, ಮಧುಮೇಹದಂತಹ ದೀರ್ಘ ಕಾಲಿಕ ವ್ಯಾಧಿಗಳು ಹತೋಟಿಯಲ್ಲಿರಿಸಲು ಪ್ರಯತ್ನಿಸಿ ರಾಜಕೀಯ ರಂಗದಲ್ಲಿ ಮುನ್ನಣೆಯಾಗಲಿದೆ.

**ಮೀನ**

ಗುರುಗಳ ಆಶೀರ್ವಾದ ದೊರೆಯಲಿದೆ. ನೂತನ ವಿಷಯಗಳನ್ನು ಕಲಿತುಕೊಳ್ಳುವ ಶ್ರದ್ಧೆ ತೋರಲಿದ್ದೀರಿ. ಶರೀರದ ಸ್ವಸ್ಥ್ಯ ಚೆನ್ನಾಗಿರಲಿದೆ. ವೃತ್ತಿ - ವ್ಯವಹಾರಗಳಲ್ಲಿ ಲಾಭಗಳು ದೊರೆಯಲಿವೆ. ದೈವ ಸಂಬಂಧಿ ಕಾರ್ಯಕ್ರಮಗಳಲ್ಲಿ ಆತುರದಿಂದ ಪಾಲ್ಗೊಂಡು ಆನಂದ ಅನುಭವಿಸಲಿದ್ದೀರಿ ಸಂತಾನದ ವಿದ್ಯಾ ವಿಷಯಗಳಲ್ಲಿ ಮುನ್ನಡೆಸುವಿರಿ ಪ್ರಸ್ತುತ ಆರೋಗ್ಯದ ಕಾಳಜಿ ಅವಶ್ಯಕ ತೊಂದರೆಯೇನಿಲ್ಲ ವಿದ್ಯಾರ್ಥಿಗಳು ವಿಜಯ ಸಾಧಿಸಲಿದ್ದೀರಿ.

ಧಾರಾವಾಹಿ



# ಆಳ್ವಾರುಗಳು ಕಂಡ ತಿರುವೇಂಗಡ

- ಎಂ. ಆರ್. ನರಸಿಂಹನ್

ಇನ್ನಷ್ಟು ಸ್ಪಷ್ಟವಾಗಿ ಇನ್ನೊಂದು ಪಾಶುರ.(೯)

ನೆಡಿಯಾನೇ ವೇಂಗಡವಾ ನಿನ್ ಕೋಯಲಿನ್ ವಾಶಲ್
ಅಡಿಯಾರುಂ ವಾನವರುಂ ಅರುಂಬೆಯರುಂ ಕಿಡನ್ದಿ ಯೆಂಗುಂ
ಪಡಿಯಾಯ್ ಕಿಡಂದ್ ಉನ್ ಪವಳವಾಯ್ ಕಾಣ್ಬೇನೇ


ಎಂದು ಅವರ ಬಯಕೆಯನ್ನು ತೋಡಿಕೊಳ್ಳುವಾಗ 'ನಿನ್ನ ಗುಡಿಯ ಬಾಗಿಲು' ಎಂಬ ಮಾತುಗಳು ಬರುತ್ತವೆ. ಗುಡಿಯ ಬಾಗಿಲಿನ 'ಪಡಿ' ಎಂದರೆ ಹೊಸ್ತಿಲಾಗಿ ಮಾಡಿ ಕೊಂಡರೆ ವೇಂಗಡದವನ ಹವಳದಂತಿರುವ ಬಾಯನ್ನು ಎಡ ಬಿಡದೆ ನೋಡುತ್ತಿರಬಹುದೆಂಬ ಅವರ ಮನದಾಸೆ ಇಲ್ಲಿ ವ್ಯಕ್ತವಾಗಿದೆ. ಈಗಲೂ ಗುಡಿಯ ಹೊಸಿಲನ್ನು 'ಕುಲಶೇಖರ ಪ್ಪಡಿ' ಎಂದೇ ಕರೆಯುತ್ತಾರೆ.......ಮುಪ್ಪಡರುವ ಮೊದಲೇ, ಪ್ರತಿಯೊಬ್ಬರೂ, ವೇಂಗಡದ ಬೆಟ್ಟವನ್ನೇರಿ, ಅಲ್ಲಿ ನಿಂತಿರುವ ದೈವಕ್ಕೆ ಧೂಪ,ದೀಪ,ನೀರು, ಹೂಗಳಿಂದ ಪೂಜೆ ಸಲ್ಲಿಸ ಬೇಕೆಂದು ಇವರ ಆಗ್ರಹ. (ತಿರುವಾಯ್ಮೊಳಿ (೩-೩-೭) ವೇಂಗಡಕ್ಕೆ ಬರುವವರು ತಮ್ಮನ್ನು ತಾವು ಮರೆಯಬೇಕಂತೆ; ತಮ್ಮ ದೊಡ್ಡಸ್ತಿಕೆಯನ್ನು ಕಟ್ಟಿಟ್ಟು ಬರಬೇಕಂತೆ, ಮೈಮರೆತು ಹಾಡುತ್ತ ಕುಣಿಯುತ್ತ ದೇವರೆದುರು ನಿಲ್ಲಬೇಕಂತೆ ಇಲ್ಲಿ ಜಾತಿ, ಮತಗಳ ಒಡಕು ಇರದು, ದೇವತೆಗಳು, ಮನುಷ್ಯರೆಂಬ ಬೇಧವೂ ಸಲ್ಲದು! ಈ ಪರಮನ ಮುಂದೆ ಜಡ, ಜೀವವೆಲ್ಲವೂ ಸಮನ! ಈ ವರ್ಣನೆಗಳನ್ನೆಲ್ಲಾ ಗಮನಿಸಿದರೆ ವೇಂಗಡ ಬೆಟ್ಟದ ಮೇಲೆ ಇದ್ದಿರಬಹುದಾದ ಗುಡಿಗೆ ಯಾರಾದರೂ, ಯಾವ ಕಾಲದಲ್ಲಾದರೂ, ಹೋಗಿ ಬರುವ ಸೌಕರ್ಯ ಇದ್ದಿತೆಂದು ತೋರುತ್ತದೆ ; ತಾವೇ ಪೂಜೆ ಮಾಡುವ ಸೌಲಭ್ಯವೂ ಇದ್ದಂತೆ ಕಾಣುತ್ತದೆ. ಆ ಕಾಲಕ್ಕಿನ್ನೂ ಗುಡಿ ದೇವರನ್ನು ಒಳಗೆ ಮಾಡಿ ಭಕ್ತರನ್ನು ಹೊರಗೆ ಮಾಡುವ ವ್ಯವಸ್ಥೆಯಾಗಿರಲಿಲ್ಲ..... ಆಳ್ವಾರರ ಕಾಲದಲ್ಲಿ ವೇಂಗಡದ ದೇವರಿಗೆ ಯಾವ ಬಗೆಯಲ್ಲಿ ನಿತ್ಯಾರ್ಚನೆ ನಡೆಯುತ್ತಿದ್ದಿತೋ ತಿಳಿದು ಬರುವುದಿಲ್ಲ. ಕಡೆಗೆ ನಿತ್ಯಾರ್ಚನೆ ನಡೆಯುತ್ತಿದ್ದಿತೇ ಎಂಬುದೂ ಸಂಶಯವೇ. ಆದರೆ ಈ ದೇವರಿಗೆ ನಡೆದುಕೊಳ್ಳುವವರು ತಾವೇ ತಮಗೆ ತಿಳಿದಂತೆ ಪೂಜೆ ಸಲ್ಲಿಸಿ ಹೋಗುವ ವಾಡಿಕೆಯಿದ್ದಿತು. ದೇವರ ಹೆಸರುಗಳನ್ನು ಹಾಡುವುದು, ಮೂರ್ತಿಯ ಮುಂದೆ ದೀಪ ಏಟ್ಟು, ಧೂಪ

ಹಾಕಿ, ಮೂರ್ತಿಯ ಅಡಿಗಳನ್ನು ನೀರಿನಿಂದ ತೊಳೆದು, ಹೂಗಳ ನ್ನಿರಿಸಿ, ಗಂಧವನ್ನು ಪೂಸಿ, ನಮಸ್ಕರಿಸುವುದು - ಇದರ ಪ್ರಸ್ತಾಪ ಅವರ ಪಾಶುರದಲ್ಲಿ ಬೇಕಾದ ಹಾಗೆ ಬರುತ್ತದೆ. ಬಗೆ ಬಗೆಯ ಹೂಗಳ ದಂಡೆಗಳನ್ನು ಕಟ್ಟಿ ಅವುಗಳ ಮಾಲೆಯಿಂದ ಮೂರ್ತಿಯನ್ನು ಸಿಂಗರಿಸುವುದು ಇಲ್ಲಿ ಕಾಣಬರುವ ವಿವರವೇ. ಭಕ್ತರು ಸಲ್ಲಿಸುವ ಪೂಜೆಯೇ ಮುಖ್ಯವೆಂದು ಆಳ್ವಾರರು ನಂಬಿದ್ದರು. ವೃತ್ತಿಯಲ್ಲಿ ಅರ್ಚಕರಾದವರ ಪೂಜೆ ಅಲ್ಲಿ ನಡೆಯುತ್ತಿದ್ದ ಉಲ್ಲೇಖವಂತೂ ಮೊದಲಾಳ್ವಾರ್‌ರ ಪಾಶುರಗಳಲ್ಲಿ ಸಿಗುವುದಿಲ್ಲ. ಮುಂದೆ ಅದು ಬಳಕೆಗೆ ಬಂದಿತೆನ್ನಲು ಅವಕಾಶವಿದ್ದರೂ ಯಾವ ಆಳ್ವಾರರೂ ಅದನ್ನು ಮುಖ್ಯವೆಂದು ಗ್ರಹಿಸಲಿಲ್ಲ ಅದರ ವಿಚಾರ ಹೇಳಲಿಲ್ಲ.

ಇದು ಶ್ರೀ ಎಸ್. ಕೆ. ರಾಮಚಂದ್ರರಾಯರ "ತಿರುಪತಿ ತಿಮ್ಮಪ್ಪ " ದಲ್ಲಿ 'ತಿರುಪತಿಯಲ್ಲಿ ಗುಡಿಯಿದ್ದಿತೆ? ಎನ್ನುವ ಸಮಸ್ಯೆಗೆ ಸುದೀರ್ಘ ವಿಶ್ಲೇಷಣೆ.

"The Bhavishyat Purana also mentioned how the Lords swayamvyakta idol was discovered by king Tondaman in ant - hill, under a tamarind tree, on the banks of swamipushkarani. This Purana also gives the legend connected with the Construction of the first temple of the Lord in kaliyuga, Once king Tondaman, Who came to worship the Lord of Thirumalai was commanded by Him, as follows - I have become a Grihasta or a householder. It is not proper that Should be houseless. Construct a temple for me. The credit of this Shall be thine."Tondaman then took an oath immediately that he would obey the lord's command, Lord an Srinivasa and his consort padmavathi then selected a site for the temple on the southern banks os swamipushkarini on Sheshachalam, The Lord Wished that his temple Should have two gopurams, a dwajasthambham, three prakarams, seven doors, the asthanamantapam, yagamantapam a goshala or a shed for cattle, houses for stroring grains, flowers, oil, ghee and houses for dinning decoration and ornaments. The temple was to be a structure of stones and was to be ornamented with copper and gold. The king then constructed a temple for the Lord as directed."

ತೊಂಡಮಾನನು ಯಾವ ಕಾಲದವನೆಂಬುವುದು ಸ್ಪಷ್ಟವಿಲ್ಲ. ಇತಿಹಾಸದಿಂದ ಅವನ ವೃತ್ತಿ ತಿಳಿಯುವುದಿಲ್ಲ. ಭವಿಷ್ಯತ್ ಪುರಾಣದ ಕಾಲವೂ ಗೊತ್ತಿಲ್ಲ. ಭವಿಷ್ಯತ್ ಪುರಾಣದ ಪ್ರಕಾರ ಮುಂದಿನ ವೃತ್ತಾಂತ ವನ್ನು ತಾನೇ ಅದು ಹೇಳುವುದು? ಆ ಮುಂದಿನ ಕಾಲ ಯಾವ ಕಾಲದಿಂದ ಯಾವ ಸಮಯದವರೆಗೆ ಎನ್ನುವುದೂ ಗೊತ್ತಾಗದು. ಅಂತೂ ಒಂದು ಮಾತ್ರ ಗೊತ್ತಾದ ವಿಚಾರ.



ಈ ವೆಂಕಟೇಶ ಮಹಾತ್ಮ್ಯದ ವಿಚಾರವೆಲ್ಲಾ ಬಹಳ ಹಿಂದಿನ ಕಾಲದ್ದೆಂದು ಸಿದ್ಧಾಂತವಾಗಬೇಕು. ಅಂತೂ ಕ್ರಿ.ಶ. ಮೂರನೆಯ ಶತಮಾನಕ್ಕಿಂತ ಪೂರ್ವದ ಅರಸನಿವನೆಂದು ಊಹಿಸಬೇಕಾಗುತ್ತದೆ. ನಂತರದ ಅರಸರ ಕುಲಗಳು, ಆಳ್ವಾರ್ ಪಾಶುರಗಳು ಈ ಬಗ್ಗೆ ಏನು ಹೇಳದಿರುವುದರಿಂದ ಈ ವಿಚಾರ ಕ್ರಿ.ಶ. ೧ ನೇ ಶತಮಾನದಿಂದ ಕ್ರಿ.ಶ. ಮೂರನೇ ಶತಮಾನಕ್ಕೆ ಪರಿಮಿತಿಗೊಳ್ಳುತ್ತದೆಯೆನ್ನಬೇಕು. ಏತಕ್ಕೆಂದರೆ ಮೊದಲಾಳ್ವಾರ್ ಕಾಲ ಕ್ರಿ.ಶ. ೩ ರಿಂದ ಆರನೇ ಶತಮಾನದವರೆಗೆ ಪರಿಗಣಿಸಲ್ಪಟ್ಟಿದೆ. "ತಿರುಪತಿ ತಿಮ್ಮಪ್ಪ"ದ ಪ್ರಕಾರ ಈ ದೇವರು ಬೇಟೆಗಾರರ ದೇವರಾಗಿದ್ದನೆಂದೂ, ನಂತರ ತೊಂಡಮಾನ್ ಚಕ್ರವರ್ತಿಯಿಂದ ಆರಾಧಿಸಲ್ಪಟ್ಟನೆಂದೂ ಗೊತ್ತಾಗುತ್ತದೆ. ಇವರ ಕಾಲ ಕ್ರಿ.ಶ. ೬ ರಿಂದ ೭ ನೇ ಶತಮಾನಕ್ಕೂ ಸಾಗುತ್ತದೆಯಾದ್ದರಿಂದ ಈ ಕುರವರು, ಬೇಡರು, ತೊಂಡಮಾನ, ತಿರುಪತಿ ದೇವಸ್ಥಾನ ಒಂದಕ್ಕೊಂದು ಸಂಬಂಧವಿರದ ಸಂಭವಗಳು ಹೆಚ್ಚಾಗುತ್ತದೆ. ಇದರಿಂದ ತಿರುಪತಿ ದೇವರು ಬೇಡರಿಗೆ, ಕುರವರಿಗೆ ಮಾತ್ರ ಸ್ವಂತವಾಗಿರಲಿಲ್ಲ ಎನ್ನುವ ಅಂಶವೂ ಸ್ಪಷ್ಟವಾಗುತ್ತದೆ.

" ಶೇಷಾ ವಾ ಸೈನ್ಯನಾಥೋ ವಾ ಶ್ರೀಪತಿರ್ವೇತಿ ಸಾತ್ವಿಕೈ

ಇತಿ ಸರ್ವೇರ್ವಿತಾರ್ಥಾಯ ಯತಿರಾಜಾಯ ಮಂಗಳಂ"

(ಆದಿಶೇಷನೋ, ವಿಶ್ವಕ್ಸೇನನೋ, ಸಾಕ್ಷಾದ್ವಿಷ್ಣುದೇವನೋ ಎಂದು ಸಾತ್ವಿಕರೆಲ್ಲರಿಂದ ಉಲ್ಲೇಖಿಸಲ್ಪಟ್ಟಿರುವ ಯತಿರಾಜನಿಗೆ ಮಂಗಳವೇ ಅಲ್ಲವೇ? ಎಂದು.

" ಪಾಷಂಡದ್ರುಮಷಂಡ ದಾವದಹನ ಶ್ಚಾರ್ವಾಕಶೈಲಾಶನಿಃ

ಬೌದ್ಧಧ್ವಾಂತನಿರಾಸವಾಸರಪತಿ ರ್ಜೈನೇಭಕಂಠೀರವಃ

ಮಾಯಾವಾದಿ ಭುಜಂಗಭಂಗ ಗರುಡ ಸ್ತ್ರೈವಿದ್ಯಚೂಡಾಮಣಿಃ

ಶ್ರೀರಂಗೇಶ ಜಯಧ್ವಜೋ ವಿಜಯತೇ ರಾಮಾನುಜೋಽಯಂ ಮುನಿಃ"

(ಪಾಷಾಂಡರ ವೃಕ್ಷ ಸಮುದಾಯಕ್ಕೆ ದಾವಾಗ್ನಿಯಾದವನು ಚಾರ್ವಾಕರಿಗೆ ಶೈಲಕ್ಕೆ ವಜ್ರಾಯುಧರವಾದವನು, ಬೌದ್ಧರೆಂಬ ಕತ್ತಲೆಗೆ ಅಪಾರಗಾತ್ರದ ಸೂರ್ಯನಾದವನು ಜೈನರೆಂಬ ಗಜವೃಂದಕ್ಕೆ ಸಿಂಹನಾದವನು, ಮಾಯಾವಾದಿಗಳ (ಶಂಕರಾದ್ವೈತರಿಗೆ) ಸರ್ಪ ಸಂಕುಲಕ್ಕೆ ಗರುಡಸ್ವರೂಪನಾದವನು ತ್ರೈವಿದ್ಯೆಗೆ (ವೇದವಿದ್ಯೆಗೆ) ಶಿರೋ ರತ್ನನಾದವನು ಶ್ರೀರಂಗನಾಥ ಸ್ವಾಮಿಗೆ ವಿಜಯ ಧ್ವಜಿಯಾದವನು ಆದ ಈ ರಾಮಾನುಜಯೋಗಿ ಸರ್ವ ಶ್ರೇಷ್ಠನಾಗಿ ಪ್ರಕಾಶಿಸುತ್ತಿರುವನು)

ಧಾರಾವಾಹಿ

# ತಿರುಮಲೆ ಕಾಲಮಾನಾಚರಣೆಗಳು

- ಮೂಲ. ಡಾ॥ ಎನ್.ಸಿ.ವಿ. ನರಸಿಂಹಾಚಾರ್ಯ

- ಅನುವಾದ : ಶ್ರೀಮತಿ



ಎಂದು ಹೇಳುವ ರೀತಿಯಲ್ಲೇ ಸಕಲ ವೇದನೆಗಳನ್ನು ನುಚ್ಚುನೂರು ಮಾಡುವ ಶ್ರೀಯಃಪತಿ - ಶೇಷ ಸೇನಾಧಿಪತಿಗಳ ಅವತಾರವೇ ಎನ್ನುವಷ್ಟು ದಿವ್ಯಾವತಾರ ಹೊಂದಿದವರಾಗಿ ವೈದಿಕ ಸಾರ್ವಭೌಮರಾದ ಶ್ರೀಭಗವದ್ರಾಮಾನುಜಾಚಾರ್ಯರು,

"ಶುಕಾದ್ಯಾ ಮುನಯಃ ಕೇಚಿತ್ ಭೃಗ್ವಾದ್ಯಾಶ್ಚ ತಪೋ ಧನಾಃ

ಪ್ರಹ್ಲಾದ ಪ್ರಮುಖಾಃ ಪುಣ್ಯಃ ಅಂಬರೀಶದಯೋ ನೃಪಾಃ

ವಿಷ್ಣೋರೇವಾಪರಂ ದೇಹಂ ಮನ್ವಾನಾ ಸ್ತಂ ನಗೋತ್ತಮಮ್

ವದ್ಧ್ಯಾಮಾ ಕ್ರಮಿತಂ ಭೀತಾಃ ಪರ್ಯಂತೇಷ್ವೇವ ವರ್ತಿನಃ

ತನ್ನಿರ್ಗತ ನದಿಷ್ಟೇನ ಕುರ್ಯಾಣಾಃ ಸ್ನಾನ ತರ್ಪಣೇ

ತಪಃ ಕುರ್ವಂತಿ ಥಾಂಥಂತಿ ಸ್ಸಾಕ್ಷಾತ್ಸುರ್ತುಂ ಜನಾರ್ದನಂ"

(ಹಲವಾರು ಶುಕರೇ ಮೊದಲಾದ ಮುನಿಗಳು, ಭೃಗುವೇ ಮೊದಲಾದ ತಪಸ್ವಿಗಳು ಪ್ರಹ್ಲಾದಾದಿ ಪುಣ್ಯ ಶೀಲರು, ಅಂಬರೀಷರಂತಹ ಚಕ್ರವರ್ತಿಗಳು ಈ ಪರ್ವತದಲ್ಲಿನ ಶ್ರೀವಿಷ್ಣು ಮೂರ್ತಿಯನ್ನೇ ದೇಹತ್ಯಾಗ

ಸಮಯದಲ್ಲಿ ಸ್ಮರಿಸುವಂಥವರಾಗಿ ಆ ಬೆಟ್ಟದಲ್ಲೇ ಸ್ನಾನ ತರ್ಪಣ ಕೊಡುವವರಾಗಿ ಜನಾರ್ದನನನ್ನು ಸಾಕ್ಷಾತ್ಕರಿಸಿ ಕೊಂಡು ಕೃತಾರ್ಥರಾಗಿ ತಮ್ಮ ತಪವನ್ನಾಚರಿಸುವಂಥವರಾಗಿದ್ದಾರೆ.)

ಆ ನಿಟ್ಟಿನಲ್ಲಿ ಪರಾಪರತತ್ತ್ವಜ್ಞಾನಶೇಖರರಾದ ಶುಕಾದಿ ಪರಮ ಯೋಗಿಗಳಿಗೂ, ಪ್ರಹ್ಲಾದಾದಿ ಪರಮ ಭಾಗವತರಿಗೂ ಪಾವನವಾದ ತಿರುಮಲೆ ಬೆಟ್ಟದಲ್ಲಿ ಸರ್ವಕಾಲದಲ್ಲಿಯೂ ಸುಲಭನಾಗಿ ವರ್ತಿಸುವ ವೇಂಕಟಾಚಲಪತಿಯೊಂದಿಗೆ ಸಮಾನ ಗೌರವ ಪ್ರತಿಪತ್ತರಾಗಿ ಪ್ರಾಕೃತ ಶರೀರ ಸಮೇತವಾಗಿ ಸೃಜಿಸಿಕೊಂಡ ನಿಟ್ಟಿನಲ್ಲಿ, ಹಾಗೆಯೇ ಅಜ್ಞಾನಮುಕ್ತರಾದ ಜ್ಞಾನ ಭಕ್ತರನು ಅನುಗ್ರಹಿಸಿ, ಆಳ್ವಾರರನ್ನು ಹೊಂದಿದ ಗಗನಚುಂಬಿ ವೇಂಕಟಾದ್ರಿಗೂ ಮೀರಿದನು ಎಂದು ಮನೋಹರ ಮತ್ಸ್ಯಗಳಂತೆ ವಿಹರಿಸುವ ಜಿಂಕೆಗಳಂತೆ ಶ್ರೀವೇಂಕಟ ಶೈಲವನ್ನು ಆಶ್ರಯಿಸಿ ಆರೋಹಣ ಮಾಡುವವನ ಪಾತಕಗಳನ್ನು ಪರಿಹರಿಸುವವನು. ಶ್ರೀವೇಂಕಟವು ನಮಗೆ ಭಗವಂತನೊಂದಿಗೆ ಸಾಂಗತ್ಯವನ್ನು ಒದಗಿಸಿ, ಮೋಕ್ಷವನ್ನು ಪ್ರಸಾದಿಸುವ ಪರ್ವತವು ಜೀವನವನ್ನು ದ್ವೀಪನಗೊಳಿಸುವಂತಹ ಭಗವಂತನಿರುವ ವೇಂಕಟಾಚಲವು ವಿಶಾಲವಾದ ಭೂಮಿಯ ಮೇಲಿದೆ. 'ತಂಪಾದ ತಳಿರಿರುವ ವೇಂಕಟಾದ್ರಿಯೇ ನರರಿಗೂ, ನಿತ್ಯ ಸುರರಿಗೂ ದೈವಸನ್ನಿಧಿ' 'ವೇಂಕಟವೇ ದೇವತೆಗಳ ಪ್ರೇಮಸದನ ಸತ್ಯವಾಗಲೂ ಭಕ್ತಿಯ ಮೂಲಕ ವೆಂಕಟವೇ ಶಾರೀರಬಾಧವಿಮೋಚನೆಯನ್ನು ಮಾಡಬಲ್ಲದು. ವೇಂಕಟ ಶಿಖರವು (ಶ್ರೀಸ್ವಾಮಿ) ಮೊದಲಿನಿಂದಲೂ ಇರುವ ಸ್ಥಳವೆಂದೂ (ಮೂಲಸ್ಥಾನವೆಂದು) ತಿರುಮಲೆ ಬೆಟ್ಟಕ್ಕು ಶ್ರೀನಿವಾಸನಿಗೂ ಯಾವುದೇ ಭೇದವಿಲ್ಲದೇ ತಮಗದು ಪರಮ ದುರ್ಲಭವಾದುದೆಂದೂ ತಿಳಿದು, ತಿರುಮಲೆಯನ್ನು ತಮ್ಮ ಪಾದಗಳಿಂದ ತುಳಿಯಲಾಗದೆಂದು ಅದರ ತಪ್ಪಲಿನಲ್ಲೇ ಇದ್ದು ಮಂಗಳ ಶಾಸನಗಳನ್ನು ಮಾಡಿ ಬಂದಿರುವುದನ್ನು ಅನುಸರಿಸಿ ತಿರುಮಲೆಯಲ್ಲಿ ಆಳ್ವಾರರನ್ನು ಪ್ರತಿಷ್ಠೆಮಾಡದೇ ತಿರುಮಲೆಯ ತಪ್ಪಲಿನಲ್ಲೇ ಅಭಿನ್ನ ವಿಗ್ರಹಗಳನ್ನು ವಿಜಯ ಮಾಡಿದ ವಿಧವಾಗಿ ಪ್ರತಿಷ್ಠಾಪನೆಯನ್ನು ನೆರವೇರಿಸಿದ ಪ್ರಾಚೀನ ಕಾಲದಲ್ಲೇ ಶ್ರೀ ಚಿತ್ರಕೂಟದಿಂದ ವಿಜಯ ಮಾಡಿದ ಶ್ರೀಗೋವಿಂದರಾಜು ಸ್ವಾಮಿಯನ್ನು ತಿರುಮಲೆಯ ತಪ್ಪಲಿನಲ್ಲೇ ಶ್ರೀವೇಂಕಟಾಚಲಪತಿಯೊಂದಿಗೆ ಅವಿಚ್ಛಿನ್ನವಾಗಿ ಶ್ರೀವೈಖಾನಸಾಗಮೋಕ್ತ ಪ್ರಕಾರದಂತೆ ಶ್ರೀ ಪ್ರತಿಷ್ಠೆ ಮಾಡುವುದೆಂದು ಸಂಕಲ್ಪಿಸಿ ಅಧ್ಯಯನೋತ್ಸವಕ್ಕೆ ಮೊದಲೇ ಹಲವು ಉತ್ಸವಗಳನ್ನು ಪರಸ್ಪರ ವಿರೋಧ ರಹಿತವಾಗಿ ಜರುಗಿಸಬೇಕೆಂದು ಆಜ್ಞೆಯನ್ನಿತ್ತು ಪ್ರಾಚೀನರಲ್ಲಿ ಕಾಶಿ ರಾಜನು ಸಂತಾನಾರ್ಥಿಯಾಗಿ ಕುಟುಂಬ ಸಮೇತನಾಗಿ ಬಂದು ಶ್ರೀವೇಂಕಟೇಶ್ವರನನ್ನು ಸೇವಿಸುತ್ತಿರಲು ಶ್ರೀನಿವಾಸನು ದೇಹಿ ಮೇ ದದಾಮಿ ತೆ (ಹೀಗಿರುವ ನಿನಗೆ ಜಯಕಾರವು) ಎಂಬ ಪುರಾಣಸಿದ್ಧವಾದ ಕ್ರೀಡಾ ವಿಶೇಷವನ್ನು ಎಲ್ಲರೂ ತಿಳಿದು, ತನ್ನನ್ನಾಶ್ರಯಿಸಿ ಉದ್ಧಾರವಾಗಬೇಕೆಂದು ತಿಳಿದು, ಪಟ್ಟದ ರಾಣಿಯ ಕನಸಲ್ಲಿ ಕಂಡು (ಕಾಣಿಸಿಕೊಂಡು) ನಾನು ನಿನಗೆ ಸಂತಾನವನ್ನು ಪ್ರಸಾದಿಸಬೇಕಾದಲ್ಲಿ ನೀನು ನಿನ್ನ ಭೂಮಿಯನ್ನು ನನಗೆ ಕೊಡು ಎಂದು ಕೇಳಲು ಆಕೆ ಪತಿಯು ಪರತಂತ್ರ ಳಾಗಿರುವ ಕಾರಣ ಪತಿಯ ಅನುಮತಿ ಬೇಕಾಗುವುದೆಂದೆನಲು ಶ್ರೀ ವೇಂಕಟಾಚಲಪತಿಯು ಆತನೊಂದಿಗೆ ತನ್ನ ಅಣ್ಣನ (ಚಕ್ರವರ್ತಿ) ಗೋವಿಂದರಾಜುವಿನ ಅನುಮತಿಯೂ ಬೇಕೆಂದು ಮಾಯವಾದ ಸ್ವಪ್ನ ವೃತ್ತಾಂತವಿದೆ - ಆದ್ದರಿಂದ ಒಂದೇ ಗುಡಿಯಲ್ಲಿ ಪಂಚಬೇಧಗಳಲ್ಲಿ ಐಕ್ಯವಾದ ರೀತಿಯಲ್ಲೇ ಇವರಿಬ್ಬರೂ ಅರ್ಚಾವತಾರದಿಂದ ಐಕ್ಯತೆಯನ್ನು ತೋರಿಸಿರುವುದನ್ನು ಗುರುತಿಸಿ, ಶ್ರೀವೇಂಕಟಾಚಲಪತಿ ತ್ರಿಸಂಧ್ಯೆಗಳಲ್ಲಿ ಆರಾಧನೆಗಳನ್ನು ಸ್ವೀಕರಿಸುವಾಗ, ವೇದಪುರಾಣಗಳನ್ನು ವಿನಿಯೋಗಿಸುವ ವೇಳೆಯಲ್ಲಿ, ಶ್ರೀವೇಂಕಟಾಚಲ ಮಹಾತ್ಮೆಯೊಂದಿಗೆ ಶ್ರೀಚಿತ್ರಕೂಟ ಮಹಾತ್ಮೆಯನ್ನು ಹಾಗೆಯೇ ಶ್ರೀಗೋವಿಂದ ರಾಜಸ್ವಾಮಿಯ ಶ್ರೀಚಿತ್ರಕೂಟ ಮಹಾತ್ಮೆಯೊಂದಿಗೆ ಶ್ರೀವೇಂಕಟಾಚಲ ಮಹಾತ್ಮೆಯನ್ನು ಕೇಳಿ ಆನಂದಿಸುವುದಕ್ಕಾಗಿ ಸಾಯಂಕಾಲ ಸಮಯದಲ್ಲಿ ಶ್ರೀ ವೇಂಕಟಾಚಲಪತಿ ನಿತ್ಯಾನುಸಂಧಾನ ಕರುಣಿಸುವಾಗ "ಊನ್‌ವಾಡ ಉಣ್ಣಾದು (ಶರೀರವು ಉಂಡಷ್ಟು ಕೃಶಿಪುದು) ವಾಡ ಮರುದಿಡ್ಡೈ ಪೋಗಿಂ" (ದ್ರಾಕ್ಷಿ ಮರದ ನಡುವೆ ಮರ್ದಿಸುವವನಾಗಿ) ಎಂದು ಆರಂಭವಾಗುವ ತಿರುಮೊಳಿ ಪಾಶುರದಲ್ಲಿ (ಗೀತೆಯಲ್ಲಿ) ಎರಡನ್ನು ಏಕೀಕರಿಸುವಂತೆ ಶ್ರೀಗೋವಿಂದರಾಜಸ್ವಾಮಿಯೂ ಹಾಗೆಯೇ ಒಳಿಮ್‌ಕಾಲಂ' (ವಿರಮಿಸುವ ಕಾಲ ) ಉಲಗ ಮುಂಡೆ ಪೆರುವಾಯಾ' (ಲೋಕವನ್ನೇ ನುಂಗಿರುವ ದೊಡ್ಡ ಬಾಯವನೇ) ಮುಂತಾದವುಗಳನ್ನನುಸರಿಸಿ ತಿರುಮಲೆ ತಿರುಪತಿ ಎಂಬ ಎರಡು ಸ್ಥಳಗಳು ಕಲೆತು ಒಂದೇ ಪವಿತ್ರವಾದ ದಿವ್ಯಸ್ಥಳವೆಂದು ತೋರಿಸಲು ಅದಕ್ಕೆ ತಕ್ಕಂತೆ ಶ್ರೀವೈಷ್ಣವರ ದಿವ್ಯ ಭವನಗಳಲ್ಲಿ ಉತ್ಸವ ವೇಳೆಯಲ್ಲಿ ಶ್ರೀವೇಂಕಟೇಶ್ವರ ಹಾಗೂ ಶ್ರೀಗೋವಿಂದ ರಾಜಸ್ವಾಮಿ ಅಲರ್ಮೇಲ್ ಮಂಗತಾಯಿ, ಆಳ್ವಾರರ ಶ್ರೀ ಪುತ್ರಿಕೆ (ಆಂಡಾಳ್ ಅಮ್ಮ) ಸಂಭಾವನ ರೀತ್ಯಾ ಎರಡು ಸ್ಥಳಗಳಲ್ಲಿಯೂ ಏಕ ರೀತಿಯ ಸಂಭಾವನೆಯನ್ನು ಮಾಡಿಸುವಂತೆ ನಿಯಮಿಸಿದರೆಂದು ಶ್ರೀ ವೆಂಕಟವನ್ನು ವಾಸಸ್ಥಾನವಾಗಿ ಮಾಡಿಕೊಂಡ ಹಿರಿಯರು ವಿವರಿಸುತ್ತಾರೆ.

(ಮುಂದುವರೆಯುತ್ತದೆ.)

# ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

## ತಿರುಮಲೆಯಲ್ಲಿ ಭಕ್ತರು ಮಾಡಬೇಕಾದವು :

- ☑ ತಿರುಮಲೆಗೆ ಬರುವ ಮುನ್ನ ನಿಮ್ಮ ಇಷ್ಟ ಅಥವಾ ಕುಲದೈವವನ್ನು ಪೂಜಿಸಿರಿ.
- ☑ ಶ್ರೀ ವೆಂಕಟೇಶ್ವರ ಸ್ವಾಮಿಯನ್ನು ದರ್ಶಿಸುವ ಮೊದಲು ಸ್ವಾಮಿಪುಷ್ಕರಿಣಿಯಲ್ಲಿ ಸ್ನಾನಮಾಡಿ, ಅಲ್ಲಿಯೇ ಇರುವ ಶ್ರೀ ವರಾಹಸ್ವಾಮಿಯನ್ನು ದರ್ಶಿಸಿರಿ.
- ☑ ಆಲಯದ ಒಳಗಡೆ ಗಂಭೀರ ಮೌನವನ್ನು ಪಾಲಿಸಿರಿ ಮತ್ತು ಮನಸ್ಸಿನಲ್ಲಿ "ಓಂ ನಮೋ ವೇಂಕಟೇಶಾಯ" ಎಂದು ಜಪಿಸಿರಿ.
- ☑ ಆಲಯದ ಒಳಗಡೆ ಸ್ವಾಮಿಯಲ್ಲಿ ಮನಸ್ಸನ್ನು ಕೇಂದ್ರೀಕರಿಸಿ.
- ☑ ತಿರುಮಲೆಯಲ್ಲಿ, ಪಾಪನಾಶಿನಿಯಲ್ಲೂ, ಆಕಾಶಗಂಗೆಯಲ್ಲೂ ಸ್ನಾನಮಾಡಿರಿ.
- ☑ ತಿರುಮಲೆಗೆ ಬಂದಾಗ ಸನಾತನ ಸಂಪ್ರಾದಯಗಳನ್ನು, ಆಚಾರ ವ್ಯವಹಾರಗಳನ್ನು ಗೌರವಿಸಿ.
- ☑ ತಮ್ಮ ಕಾಣಿಕೆಗಳನ್ನು ಹುಂಡಿಯಲ್ಲಿ ಮಾತ್ರವೇ ಸಮರ್ಪಿಸಿ.
- ☑ ತಿರುಮಲೆಯನ್ನು ಶುಭ್ರವಾಗಿ ಶುದ್ಧವಾಗಿ ಇಡಲು ಸಹಕರಿಸಿ.ಬಯೋಡಿಗ್ರೇಡಬಲ್ ಪ್ಲಾಸ್ಟಿಕ್ ಕವರಗಳನ್ನು ಮಾತ್ರವೇ ಬಳಸಿರಿ.


## ತಿರುಮಲೆಯಲ್ಲಿ ಭಕ್ತರು ಮಾಡಬಾರದವು :

- ☒ ತಮ್ಮೊಂದಿಗೆ ಹೆಚ್ಚಿನ ಹಣ, ಆಭರಣಗಳನ್ನು ತರಬೇಡಿ.
- ☒ ದೇವರನ್ನು ಸೇವಿಸುವುದರ ಹೊರತು ಬೇರೆ ಯಾವ ಕಾರಣಕ್ಕೂ ತಿರುಮಲೆಗೆ ಬಾರದಿರಿ.
- ☒ ದೇವರ ದರ್ಶನಕ್ಕಾಗಿ ನೂಕುನುಗ್ಗುಲು ಮಾಡದಿರಿ.
- ☒ ಸಂಪ್ರದಾಯದಂತೆ ಆಲಯ ಪ್ರವೇಶ ನಿಷೇಧವಿದ್ದಲ್ಲಿ ಆಲಯ ಪ್ರವೇಶ ಮಾಡದಿರಿ.
- ☒ ತಿರುಮಲೆಯಲ್ಲಿ ಹೂವು ಮುಡಿಯದಿರಿ.ಎಲ್ಲ ಹೂವುಗಳೂ ದೇವರಿಗೇ.
- ☒ ನೀರು, ವಿದ್ಯುತ್‌ಗಳು ಪೋಲು ಮಾಡದಿರಿ.
- ☒ ಅಪರಿಚಿತರಿಗೆ ನಿಮ್ಮ ಕೋಣೆಯ ಬೀಗದ ಕೈಗಳನ್ನು ನೀಡದಿರಿ, ಅವರನ್ನು ನಿಮ್ಮ ಕೊಠಡಿಗೆ ಸೇರಿಸದಿರಿ.
- ☒ ಬಯೋಡಿಗ್ರೇಡಬಲ್ ಪ್ಲಾಸ್ಟಿಕ್ ಕವರಗಳನ್ನು ಹೊರತು ಇತರ ಕವರ್‌ಗಳನ್ನು ಬಳಸಬಾರದು.
- ☒ ನಾಲ್ಕು ಮಾಢಬೀಧಿಗಳಲ್ಲಿ ಪಾದರಕ್ಷೆಗಳನ್ನು ಧರಿಸಿ ಓಡಾಡಬಾರದು.

## ತಿರುಮಲೆಯಲ್ಲಿ ನಿಷೇಧಿತ ಪದಾರ್ಥಗಳು : ( ನಿಷೇಧಿಸಿದವು)

- ✖ ತಿರುಮಲೆಯಲ್ಲಿ ಧೂಮಪಾನ,ಮದ್ಯಪಾನ,ಮಾಂಸಾಹಾರ ಮೊದಲಾದವುಗಳನ್ನು ನಿಷೇಧಿಸಲಾಗಿದೆ.
- ✖ ಸ್ವಾಮಿಯವರ ದರ್ಶನಕ್ಕಾಗಿ, ವಸತಿಗಾಗಿ, ಪ್ರತ್ಯೇಕ ಪ್ರವೇಶಕ್ಕಾಗಿ ದಳ್ಳಾಳಿಗಳನ್ನು ಆಶ್ರಯಿಸಬೇಡಿರಿ.
- ✖ ಬೀದಿವ್ಯಾಪಾರಿಗಳಿಂದ ನಕಲೀ ಪ್ರಸಾದ ಕೊಳ್ಳಬೇಡಿ.
- ✖ ದೇವಾಲಯದಲ್ಲಿ ಉಗುಳುವುದು ಮುಂತಾದವುಗಳನ್ನು ಮಾಡಬಾರದು.
- ✖ ಅನ್ಯಮತ ಪ್ರಚಾರ ನಿಷೇಧಿಸಲಾಗಿದೆ.
- ✖ ವಿವಿಧ ರಾಜಕೀಯ ಸಭೆ, ಬ್ಯಾನರು, ಧರಣಿ, ರಾಸ್ತಾರೋಕೋ, ಹರತಾಳ - ಮೊದಲಾದವುಗಳನ್ನು ನಿಷೇಧಿಸಲಾಗಿದೆ.
- ✖ ಯಾವುದೇ ರೂಪದಲ್ಲಿ ಜೂಜಾಡುವುದನ್ನು ನಿಷೇಧಿಸಲಾಗಿದೆ.
- ✖ ಆಲಯದಲ್ಲಿ ಸೆಲ್‌ಫೋನ್, ಕ್ಯಾಮರಾ, ಮತ್ತಿತರ ವಿದ್ಯುತ್ ಚಾಲಿತ ಉಪಕರಣಗಳನ್ನು ನಿಷೇಧಿಸಲಾಗಿದೆ.
- ✖ ಜಂತುವಧೆ ನಿಷೇಧ.
- ✖ ಭಿಕ್ಷುರನ್ನು ಪ್ರೋತ್ಸಾಹಿಸದಿರಿ.

**ಕಾರ್ಯನಿರ್ವಹಣಾಧಿಕಾರಿ**



# 108 ವೈಷ್ಣವ ದಿವ್ಯ ಕ್ಷೇತ್ರಗಳು

# ತಿರುಪ್ಪೇರ್ ನಗರ್ (ಕೋವಿಲಡಿ) (ಅಪ್ಪಕ್ಕುಡುತ್ತಾನ್)

ಬೃಹದ್ಬುರ್ಯಾರ್ವಾಸೇ ಹರಿಃಅಧಿರಸಾಫ್ರೂಪಫಟವಾನ್
ವಿಮಾನಂ ಚಾಪ್ಯೈನ್ರಂ ಭುಜಗಪತಿಶಾಯೀ ಕಮಲಿನೀ
ತಥೈವೈನ್ರೀ ಸಹ್ಯಾಚಲಭವಾ ದಿವ್ಯ ತಟಿನೀ
ಸದಾ ಮಾಲರೂಪಾ ಪ್ರಣತವರದಃಪಾಶ್ಚಿಮುಖಃ

**ತೆಲುಗುಮೂಲ : ಆಚಾರ್ಯ ಚಕ್ರವರ್ತಿ ರಂಗನಾಥನ್**

**ಕನ್ನಡ ಅನುವಾದ : ಸೂರ್ಯವಂಶಿ**

ಶ್ರೀ ಮನ್ನಾರಾಯಣನು ಭಕ್ತರನ್ನು ಅನುಗ್ರಹಿಸುವುದಕ್ಕೆ ೧೦೮ ದಿವ್ಯ ದೇಶಗಳಲ್ಲಿ ನೆಲಸಿದ್ದಾನೆ. ಅಂತಹಾ ದಿವ್ಯದೇಶಗಳಲ್ಲಿ ತಿರುಪ್ಪೇರ್ ನಗರ್ ಎನ್ನುವ ಸ್ಥಳವೂ ಒಂದು ದಿವ್ಯ ದೇಶವೆಂದು ಕರೆಯಲ್ಪಡುತ್ತಿದೆ. ಇದಕ್ಕೆ ಕೋವಿಲಡಿ ಎಂಬ ಹೆಸರೂ ಇದೆ. ಕೋವಿಲ್ ಅಥವಾ ಕೋಯಿಲ್ ಎಂದರೆ ಎಲ್ಲ ರಿಗೂ ನೆನಪಾಗುವುದು ಶ್ರೀರಂಗಂ. ಅದೇ ಪ್ರಕಾರ ಆ ಶ್ರೀರಂಗಂ ಅನ್ನು ಪೆರಿಯ ಕೋಯಿಲ್ ಎಂದೂ ಕರೆಯುತ್ತಾರೆ. ಅಂತಹ ವೈಭವವನ್ನು ಹೊಂದಿರುವ ಶ್ರೀರಂಗಕ್ಷೇತ್ರಕ್ಕೆ ಒಂದು ಪ್ರಮುಖ ಭೂಮಿಯಂತೆ ನೆಲೆಸಿರುವ ಉಭಯಕಾವೇರಿ ಮಧ್ಯದಲ್ಲಿ ಇರುವಂತಹಾ ದಿವ್ಯದೇಶ ಈ ಕೋವಿಲಡಿ ಅದಕ್ಕೆ ಈ ಕ್ಷೇತ್ರಕ್ಕೆ ಕೋವಿಲ್ ಅಡಿ ಎಂಬ ಹೆಸರು ಬಂದಿದೆ ಎನ್ನುತ್ತಾರೆ.

ಇಲ್ಲಿ ನೆಲಸಿರುವ ಭಗವಂತನನ್ನು ಅಪ್ಪಾಲರಂಗ ನಾಥಸ್ವಾಮಿ ಎಂದು ಕರೆಯುತ್ತಾರೆ. ಈ ಸುಂದರವಾದ ಕ್ಷೇತ್ರವು ಅದ್ಭುತವಾದ ಪ್ರಕೃತಿ ಸೌಂದರ್ಯದೊಂದಿಗೆ ಹೆಚ್ಚೂ ಕಡಿಮೆ ಮೂರು ಎಕರೆಗಳಲ್ಲಿ ಎರಡು ಪ್ರಾಕಾರಗಳೊಂದಿಗೆ ಮೂರು ರಾಜಗೋಪುರಗಳೊಂದಿಗೆ ಅದ್ಭುತವಾದ ಶಿಲ್ಪಕಲೆಯೊಂದಿಗೆ ರಾರಾಜಿಸುತ್ತಿರುವ ದಿವ್ಯಕ್ಷೇತ್ರವಾಗಿದೆ.


ತಿರುಪ್ಪೇರ್ ನಗರ್ ಎಂದು ಕರೆಯುವುದಕ್ಕೆ ಹಲವಾರು ಕಾರಣಗಳಿವೆ. ಪೇರ್‌ನಗರ್ ಹಾಗೇ ಪೆರುನಗರ್ ಎಂದು ಈ ದಿವ್ಯದೇಶಕ್ಕೆ ಒಂದು ವಿಲಕ್ಷಣವಾದ ತಿರುನಾಮವೂ ಇದೆ. ಮುಖ್ಯವಾಗಿ ಒಂದು ಸಂದರ್ಭದಲ್ಲಿ ಮಹಾಲಕ್ಷ್ಮೀದೇವಿ ಭಗವಂತನೊಂದಿಗೆ ಕ್ಷೀರಸಾಗರದಲ್ಲಿದ್ದರೂ ಆ ಲಕ್ಷ್ಮೀವಲ್ಲಭನಿಗೆ ಭೂದೇವಿಯೊಂದಿಗೆ ಒಂದು ರೀತಿಯ ಪ್ರೇಮ ಆದರವೂ ಇದ್ದುದರಿಂದ ವರಾಹ, ವಾಮನ, ಕೃಷ್ಣ ಅವತಾರಗಳಲ್ಲಿ ಇವನ್ನು ವ್ಯಕ್ತಪಡಿಸಿದ್ದರಿಂದ ಲಕ್ಷ್ಮೀದೇವಿಗೆ ಒಂದು ರೀತಿಯ ಅಸೂಯೆ ಉಂಟಾಗಿ ಭೂದೇವಿಯಂತೆಯೇ ತನ್ನತ್ತಲೂ ಭಗವಂತನು ಅಭಿಮಾನ ತೋರಬೇಕೆಂಬ ಉದ್ದೇಶದಿಂದ ಈ ಸ್ಥಳಕ್ಕೆ ಬಂದು ತಪಸ್ಸು ಮಾಡಿದಳಂತೆ ಲೋಕನಾಯಕಿಯಾದ ಆಕೆಯ ತಪಸ್ಸಿಗೆ ಮೆಚ್ಚಿ ಪರಮಾತ್ಮನು ಆಕೆಯ ಮುಂದೆ ಪ್ರತ್ಯಕ್ಷನಾಗಿ ತನ್ನ ವಕ್ಷಸ್ಥಳವನ್ನು ಮಹಾಲಕ್ಷ್ಮಿಗೆ ನಿವಾಸ ಸ್ಥಾನವನ್ನಾಗಿ ಕಲ್ಪಿಸಿದನಂತೆ ಆದ್ದರಿಂದಲೇ ಈ ದಿವ್ಯ ಸ್ಥಳಕ್ಕೆ ತಿರುಪ್ಪೇರ್ ನಗರ್ ಎಂದು ಹೆಸರು ಬಂದಿದೆ.

ಈ ರೀತಿ ಮಹಾಲಕ್ಷ್ಮೀ ತಪಸ್ಸು ಮಾಡಿರುವಂತಹಾ ಈ ಕ್ಷೇತ್ರವು ಪ್ರಸಿದ್ಧಿಯಾಗಿದೆಯಾದ್ದರಿಂದ ಅಂತಹಾ ಹೆಸರಿನಿಂದಲೇ ವಿರಾಜಿಸುತ್ತಿದೆ. ಈ ಕ್ಷೇತ್ರವು ಸ್ವಲ್ಪ ವಿಲಕ್ಷಣವಾಗಿಯೇ ಇದೆ ಎಂದು ಹೇಳಬಹುದು. ಮೆಟ್ಟಿಲುಗಳನ್ನು ಹತ್ತಿ ಸ್ವಾಮಿಯನ್ನು ನಾವು ನೋಡುವಾಗ ಭುಜಂಗ ಶಾಯಿಯಾಗಿ ಇರುವ ದೇವರು ಸ್ವಲ್ಪ ಪಕ್ಕಕ್ಕೆ ಮಲಗಿ ಇರುವಂತಹಾ ಭಂಗಿಯಲ್ಲಿ ಕಂಡು ಬರುತ್ತಾ ಭಕ್ತರನ್ನೆಲ್ಲಾ ಕಿರುನಗೆಯಿಂದ ನೋಡುತ್ತಿರುವಂತೆ ಭಾಸವಾಗುತ್ತದೆ. ತನ್ನ ಎಡಗೈಯನ್ನು ಸ್ವಲ್ಪ ಎತ್ತಿ ಮಲಗಿರುವಂತೆ ಆಹ್ವಾನ ಮುದ್ರೆಯೊಂದಿಗೆ ನಮ್ಮನ್ನು ಸ್ವಾಗತಿಸುತ್ತಿರುವಂತೆ ಕಂಡು ಬರುತ್ತಾನೆ. ಇಲ್ಲಿ ಭಗವಂತನ ನಾಭಿಯಲ್ಲಿ ಕಮಲವು ಇರುವುದಿಲ್ಲ. ಆದ್ದರಿಂದ ಬ್ರಹ್ಮದೇವನು ಕಂಡು ಬರುವುದಿಲ್ಲ. ಬ್ರಹ್ಮ ಸತ್ಯಲೋಕದಲ್ಲಿ ಆರಾಧಿಸುವುದರಿಂದ ಈ ಸ್ಥಳದಲ್ಲಿ ಬ್ರಹ್ಮದೇವನಿಗೆ ವಿಗ್ರಹವು ಇರುವುದಿಲ್ಲ. ಮಹಾಲಕ್ಷ್ಮೀದೇವಿ ಭಗವಂತನ ವಕ್ಷಸ್ಥಳದಲ್ಲಿ ಭೂಮಾದೇವಿ, ಸ್ವಾಮಿಯ ಪಾದಗಳ ಬಳಿ ಇದ್ದು ಪೂಜಿಸುತ್ತಿದ್ದಾರೆ.



ಕಾವೇರಿ ನದೀ ಪ್ರತಿದಿನವು ತನ್ನ ಜಲದಿಂದ ಸ್ವಾಮಿಗೆ ಪಾದ ಪೂಜೆ ಮಾಡುತ್ತಾಳಂತೆ. ಈ ಸ್ವಾಮಿಗೆ ಆಪ್ಪಾಲ ರಂಗನಾಥನ್ ಎಂಬ ಹೆಸರೂ ಇದೆ. ಮಾರ್ಕಂಡೇಯ ಮಹರ್ಷಿ ಇಲ್ಲಿ ನೆಲಸಿದ್ದಾರೆ. ಪುರಾಣ ಗಳ ಪ್ರಕಾರ ಒಂದು ಕತೆ ನಮಗೆ ತಿಳಿದು ಬರುತ್ತಿದೆ. ಪಾಂಡ್ಯ ರಾಜನಾದ ಉಪನಿಪ್ರವಸ್ ಎಂಬ ರಾಜನು ಒಮ್ಮೆ ಬೇಟೆಯಾಡುತ್ತಾ ಒಂದು ಆನೆಯನ್ನು ನೋಡಿದ ಅದರ ಹಿಂದೆ ಹೋಗಿ ಬೇಟೆಯಾಡುವಾಗ ಆ ಆನೆ ಗೌತಮ ಮಹರ್ಷಿಯ ಆಶ್ರಮದ ಸಮೀಪದಲ್ಲಿ ಇರುವಂತಹಾ ಒಂದು ಸರೋವರಕ್ಕೆ ಹೋಗಿ ಅದೃಶ್ಯ ವಾಯಿತು. ರಾಜ ತನ್ನ ಧನಸ್ಸಿನಿಂದ ಬಾಣಪ್ರಯೋಗ ಮಾಡಿ ಹತ್ತಿರಕ್ಕೆ ಹೋಗಿ ನೋಡಿದಾಗ ಒಬ್ಬ ಬ್ರಾಹ್ಮಣನು ಮರಣಿಸಿದ್ದನಂತೆ ಇದರಿಂದ ಭಯಗೊಂಡ ರಾಜ ತನಗೆ ಬ್ರಹ್ಮ ಹತ್ಯಾದೋಷ ಉಂಟಾ ಯಿತೆಂದು ನೊಂದು ಕೊಂಡು ಆ ದೋಷದ ಪರಿಹಾರಕ್ಕಾಗಿ ಅನೇಕ ದಿವ್ಯ ದೇಶಗಳನ್ನು ತಿರುಗಾಡಿದ. ಆ ರೀತಿ ಸಂಚರಿಸುತ್ತಾ ಈ ತಿರುಪ್ಪೇರ್ ನಗರ್ ಎಂಬ ದಿವ್ಯದೇಶಕ್ಕೆ ಬಂದ ನಂತೆ . ಈ ಕ್ಷೇತ್ರಕ್ಕೆ ಬಂದ ಕೂಡಲೇ ಒಂದು ವಿಧವಾದ ಉಪಶಮನ ರಾಜನಿಗೆ ಉಂಟಾಗಿ ಅಲ್ಲಿ ಒಂದು ಹೋಮವನ್ನು ನಿರ್ವಹಿಸಬೇಕೆಂದು ನಿರ್ಧರಿಸಿದ. ಆ ಯಾಗದಲ್ಲಿ ಅನೇಕ ಯೋಗಿಗಳು ಮಹರ್ಷಿಗಳು ಬ್ರಾಹ್ಮ ಣರು ಎಲ್ಲರೂ ಪಾಲ್ಗೊಂಡಿದ್ದರು. ಆಗ ಒಂದು ಅದ್ಭುತವಾದ ಘಟನೆ ನಡೆ ಯಿತು. ವಯೋಧಿಕನಾದ ಒಬ್ಬ ಬ್ರಾಹ್ಮಣ, ಕೃಶವಾದ ಶರೀರದೊಂದಿಗೆ ಆ ರಾಜನ ಬಳಿ ಬಂದು ನನಗೆ ಬಹಳ ಹಸಿವಾಗಿದೆ ಏನಾ ದರೂ ನೀಡು ಎಂದು ಕೇಳಿದ. ಅವನನ್ನು ನೋಡಿದರೆ ಆತ ಎಷ್ಟೋ ತಿಂಗಳುಗಳಿಂದ ಊಟ ಮಾಡಿದಂತೆ ಇರಲಿಲ್ಲ. ಅವನಿಗೆ ಸಹಾಯ ಮಾಡಬೇಕೆಂದು ರಾಜ ಅಂದು ಕೊಂಡರೂ ಈ ಯಾಗ ಮಾಡುತ್ತಿರುವುದರಿಂದ ಅಲ್ಲಿರು ವವರಿಗೆ ಆಹಾರವನ್ನು ನೀಡದೆ ಈತನಿಗೆ ಆಹಾರವನ್ನು ನೀಡು ವುದು ಶಾಸ್ತ್ರ ಸಮ್ಮತವಲ್ಲ!

ಆ ವೃದ್ಧನನ್ನು ನೋಡಿದರೆ ಬಹಳ ನೋವಾಗುತ್ತಿತ್ತು. ಆದರೆ ಏನೂ ಮಾಡಲು ತೋಚದೇ ಶಾಸ್ತ್ರ ಸಂಪ್ರದಾಯವನ್ನು ಉಲ್ಲಂಘಿಸಿ ಆತನಿಗೆ ಆಹಾರವನ್ನು ನೀಡಿದ. ಅದರ ನಂತರ ಉಪನಿಪ್ರವಸ್‌ಗೆ ಬಹಳ ಕಷ್ಟಗಳು ಪ್ರಾರಂಭವಾದುವು. ರಾಜನು ನೀಡಿದ ಈ ಆಹಾರ ವನ್ನು ತಿಂದ ನಂತರ ಆ ವೃದ್ಧನು ಇನ್ನೂ ಬೇಕು - ಇನ್ನೂ ಬೇಕು ಎಂದು ಕೇಳುತ್ತಿದ್ದಾಗ ಯಾಗಕ್ಕೆ ಬಂದಂತಹವರಿಗೆ ಮಾಡಿಸಿದಷ್ಟೂ ಅಡುಗೆಯನ್ನೂ ಆ ವೃದ್ಧಬ್ರಾಹ್ಮಣನಿಗೆ ನೀಡಿದರು. ಆದರೆ ಆ ವೃದ್ಧನ ಹಸಿವು ತೀರಲೇ ಇಲ್ಲ. ರಾಜ ಅಡುಗೆಯವರಿಗೆ ಹೇಳಿ ಪುನಃ ಪುನಃ ಅಡುಗೆಯನ್ನು ಮಾಡಿಸಿದ ಆದರೂ ಆತನ ಹಸಿವು ತೀರಲಿಲ್ಲ. ಆಗ ರಾಜ ಸ್ವಾಮಿ ನನ್ನಿಂದ ಇನ್ನೂ ಸಾಧ್ಯವಿಲ್ಲ ನಿಮ್ಮ ಹಸಿವು ತೀರ ಬೇಕೆಂದರೆ ಏನೂ ಮಾಡಬೇಕೋ ದಯವಿಟ್ಟು ತಿಳಿಸಿ, ಎಂದು ಪ್ರಾರ್ಥಿಸಿದ. ಆಗ ಆವೃದ್ಧನು ಒಂದು ಬಂದಿಗೆಯ ತುಂಬಾ ಕಜ್ಜಾಯವನ್ನು ಮಾಡಿಸಿ ಕೊಡು





ಎಂದು ಕೇಳಿದ. ಆ ವೃದ್ಧನ ಮಾತಿನಂತೆ ರಾಜ ಕಜ್ಜಾಯವನ್ನು ತಯಾರಿಸಿ ನೀಡಿದ. ಅದರಲ್ಲಿನ ಒಂದು ಕಜ್ಜಾಯವನ್ನು ತಿಂದ ನಂತರ ತೃಪ್ತಿಯಾಗಿದೆ ಎನ್ನುತ್ತಾ ಆ ವೃದ್ಧನು ತನ್ನ ನಿಜಸ್ವರೂಪವನ್ನು ತೋರಿದ, ಸಾಕ್ಷಾತ್ತು ದೇವದೇವನೇ ಆ ರಾಜನ ಎದುರಿಗೆ ಬಂದಿದ್ದ. ಆ ರಾಜ ಸಂತೋಷದಿಂದ ಆ ಭಗವಂತನನ್ನು ದರ್ಶಿಸಿದ.ಅವನಿಗೆ ಸೋಕಿದ್ದ ಬ್ರಹ್ಮಹತ್ಯಾ ದೋಷವು ತೊಲಗಿತು. ಆ ಕಜ್ಜಾಯವನ್ನು ಸ್ವೀಕರಿಸಿದನಾದ್ದರಿಂದ ತಮಿಳು ಹಾಗೂ ತೆಲುಗು ಭಾಷೆಯಲ್ಲಿ ಕಜ್ಜಾಯವನ್ನು ಅಪ್ಪಂ ಎಂದು ಕರೆಯುತ್ತಾರೆ. ಆ ಅಪ್ಪಂ ಸ್ವೀಕರಿಸಿದ್ದರಿಂದ ಅಪ್ಪಕ್ಕುಡುತ್ತಾನ್ ಎಂಬ ಹೆಸರಿನಿಂದ ಆ ಸ್ವಾಮಿ ಕರೆಯಲ್ಪಡುತ್ತಿದ್ದಾನೆ.ಇನ್ನೊಂದು ಸ್ಥಳಪುರಾಣದ ಪ್ರಕಾರ.

ಉಪಮನ್ಯು ಎಂಬ ರಾಜ ಈ ಭಗವಂತನನ್ನು ಆರಾಧಿಸುತ್ತಿರುವ ಸಮಯದಲ್ಲಿ ದುರ್ವಾಸ ಮಹರ್ಷಿ ಆ ಪ್ರದೇಶಕ್ಕೆ ಬಂದ, ಆದರೆ ಆ ರಾಜ ದುರ್ವಾಸರ ಆಗಮನವನ್ನು ಗಮನಿಸಲಿಲ್ಲ. ಆಗ ಕೋಪಿಸಿಕೊಂಡ ದುರ್ವಾಸ ಮಹರ್ಷಿ ಆ ರಾಜನಿಗೆ ಶಾಪವನ್ನು ನೀಡಿದ, ಆಗ ಎಚ್ಚರಗೊಂಡ ರಾಜ ಆ ಮಹರ್ಷಿಗೆ ನಮಸ್ಕರಿಸಿ ತನ್ನ ತಪ್ಪನ್ನು ಮನ್ನಿಸಬೇಕೆಂದು ಕೇಳಿಕೊಂಡ ಆಗ ದುರ್ವಾಸ ಮಹರ್ಷಿ, ತಿರುಪ್ಪೇರ್ ನಗರ್ ಆಲಯದಲ್ಲಿನ ಭಗವಂತನನ್ನು ದರ್ಶಿಸಿ, ಒಂದು ಸಾವಿರ ಜನ ಭಾಗವತರಿಗೆ ಅನ್ನದಾನ ಮಾಡಿದರೆ ನೀನು ಶಾಪದಿಂದ ಮುಕ್ತನಾಗುತ್ತೀ ಎಂದು ಹೇಳಿದರು. ಈ ಸಾಕ್ಷಾತ್ತು ಭಗವಂತನು ವೃದ್ಧನ ರೂಪದಲ್ಲಿ ಬಂದು ಎಲ್ಲರ ಆಹಾರವನ್ನೂ ತಾನೇ ಸ್ವೀಕರಿಸಿ, ಹಸಿವೆ ತೀರದೇ ಇನ್ನೂ ಬೇಕೆಂದು ಕೇಳಿದಾಗ ಒಂದು ಕುಂಭದ ತುಂಬಾ ಕಜ್ಜಾಯವನ್ನು ಸಮರ್ಪಿಸಿದಾಗ ಆ ವೃದ್ಧನು ಅದನ್ನು ಸ್ವೀಕರಿಸಿ,ತನ್ನ ನಿಜ ಸ್ವರೂಪವನ್ನು ತೋರಿದನೆಂದು ಒಂದು ಪುರಾಣದ ಮೂಲಕ ತಿಳಿದು ಬರುತ್ತಾರೆ.

ಹಾಗೇ ಇಂದಿಗೂ ಆ ಕ್ಷೇತ್ರದಲ್ಲಿ ಅಪ್ಪಂ (ಕಜ್ಜಾಯ) ದ ನೈವೇದ್ಯ ಮಾಡಿ ಭಕ್ತರಿಗೆ ನೀಡುತ್ತಾರಂತೆ ಕಮಲವಲ್ಲಿ ತಾಯಾರ್‌ಗೆ ಪ್ರತ್ಯೇಕವಾದ ಸನ್ನಿಧಿ ಇದೆ. ತಿರುಪ್ಪೇರ್ ನಗರ್, ಕೋವಿಲಡಿ, ಅಪ್ಪಾಲರಂಗಂ ಎಂಬ ಹಲವಾರು ರೀತಿಯ ನಾಮಧೇಯಗಳೊಂದಿಗೆ ರಾರಾಜಿಸುತ್ತಿರುವ ಈ ಕ್ಷೇತ್ರ ಪಂಚ ರಂಗ ಕ್ಷೇತ್ರಗಳಲ್ಲಿ ಒಂದಾಗಿದೆ. ಮೈಸೂರಿನ ಶ್ರೀರಂಗಪಟ್ಟಣದಲ್ಲಿ ಇರುವುದು ಆದಿರಂಗ, ಶ್ರೀರಂಗಂ ಮಧ್ಯರಂಗವೆಂದೂ, ಕುಂಭಕೋಣದಲ್ಲಿ ಇರುವ ಶ್ರೀರಂಗಂ ಚತುರ್ಥರಂಗ, ಮಯಿಲಾನಾಡುದುರೈನಲ್ಲಿ ಇರುವುದು ಐದನೆಯ ರಂಗವೆಂದು ಪ್ರಸಿದ್ಧಿಯನ್ನು ಪಡೆದಿವೆ. ಅಪ್ಪಾಲರಂಗಂ ಎಂದು ಕರೆಸಿಕೊಳ್ಳುತ್ತಿರುವ ಈ ಆಲಯ ಶ್ರೀರಂಗಕ್ಕಿಂತಲೂ ಪ್ರಾಚೀನವಾದ ದಿವ್ಯದೇಶವೆಂದು ಅನಾದಿ ಕಾಲದಿಂದಲೂ ಕರೆಯಲ್ಪಡುತ್ತಿದೆ ಎಂದು ಲೋಕೋಕ್ತಿ.

ಈ ಅತ್ಯದ್ಭುತವಾದ ಈ ಕ್ಷೇತ್ರದಲ್ಲಿ ನಮ್ಮಾಳ್ವಾರರು ಪರಮ ಪದಪ್ರಾಪ್ತಿಗಾಗಿ ಪ್ರಾರ್ಥಿಸಿದರಂತೆ, ತಿರುಪ್ಪೇರ್ ನಗರ್ ಎನ್ನುವಂತಹಾ ಈ ಕ್ಷೇತ್ರದಲ್ಲಿ ನೆಲೆಸಿರುವ ದಿವ್ಯ ಮೂರ್ತಿಗಳ ವೈಭವವನ್ನು ಒಮ್ಮೆ ನೋಡಿದರೆ ಭಗವಂತನು ಅಪ್ಪಾಲ ರಂಗನಾಥ, ಅಪ್ಪಕ್ಕುಡುತ್ತಾನ್ ಪಶ್ಚಿಮಾಭಿಮುಖವಾಗಿ ನೆಲೆಸಿದ್ದಾನೆ, ಭುಜಂಗಶಯನನಾಗಿದ್ದಾನೆ, ಅಮ್ಮನವರು ಕಮಲವಲ್ಲಿ ಇಂದಿರಾದೇವಿ ಪುಷ್ಕರಿಣಿ, ಇಂದ್ರಪುಷ್ಕರಿಣಿ ಕಾಮಿನಿ ಕುಲ್ಲಡನ್ ವಿಮಾನ, ಇಂದ್ರವಿಮಾನ ಪ್ರತ್ಯಕ್ಷ, ಉಪಮನ್ಯು ಉಪರಿಶ್ರವಸು ಪರಾಶಾರ ಋಷಿ, ನಮ್ಮಾಳ್ವಾರ್ ಪೆರಿಯಾಳ್ವಾರ್ , ತಿರುಮಂಗೈಳ್ವಾರ್ ಈ ನಾಲ್ವರು ಆಳ್ವಾರರು ಈ ದಿವ್ಯದೇಶವನ್ನು ಕೀರ್ತಿಸಿದ್ದಾರೆ. ಪಂಚರಾತ್ರಾಗಮೋಕ್ತವಾಗಿ ಸ್ವಾಮಿಯು ಪೂಜೆಗಳನ್ನು ಸ್ವೀಕರಿಸುತ್ತಿದ್ದಾನೆ. ಹೆಚ್ಚು ಕಡಿಮೆ ಇಪ್ಪತ್ತು ನಾಲಕ್ಕು ಪಾಶುರಗಳು ಈ ಸ್ವಾಮಿಯ ಬಗೆಗೆ ಕೀರ್ತಿಸಲ್ಪಟ್ಟಿವೆ. ಧ್ಯಾನ ಶ್ಲೋಕವೂ ಈ ರೀತಿಯಿದೆ.

ಇಂದ್ರಾಖ್ಯಾಯುತ ತೀರ್ಥ ಶೋಭಿತ ತಲೇ ಶ್ರೀಮತ್ತಿರುಪ್ಪೇರ್ ಪುರೇ
ಪಶ್ಚಾದ್ವಕ್ತ್ರ ಯುತೋ ಭುಜಮ್ಗ ಶಯನೋಹೀಂದ್ರಾಖ್ಯವೈಮಾನಗಃ
ಆಲಿಂಗನ್ ಕಮಲೋಪ ಪೂರ್ವಲತಿಕಾ ಮಪ್ಪಕ್ಕುಡುತ್ತಾನ್ ವಿಭುಃ
ದೃಶ್ಯಕ್ಚೋಪನಮೋಃ ಪರಾಶರಮುನೇ ರ್ವಿಭ್ರಾಜತೇ ಸರ್ವದಾ
ಭಕ್ತಿಸಾರ ಶಠಾರಾತಿ ಕಲಿಜಿತ್ ರಥಯೋಗಿಭಿಃ
ಸಂಸ್ತುತಃ ಕುಂಭ ಸಂರಾಜ ದ್ವಾಮೇತರ ಕರಾಂಬುಜಃ

ಕಮಲವಲ್ಲಿನಾಯಿಕಾ ಸಮೇತನಾದ ಈ ಅಪ್ಪಕ್ಕುಡುತ್ತಾನ್ ಎಂಬ ಸ್ವಾಮಿಯನ್ನು ಎಲ್ಲರೂ ದರ್ಶಿಸಿ ತಮ್ಮ ಸಮಸ್ತ ಪಾಪಗಳನ್ನು ಕಳೆದುಕೊಂಡು ದೇವದೇವನ ದಿವ್ಯ ಅನುಗ್ರಹವನ್ನು ಪಡೆದುಕೊಳ್ಳಿ.

# ಸಂಸ್ಕೃತ ಕಲಿಯೋಣ...!!

## अष्टादशः पाठः
## ಹದಿನೆಂಟನೇ ಪಾಠ

ರಚನೆ:- ಮಹಾ ಮಹೋಪಾಧ್ಯಾಯ ಕಾಶಿ ಕೃಷ್ಣಾಚಾರ್ಯ

तव = ನಿನ್ನ  पुनः = ಮರಳಿ/ ಮತ್ತೆ  मम = ನನ್ನ  बहिः = ಹೊರಗೆ  तत् = ಅದು  अन्तः = ಕೊನೆಗೆ / ಒಳಗಡೆ  करिष्यति = ಮಾಡುತ್ತಾರೆ/ ಮಾಡುತ್ತಾನೆ  करिष्यसि = ಮಾಡುತ್ತೀಯಾ / ಮಾಡುತ್ತೀರಿ  करिष्यामि = ಮಾಡುತ್ತೇನೆ.

### ಪ್ರಶ್ನೆ

1. तव जनकः अद्य किं करोति?
2. मम जनकः गृहे नास्ति।
3. श्वः पाकं कः करिष्यति?
4. मम अनुजः करिष्यति।
5. तत्-गृहं मम।
6. त्वं झटिति स्नानं करिष्यसि किम्?
7. युष्मद्गृहं अन्तरस्ति।
8. अस्मद्गृहं बहिरस्ति।
9. सः पुनः स्नानं करिष्यति किल।
10. अहमपि करिष्यामि शाकं पाकमपि।

### ಉತ್ತರ

1. ನಿನ್ನ ತಂದೆಯು ಇಂದು ಏನು ಮಾಡುತ್ತಾರೆ?
2. ನನ್ನ ತಂದೆಯು ಮನೆಯಲ್ಲಿ ಇಲ್ಲ.
3. ನಾಳೆ ಅಡುಗೆಯನ್ನು ಯಾರು ಮಾಡುತ್ತಾರೆ?
4. ನನ್ನ ತಮ್ಮನು ಮಾಡುತ್ತಾನೆ.
5. ಅದು ನನ್ನ ಮನೆ.
6. ನೀನು ಬೇಗನೆ ಸ್ನಾನವನ್ನು ಮಾಡುತ್ತಿಯೋ ಇಲ್ಲವೋ?
7. ನಿಮ್ಮ ಮನೆಯು ಒಳಗಡೆ ಇದೆ.
8. ನಮ್ಮ ಮನೆ ಹೊರಗಡೆ ಇದೆ.
9. ಅವನು ಮರಳಿ/ ಮತ್ತೆ ಸ್ನಾನವನ್ನು ಮಾಡಿದ್ದಾನೆ ಅಲ್ವೋ.
10. ನಾನು ಕೂಡ ಪಲ್ಯೆಯ ಜೊತೆಗೆ ಅಡುಗೆಯನ್ನು ಮಾಡುತ್ತೇನೆ.

### ಪ್ರಶ್ನೆ

1. ನಿಮ್ಮ ಮನೆ ಎಲ್ಲಿದೆ?
2. ನನ್ನ ಮನೆ ಪೂರ್ವದಲ್ಲಿ ಕೂಡ ಅಲ್ಲಿಯೇ ಇತ್ತು.
3. ಇಂದಿಗೂ ಅಲ್ಲಿಯೇ ಇದೆ.
4. ಅವರು ಅಡುಗೆಯನ್ನು ಯಾವಾಗ ಮಾಡುತ್ತಾರೆ? ಮಾಡುವವರಿದ್ದಾರೆ?
5. ನೀನು ನಾಳೆಗೆ ನನಗೋಸ್ಕರ ಒಂದು ಮಂಚವನ್ನು ಸಿದ್ಧಪಡಿಸು.
6. ಇಂದಿಗೂ ನೀನು ಮತ್ತೆ ಸ್ನಾನವನ್ನು ಎಲ್ಲಿ ಮಾಡುತ್ತಿ?
7. ಅಡುಗೆಯನ್ನು ಅಲ್ಲಿ ಮಾಡಿರಿ ಆದರೆ ವಿಳಂಬವನ್ನು ಮಾಡಬೇಡಿರಿ?
8. ನೀನು ಈಗಾಗಲೇ ಅಡುಗೆಯನ್ನು ಏಕೆ ಮಾಡಿಲ್ಲ.
9. ನಮ್ಮ ಮನೆಯಲ್ಲಿ ನೀರು ಇಲ್ಲವೇ ಇಲ್ಲ ಸರೋವರದಲ್ಲಿ ಸ್ನಾನವನ್ನು ಮಾಡು.
10. ನಿಮ್ಮ ಮಕ್ಕಳು ಮನೆಯಲ್ಲಿ ಇದ್ದಾರೋ, ಇಲ್ಲವೋ.

### ಉತ್ತರ

1. युष्मद्गृहं कुत्रासीत्?
2. मम गृहं पूर्वमपि तत्रैवासीत्।
3. अधुना अत्र अस्ति।
4. ते पाकं कदा करिष्यन्ति?
5. त्वं श्वः मह्यं एकं मञ्चं कुरु।
6. अधुना त्वं पुनः कुतः स्नानं अकरोः?
7. पाकं तत्र कुर्वन्ति; विलम्बं मा कुर्यात्।
8. त्वं इदानीं पाकं न करोषि किम्?
9. अस्मद्गृहे जलं नास्तीत्यतः तटाके स्नानं कुरु।
10. युष्माकं बालकाः गृहे सन्ति, उत न;

# ಧನ್ವಂತರೀ ತ್ರಯೋದಶಿ

ಭೂಮಿಯಲ್ಲಿ ಮಾನವರು ಅನೇಕ ಕಾಯಿಲೆ, ರೋಗಗಳಿಂದ ಬಳಲುತ್ತಿದ್ದಾಗ ಅವುಗಳಿಂದ ಮುಕ್ತಿ ನೀಡಲು ಸಾಕ್ಷಾತ್ ವಿಷ್ಣುವೇ ಧನ್ವಂತರಿ ಎಂಬ ನಾಮದಿಂದ ಅವತಾರವೆತ್ತಿದ. ವೇದ ಹಾಗೂ ಪುರಾಣಗಳಲ್ಲ ದೇವತೆಗಳ ವೈದ್ಯನೆಂದು ಧನ್ವಂತರಿಯ ಉಲ್ಲೇಖವಿದೆ. ಆಯುರ್ವೇದದ ದೇವತೆ ಕೂಡ ಧನ್ವಂತರಿ. ಹಿಂದೂ ಸಂಪ್ರದಾಯದಲ್ಲಿ ಅಯುರಾರೋಗ್ಯ ಬಯಸುವವರು ಧನ್ವಂತರಿಯ ಕುರಿತು ಪ್ರಾರ್ಥನೆ ಮಾಡುವುದು ಸಾಮಾನ್ಯ.

**ಪುರಾಣ ಉಲ್ಲೇಖ :**

ಧನ್ವಂತರಿ ಭಾರತದ ಮೊದಲ ವೈದ್ಯನೆಂಬ ಪ್ರತೀತಿ ಹಾಗೂ ನಂಬಿಕೆ ಇದೆ. ವೈದಿಕ ಸಂಪ್ರದಾಯದ ಪ್ರಕಾರ ಧನ್ವಂತರಿ ಆಯುರ್ವೇದದ ಹರಿಕಾರ. ಹಿಂದೂ ಸಂಪ್ರದಾಯದಲ್ಲಿ ಹಲವು ಸಸ್ಯಗಳ, ಗಿಡಮೂಲಿಕೆಗಳ ಪಾರಿಸರಿಕ ಬಳಕೆಯಿಂದ ಔಷಧ ತಯಾರಿಸಿದ ಗೌರವ ಧನ್ವಂತರಿಗೆ ಸಲ್ಲುತ್ತದೆ.

"ಕ್ಷೀರೋದಮಥನೋದ್ಭೂತಂ ದಿವ್ಯ ಗಂಧಾನು ಲೇಪಿತಂ ಸುಧಾಕಲಶಹಸ್ತಂ ತಂ ವಂದೇ ಧನ್ವಂತರಿಂ ಹರಿಂ"ಎಂಬ ಶ್ಲೋಕದಂತೆ ಕ್ಷೀರ ಸಮುದ್ರ ಮಥನ ಕಾಲದಲ್ಲಿ ದಿವ್ಯ ಗಂಧಾನು ಲೇಪಿತನಾಗಿ ಅಮೃತ ಕಲಶ ಕೈಯಲ್ಲಿ ಹಿಡಿದು ಮಹಾವಿಷ್ಣು ಧನ್ವಂತರಿಯ ಅವತಾರ ತಾಳಿದನು ಎಂದು ಪುರಾಣಗಳಲ್ಲಿ ವರ್ಣಿತವಾಗಿದೆ.



ದೇವತೆಗಳು ರಾಕ್ಷಸರೊಂದಿಗೆ ಹೋರಾಡುವ ಸಂದರ್ಭಗಳಲ್ಲಿ ಗುಣಪಡಿಸಲಾರದ ನೋವು ವ್ಯಾಧಿಗಳಿಗೆ ತುತ್ತಾಗುವುದನ್ನು ಕಂಡು ವೈದ್ಯನಾಗಿ ಚಿಕಿತ್ಸೆ ನೀಡಲು ಧನ್ವಂತರಿ ರೂಪಧಾರಿಯಾಗಿ ವಿಷ್ಣು ಅವತರಿಸಿದನೆಂದು ನಂಬಲಾಗಿದೆ. "ನಮಾಮಿ ಧನ್ವಂತರಿಯಾದಿದೇವಂ".

"ಸುರಾಸುರೈರ್ವಂದಿತ ಪಾದಪದ್ಮಂ ಲೋಕೇಜರಾರುಗ್ಭಯ ಮೃತ್ಯುನಾಶಂ ದಾತಾರಮೀಶಂ ವಿವಧೌಧೀನಾಂ" ಎಂಬ ಶ್ಲೋಕದೊಂದಿಗೆ ಧನ್ವಂತರಿಯನ್ನು ನಿತ್ಯ ಪ್ರಾರ್ಥಿಸಿ ಕಾರ್ಯ ಆರಂಭಿಸಿದರೆ ದಿನವಿಡೀ ಚೈತನ್ಯ ಪೂರ್ಣತೆ ಉಳಿಯುತ್ತದೆ ಎನ್ನಲಾಗಿದೆ. ಧನ್ವಂತರಿ ಸುಪ್ರಭಾತ ಧನ್ವಂತರಿ ಪ್ರಪತ್ತಿ, ಧನ್ವಂತರಿ ಸ್ತುತಿಗಳಲ್ಲಿ ಧನ್ವಂತರಿ. ದೇವರ ವಿಶೇಷತೆಯನ್ನು ಬಣ್ಣಿಸಲಾಗಿದೆ.

ಧನ್ವಂತರಿಯು ದೇವಾನು ದೇವತೆಗಳಿಗೆ ವೈದ್ಯ ಆಗಿದ್ದನೆಂದು ಬಣ್ಣಿಸಲಾಗಿದೆ. ಇಡೀ ವಿಶ್ವಕ್ಕೆ ವೈದ್ಯಕೀಯ ವಿದ್ಯೆಯನ್ನು ಮೊದಲು ತಿಳಿಸಿದ್ದು ಧನ್ವಂತರಿ. ಅಷ್ಟೇ ಅಲ್ಲ, ಇಂದಿನ ಪ್ಲಾಸ್ಟಿಕ್ ಸರ್ಜರಿಯನ್ನು ಆ ಕಾಲದಲ್ಲಿಯೇ ಪರಿಚಯಿಸಿದ್ದ ವಿಶ್ವದ ಮೊದಲ ವೈದ್ಯ ಎಂದೇ ಪ್ರಸಿದ್ಧನಾದ ಆತ ಆಯುರ್ವೇದದ ಪಿತಾಮಹ ಕೂಡ ಹೌದು. ಅನೇಕ ಗಿಡ ಮೂಲಿಕೆಗಳನ್ನು ಪತ್ತೆ ಹಚ್ಚಿ, ಹಲವು ಕಾಯಿಲೆಗಳಿಗೆ ನೈಸರ್ಗಿಕ ಕಷಾಯ,ಗುಳಿಗೆ, ಲೇಹ, ಮುಲಾಮುಗಳನ್ನು ಕೊಟ್ಟ ಖ್ಯಾತಿ ಧನ್ವಂತರಿಗೆ ಅರ್ಪಣೆಯಾಗುತ್ತದೆ. ಅರಿಶಿಣ ಮತ್ತು ಉಪ್ಪಿನಲ್ಲಿರುವ ಗುಣಾತ್ಮಕ ಆಯುರ್ವೇದದ ಅಂಶಗಳನ್ನು ಮೊದಲು ಕಂಡು ಹಿಡಿದದ್ದೂ ಧನ್ವಂತರಿಯೇ.

ಅಂದಿನ ಕಾಲಕ್ಕೆ ಅತಿ ನುರಿತ ವೈದ್ಯನಾಗಿದ್ದ ಧನ್ವಂತರಿ, ತುರ್ತು ಸಂದರ್ಭಗಳಲ್ಲಿ, ಯುದ್ಧದ ಸಮಯದಲ್ಲಿ ಗಾಯಾಳುಗಳಿಗೆ ಚಿಕಿತ್ಸೆ ಕೊಡುತ್ತಿದ್ದ ಎಂದು ಹೇಳಲಾಗುತ್ತದೆ. ಈತ ಅನುಸರಿಸುತ್ತಿದ್ದ ಮಾರ್ಗಗಳು ಅತಿ ಕಠಿಣ ಮತ್ತು ಕಷ್ಟಕರವಾಗಿದ್ದರೂ ಸಂಪೂರ್ಣ ಗುಣಮುಖವಾಗುತ್ತಿದ್ದವು.

ವೈದ್ಯಕೀಯ ಕ್ಷೇತ್ರದಲ್ಲಿನ ಈತನ ಬುದ್ಧಿವಂತಿಕೆ ಮತ್ತು ಸಾಧನೆಗಳ ಮೆಚ್ಚುಗೆಯ ಫಲವಾಗಿ ವಿಕ್ರಮಾದಿತ್ಯನ ಆಸ್ಥಾನದಲ್ಲಿ ಈತನನ್ನು ನವರತ್ನಗಳಲ್ಲಿ ಒಬ್ಬ ಎಂದು ಬಣ್ಣಿಸಲಾಗಿತ್ತು. ಆಯುರ್ವೇದ ಶಸ್ತ್ರಚಿಕಿತ್ಸೆಯ ಪಿತಾಮಹ ಸುಶ್ರುತನಿಗೆ ಧನ್ವಂತರಿ ಹಲವು ವೈದ್ಯಕೀಯ ವಿಚಾರಧಾರೆಗಳನ್ನು, ವಿಧಿವಿಧಾನಗಳನ್ನು ಮತ್ತು ಗುಟ್ಟುಗಳನ್ನು ತಿಳಿಸಿದ್ದ ಎಂದು ಗ್ರಂಥಗಳು ನಮಗೆ ತಿಳಿಸುತ್ತವೆ.

– ಪ್ರತ್ಯಗ್ರ

**ನೀತಿ ಕಥೆ**

# ಮಾಡುವ ಕೆಲಸವನ್ನು ತಕ್ಷಣ ಮಾಡಬೇಕು



- ಡಾ|| ಪ್ರದೀಪ್ ಕುಮಾರ್ ಹೆಬ್ರಿ
9844018457

ಮಹಾಭಾರತದ ಕಥೆಯನ್ನು ಕೇಳದವರು ಯಾರಿದ್ದಾರೆ? ನಮ್ಮೆಲ್ಲರ ಆರಾಧ್ಯ ದೈವ ಶ್ರೀ ಕೃಷ್ಣ ಪರಮಾತ್ಮ ನಮ್ಮಾಪ್ತನಾಗುವುದು ಮಹಾಭಾರತವನ್ನು ಓದಿದಂತೆ. ಪಂಚಪಾಂಡವರಾದ ಧರ್ಮರಾಯ, ಭೀಮಸೇನ, ಅರ್ಜುನ, ನಕುಲ ಸಹದೇವ ಮತ್ತು ಇವರೆಲ್ಲರ ಸಹಧರ್ಮಿಣಿ ದ್ರೌಪದಿ ನಮ್ಮಾಪ್ತ ಬಂಧುಗಳೇ. ಇವರ ಕಥೆಯನ್ನು ಕೇಳಿ ಆನಂದಿಸಿದ್ದೇವೆ, ಸಂಭ್ರಮಿಸಿದ್ದೇವೆ, ದುಃಖಿಸಿದ್ದೇವೆ, ಅವಡುಗಚ್ಚಿದ್ದೇವೆ, ಹಲ್ಲು ಮಸೆದಿದ್ದೇವೆ. ಮಹಾಭಾರತದ ಕರ್ತೃ ವೇದವ್ಯಾಸ ಮಹರ್ಷಿ ಎಂಬುದನ್ನೂ ತಿಳಿದಿದ್ದೇವೆ. ಭಗವದ್ಗೀತೆಯನ್ನು ನಿತ್ಯ ಪಠಣದ ಗ್ರಂಥವಾಗಿಸಿ ಅದರ ಬಹಳಷ್ಟು ವಿಷಯಗಳನ್ನು ಬದುಕಿಗೆ ಅಳವಡಿಸಿಕೊಂಡಿದ್ದೇವೆ. ಶ್ರೀಹರಿಯ ಮಹಿಮೆಗೆ ತಲೆ ಬಾಗಿದ್ದೇವೆ.

**ಮಹಾಭಾರತದಲ್ಲಿನ ಒಂದು ವಿಶೇಷ ಕಥೆಯನ್ನು ಆಲಿಸೋಣ :-**

ಒಮ್ಮೆ ಒಬ್ಬ ಬಡಬ್ರಾಹ್ಮಣ ಧರ್ಮರಾಯನಲ್ಲಿ ದಾನ ಕೇಳಲು ಬಂದ. ಧರ್ಮರಾಯನಲ್ಲಿ," ದೊರೇ ದಯಮಾಡಿ ನನಗೆ ನೂರು ಚಿನ್ನದ ನಾಣ್ಯಗಳನ್ನು ಕೊಡಿಸಿ ಎಂದು ಬೇಡಿದ, ಧರ್ಮರಾಜನಾಗ, " ನಾಳೆ ಬಾ, ಕೊಡಿಸುತ್ತೇನೆ" ಎಂದ! ಆ ಯಾಚಕ ತಲೆಯಲ್ಲಾಡಿಸಿ ಹಿಂದಿರುಗಿದ.

ಇದನ್ನು ಧರ್ಮರಾಜನ ಪಕ್ಕದಲ್ಲೆ ಇದ್ದ ಭೀಮಸೇನ ನೋಡುತ್ತಿದ್ದ ನಕ್ಕ, ಅಣ್ಣನಲ್ಲಿ ಏನನ್ನೂ ಹೇಳದೆ ಸಮೀಪದ ಬಾಗಿಲ ಬಳಿಯಲ್ಲೇ ಇದ್ದ ಹೆಬ್ಬೇರಿಯನ್ನು ಜೋರಾಗಿ ಬಡಿದ . ಅದು ವಿಜಯ ಕಾಲದಲ್ಲಿ ಬಡಿಯುವ ಹೆಬ್ಬೇರಿಯಾಗಿತ್ತು. ಧರ್ಮರಾಜನಿಗೆ ಹೆಬ್ಬೇರಿ ಬಡಿತ ಕೇಳಿಸಿತು. ಅಚ್ಚರಿಗೊಂಡ, ಹೆಬ್ಬೇರಿ ಬಡಿದದ್ದು ಭೀಮಸೇನ ಎಂದರಿತು ಕರೆಸಿ ಕಾರಣ ಕೇಳಿದ.

ಭೀಮನಾಗ, " ಅಣ್ಣ ನನಗೀದಿನ ಬಹುಶ್ರೇಷ್ಠ ಗೆಲುವೊಂದು ಲಭಿಸಿದೆ. ಇಂಥ ವಿಜಯ ಜಗತ್ತಿನಲ್ಲಿ ಈ ತನಕ ಬೇರಾರಿಗೂ ಸಿಕ್ಕಿರಲಿಕ್ಕಿಲ್ಲ. ಇಂದೆನಗೆ ಮೃತ್ಯುವಿನ ಮೇಲೆ ಒಂದು ದಿನದ ಗೆಲುವು ದೊರೆತಿದೆ" ಎಂದು ಬೀಗಿದ. ಧರ್ಮರಾಜನಿಗೆ ಅರ್ಥವಾಗಲಿಲ್ಲ. ಸಿಡುಕುತ್ತ ಭೀಮನಲ್ಲಿ, " ಇದೇನು ಹುಚ್ಚುಚ್ಚಾಗಿ ಆಡುತ್ತಿರುವೆ?ನಮಗಾರಿಗೂ ಅರಿವಿಗೇ ಬಾರದಂತೆ ಯಾವ ಗೆಲುವನ್ನು ಪಡೆದೆ? ಮನುಷ್ಯನು ಮೃತ್ಯವನ್ನು ಗಳಿಗೆ ಕಾಲಕ್ಕೂ ಗೆಲ್ಲಲಾರ! ಅದೆಂದು ಬಂದೀತೆಂಬ ಅರಿವು ಆತನಿಗೆ ಎಂದೂ ಬಾರದು" ಎಂದ.


ಧರ್ಮರಾಯನ ಮಾತಿಗೆ ಭೀಮಸೇನನು ನಗುತ್ತ, " ಅಣ್ಣಾ ! ನೀನಾ ಯಾಚಕನಿಗೆ ಆತ ಬೇಡಿದ್ದನ್ನು ನಾಳೆ ಕೊಡುವೆ. ಬಾ ನಾಳೆ ಎಂದು ಹೇಳಿ ಕಳಿಸಿದೆ. ಅಂದರೆ ನೀನು ನಾಳೆಯವರೆಗೂ ಬದುಕಿರುವುದು ಖಚಿತವಾಯ್ತು ಎಂದಂತಾಯ್ತಲ್ಲವೇ? ಮೃತ್ಯುವಿನ ಮೇಲೆ ಒಂದು ದಿನದ ಗೆಲುವು ಸಾಮಾನ್ಯ ಮಾತೇ? ಇದಕ್ಕಿಂತಲೂ ಪರಮಶ್ರೇಷ್ಠ ಗೆಲುವು ಈ ಜಗತ್ತಿನಲ್ಲಿ ಬೇರಾವುದಿದೆ? ಎಂದನು.

ಧರ್ಮರಾಯನಿಗೆ ಭೀಮಸೇನನ ಮಾತಿನ ಮರ್ಮ ಅರಿವಾಯಿತು. ತನ್ನಲ್ಲೇ ನಾಚಿದನು. ಶ್ರೀಹರಿ ಕೊಟ್ಟದನ್ನು ಕೊಡಲು ನಾನೇಕೆ ಹಿಂಜರಿದೆನೆಂದು ತಳಮಳಗೊಂಡನು. ತಕ್ಷಣ ಹಿಂದಿರುಗಿ ಹೋಗುತ್ತಿದ್ದ ಆ ಯಾಚಕನನ್ನು ಕರೆಸಿದನು. ಆತನಿಗೆ ನೂರು ಚಿನ್ನದ ನಾಣ್ಯಗಳನ್ನು ಆಗಲೇ ಕೊಟ್ಟು ಕಳಿಸಿದನು. ಮನದಲ್ಲೇ ಕೃಷ್ಣಾರ್ಪಣವಾಯಿತೆಂದು ಬೀಗಿದನು.

**ನೀತಿ: ನಾಳೆ ಬರುವುದೆಂಬ ಖಚಿತತೆ ಇಲ್ಲ. ಹಾಗಾಗಿ ಏನು ಮಾಡುವುದಿದ್ದರೂ ಇಂದೇ ಈಗಲೇ ಮಾಡಬೇಕು.**

## ಈ ಗೊಂಬೆಗೆ ಬಣ್ಣವನ್ನು ತುಂಬಿರಿ.......

ಪಕ್ಕದಲ್ಲಿರುವ ಗೊಂಬೆಯನ್ನು ಬಾಕ್ಸ್‌ನಲ್ಲಿ ಬರಿಯೋಣ...





ಈ ಚಿತ್ರದಲ್ಲಿ ಒಟು 7 ವ್ಯತ್ಯಾಸಗಳಿವೆ.

ಮಕ್ಕಳೇ ಇದನ್ನು ಕಂಡು ಹಿಡಿಯಿರಿ ನೋಡೋಣ.



ಆಕಾಶದಲ್ಲಿ ನೀಲಿಬಣ್ಣದ ಮೋಡ, ನೀಲಿಬಣ್ಣದ ಮೋಡ, ಕ್ರ್ಯಾಕರ್ಸ್, ಮರಗಳು, ಪಕ್ಷಿ,ರಂಗೋಲಿ, ಗೋಪುರದ ಸ್ತಂಭ,

## ಈ ಅಕ್ಷರಗಳಲ್ಲಿ ಒಂದು ಗಾದೆ ಇದೆ ಕಂಡು ಹಿಡಿಯಿರಿ ನೋಡೋಣ....

ಳ್ಳಾ ದ ಳ್ಳಾ ರು ಧೆ ಗ

ಗಾ ವೇ ದು ಸು ದ ಸು

తిరుమల తిరుపతి ದೇವಸ್ಥಾನಗಳು

# ಮಕ್ಕಳೇ ಇದು ನಿಮಗಾಗಿ

## 3 ಕ್ವಿಜ್

### ಸೂಚನೆಗಳು

1. ಈ ಕ್ವಿಜ್ 10-15 ವರ್ಷ ವಯಸ್ಸಿನ ಮಕ್ಕಳು ಹಿಂದೂವಾಗಿರಬೇಕು.
2. ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳುವ ಮಕ್ಕಳ ತಂದೆ ತಾಯಿ ತಪ್ಪದೇ ಸಪ್ತಗಿರಿ ಮಾಸ ಪತ್ರಿಕೆಯ ಚಂದಾ ದಾರರಾಗಿರಬೇಕು.
3. ಕ್ವಿಜ್ ಪ್ರಶ್ನಾಪತ್ರಿಕೆಯಲ್ಲಿ ತಪ್ಪದೇ ತಮ್ಮ ಚಂದಾ ಸಂಖ್ಯೆ, ಹೆಸರು, ವಿಳಾಸ, ಪಿನ್‌ಕೋಡ್,ಫೋನ್ ನಂಬರ್ ಸ್ಪಷ್ಟವಾಗಿ ಬರೆಯಬೇಕು.
4. ಕ್ವಿಜ್ ಉತ್ತರಗಳನ್ನು ಪ್ರಶ್ನೆಯ ಕೆಳಗೆ ನಿರ್ದೇಶಿಸಿದ ಸ್ಥಳದಲ್ಲಿಯೇ ಬರೆದು ಕಳುಹಿಸಬೇಕು.
5. ಕ್ವಿಜ್ ಉತ್ತರದ ಜೆರಾಕ್ಸ್ ಅನ್ನು ತೆಗೆದುಕೊಂಡು ಕಳಿಹಿಸಿದವರು ಖಚಿತವಾಗಿ ಚಂದಾನಂಬರ್‌ನ್ನು ಕಳುಹಿಸಬೇಕು. ಒಬ್ಬ ಚಂದಾದಾರರು ಒಂದು ಉತ್ತರವನ್ನು ಮಾತ್ರವೇ ಕಳುಹಿಸತಕ್ಕದ್ದು.
6. ಉತ್ತರ ಬರೆಯುವಾಗ ಅಳಿಸುವುದು, ತಿದ್ದುವುದು ಮಾಡಬಾರದು.
7. ಉತ್ತರಗಳನ್ನು ನಮಗೆ ಕಳುಹಿಸುವ ಕೊನೆಯ ದಿನಾಂಕ 25.10.2022
8. ಈ ಕ್ವಿಜ್‌ನಲ್ಲಿ ಎಲ್ಲಾ ಉತ್ತರಗಳನ್ನು ಸರಿಯಾಗಿ ಬರೆದ ಮೂರು ಮಕ್ಕಳನ್ನು ಮಾತ್ರವೇ ವಿಜೇತರಾಗಿ ಲಕ್ಕಿ ಡಿಫ್ ಮುಖಾಂತರ ಆಯ್ಕೆ ಮಾಡಲಾಗುತ್ತದೆ.
9. ವಿಜೇತರಾದ ಮಕ್ಕಳ ಹೆಸರನ್ನು ಮುಂದಿನ ತಿಂಗಳ ಸಪ್ತಗಿರಿ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದ
10. ತಿ.ತಿ.ದೇ. ಪ್ರಧಾನ ಸಂಪಾದಕರ ಕಾರ್ಯಾಲಯದಲ್ಲಿ ಕೆಲಸ ಮಾಡುವ ಉದ್ಯೋಗಿಗಳ ಮಕ್ಕಳು ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳಬಾರದು.
11. ಕ್ವಿಜ್‌ಗೆ ಸಂಬಂಧಿಸಿದ ಯಾವ ಸಮಾಚಾರವನ್ನು ಫೋನ್ ಮುಖಾಂತರ ನೀಡಲಾಗುವುದಿಲ್ಲ.

**ನಿಮ್ಮ ಉತ್ತರಗಳನ್ನು ಕಳುಹಿಸಬೇಕಾದ ವಿಳಾಸ**

ಪ್ರಧಾನ ಸಂಪಾದಕರು
ಸಪ್ತಗಿರಿ ಮಾಸಪ್ರತಿಕೆ
ತಿ.ತಿ.ದೇ. ಪ್ರೆಸ್ ಕಾಂಪೌಂಡ್
ಕೆ.ಟಿ. ರಸ್ತೆ.
ತಿರುಪತಿ : 517 507
ಆಂಧ್ರ ಪ್ರದೇಶ್

## ರಸಪ್ರಶ್ನೆಗಳು

| | ಉತ್ತರಗಳು |
|---|---|
| 1. ದುರ್ಗೆಯು ಯಾವ ರಾಕ್ಷಸನನ್ನು ಸಂಹಾರ ಮಾಡಿದಳು? | ........................ |
| 2. ಮೈಸೂರು ಅರಸರ ಮನೆದೇವತೆ ಯಾರು? | ........................ |
| 3. ಸೂರ್ಯನು ಕನ್ಯಾರಾಶಿಯಿಂದ ತುಲಾರಾಶಿಗೆ ಪ್ರವೇಶಿಸುವ ಕಾಲವನ್ನು ಏನೆಂದು ಕರೆಯುತ್ತಾರೆ? | ........................ |
| 4. ಕಾರ್ತಿಕ ಮಾಸದಲ್ಲಿ ಶುಕ್ಲ ಪಕ್ಷದ 12 ನೇ ದಿನ ದ್ವಾದಶಿ ಆ ದಿನ ಯಾವ ಹಬ್ಬವನ್ನು ಆಚರಿಸುತ್ತಾರೆ? | ........................ |
| 5. ಶ್ರೀ ವಾದೀಂದ್ರತೀರ್ಥರು ಯಾವ ಕಾವ್ಯವನ್ನು ರಚಿಸಿದರು? | ........................ |
| 6. ಮೂಕನಹಳ್ಳಿಯ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿಯ ಬ್ರಹ್ಮ ರಥೋತ್ಸವವು ಪ್ರತಿವರ್ಷ ಯಾವ ಮಾಸದಲ್ಲಿ ನಡೆಯುತ್ತದೆ? | ........................ |
| 7. ನವರಾತ್ರಿಯಲ್ಲಿ ಮೂಲನಕ್ಷತ್ರ ದಿನ ಯಾವ ಅಲಂಕಾರದಲ್ಲಿ ಅಮ್ಮನವರು ಇರುತ್ತಾರೆ? | ........................ |
| 8. ನವರಾತ್ರಿಯ ವಿಜಯದಶಮಿಯಂದು ಯಾವ ಅಲಂಕಾರದಲ್ಲಿ ಅಮ್ಮನವರನ್ನು ಪೂಜಿಸುತ್ತಾರೆ? | ........................ |
| 9. ಆಯುರ್ವೇದದ ದೇವರು ಯಾರು ? | ........................ |
| 10. ಪಂಚಪಾಂಡವರ ಪತ್ನಿಯ ಹೆಸರು ಏನು? | ........................ |
| 11. ದೀಪಾವಳಿ ಹಬ್ಬದ ದಿನ ಯಾವ ದೇವರನ್ನು ಪೂಜಿಸುತ್ತಾರೆ? | ........................ |
| 12. ಫಲ್ಗುಣನ ಇನ್ನೊಂದು ಹೆಸರು ಏನು? | ........................ |
| 13. ಪಾಂಡವರು ಆಯುಧಗಳನ್ನು ಯಾವ ಮರದ ಮೇಲೆ ಇಟ್ಟರು? | ........................ |
| 14. ತಿರುಪ್ಪೇರ್ ನಗರ್ ನಲ್ಲಿರುವ ದೇವರ ಹೆಸರೇನು? | ........................ |
| 15. ಶ್ರೀ ಕೃಷ್ಣನು ಯಾರನ್ನು ಸಂಹರಿಸಿದನು? | ........................ |

| | |
|---|---|
| ಹೆಸರು : | ವಿಳಾಸ : |
| ಚಂದಾ ಸಂಖ್ಯೆ: ........................ | |
| ತಂದೆಯ ಹೆಸರು : | |
| ತಾಯಿಯ ಹೆಸರು : | ದೂರವಾಣಿ ಸಂಖ್ಯೆ : |



# ಸ್ತೋತ್ರವನ್ನು ಕಲಿಯೋಣ

## ಭಾವರ್ಥ ಸಹಿತ ಶ್ರೀಭಾರತೀಶ
## ಕರಾವಲಂಬನ ಸ್ತೋತ್ರ ಶ್ರೀ ಗುರುಭ್ಯೋ ನಮಃ

- ರಚನೆ : ವಿದ್ವಾನ್ ಆರಣಿ ವಾಸುದೇವಾಚಾರ್ಯ

ಶೇಷಾದಿ ದೇವ ಭವಪಾಶ ನಿವಾರಕ

ಶ್ರೀ ವಿಷ್ಣ್ವಂಘ್ರಿ ಭಕ್ತಿ ವದಾನ್ಯ ಶೀಲಾ !

ಶ್ರೀ ವಿಷ್ಣು ವೈರಿ ಭ್ರಮಣಪ್ರದ ಭ್ರೂವಿಲಾಸ

ಶ್ರೀ ಭಾರತೀಶ ಮಮ ದೇಹಿ ಕರಾವಲಂಬಮ್ ॥4॥



ಶೇಷಾದಿ ದೇವತೆಗಳಿಂದ ಮೊದಲ್ಗೊಂಡು ಎಲ್ಲರ ಭವಪಾಶವನ್ನು ನಿವಾರಿಸುವಂಥ, ಶ್ರೀ ವಿಷ್ಣುವಿನ ಪಾದಕಮಲಗಳಲ್ಲಿ ಮಾಡುವ ಭಕ್ತಿಯನ್ನೇ ಶೀಲವಾಗಿ ಉಳ್ಳ, ಕೇವಲ ಹುಬ್ಬಿನ ಸನ್ನೆಯಲ್ಲೇ ವಿಷ್ಣು ವೈರಿಗಳಿಗೆ ತಾಪ ಮತ್ತು ಶ್ರಮಪ್ರದರಾದ ಶ್ರೀ ಭಾರತೀಪತಿಯಾದ ವಾಯುದೇವರು ನಮ್ಮನ್ನು ಕಾಪಾಡಲಿ.

ಇದರಲ್ಲಿ ಹೋಲಿಕೆ ಇಲ್ಲದ ಚಿತ್ರ ಯಾವುದು



ದೀಪಾವಳಿ, ವಿಜಯದಶಮಿ, ನವದುರ್ಗೆ, ನವರಾತ್ರಿ, ಇವುಗಳಿಗೆ ಸಂಬಂಧವಿಲ್ಲದ ಚಿತ್ರವನ್ನು ಕಂಡು ಹಿಡಿಯಿರಿ.

ಚಿತ್ರಕಥೆ

# ಬಂದವನು ಫಲ್ಗುಣನೇ!


ಕಥೆ : ತೆಲುಗು ಮೂಲ : ಡಾ॥ ಕೆ. ರವಿಚಂದ್ರನ್

ಅನುವಾದ : ಆರ್.ಕೆ.

ಚಿತ್ರಗಳು : ಬಿ. ಶಿವಾಜಿ






ರಾಜಕುಮಾರ! ಹೋಗಲಿ ಬಿಡು ನಾನು ಯುದ್ಧ ಮಾಡಿ ಗೋವುಗಳನ್ನು ಗೆದ್ದು ತರುವೆ ನೀನು ರಥವನ್ನು ನಡೆಸು
ಉತ್ತರಾ! ಆ ಬನ್ನಿ ಮರದ ಮೇಲೆ ಕಾಣಿಸುತ್ತಿರುವ ಮೂಟೆಯನ್ನು ಕೆಳಗಿಳಿಸು ಅದರಲ್ಲಿ ಅರ್ಜುನನ ಗಾಂಡೀವವಿದೆ. ಅದನ್ನು ಹಿಡಿಯದೇ ನಾವು ಶತ್ರುಗಳನ್ನು ಎದುರಿಸಲಾರೆವು.
ಆಚಾರ್ಯ! ಅದು ಮೃತ ದೇಹದ ಶವ ಮೂಟೆ.
ರಾಜುಕುಮಾರ! ಅವು ಪಾಂಡವರ ಆಯುಧಗಳು ಪರರ ಕಣ್ಣಿಗೆ ಬೀಳದಂತೆ ಶವಾಕೃತಿಯನ್ನು ಕಲ್ಪಿಸಿದ್ದಾರೆ. ಅದರಲ್ಲಿನ ಗಾಂಡೀವವನ್ನು ಹೊರತೆಗೆ
ಉತ್ತರನು ಆ ಮೂಟೆಯನ್ನು ಬಿಚ್ಚಿದ್ದಾನೆ. ಅದರಲ್ಲಿಯ ಆಯುಧಗಳು ಕಾಂತಿಯುತವಾಗಿ ಹೊಳೆಯುತ್ತಿವೆ. ಬಂಗಾರದ ಪರ್ವತದಂತೆ ಹೊಳೆಯುತ್ತಿರುವ ಧನಸ್ಸನ್ನು ಕಂಡು ಉತ್ತರನ್ನು ಹೌಹಾರಿದ್ದಾನೆ. ಅರ್ಜುನನು ತಮ್ಮ ಹೆಸರಿನ ಹಿಂದಿರುವ ಕಥೆಗಳನ್ನು ಹೇಳಿದ ನಂತರ ಬೃಹನ್ನಳೆಯು ಅರ್ಜುನನೇ ಎಂದು ಗ್ರಹಿಸಿದ್ದಾನೆ, ಉತ್ತರನು.
ದೇವದತ್ತನನ್ನು, ಗಾಂಡೀವವನ್ನೂ ಅರ್ಜುನನು ಧರಿಸಿದ್ದಾನೆ. ಇಬ್ಬರೂ ಯುದ್ಧರಂಗದೆಡೆಗೆ ನಡೆದಿದ್ದಾರೆ.
ಸುಯೋಧನಾ! ಅಲ್ಲಿ ಬರುತ್ತಿರುವವನು ಖಂಡಿತವಾಗಿ ಫಲ್ಗುಣನೇ ....
ಪಿತಾಮಹ.... ಆತನು ಅರ್ಜುನನೇ ಆದರೆ ಪಾಂಡವರ ಸೋಲು ಮತ್ತೆ ಹನ್ನೆರಡು ವರ್ಷ ವನವಾಸ ತಪ್ಪುವುದಿಲ್ಲವಲ್ಲಾ
ಗಾಂಡೀವ ತನ್ನ ನಿಜರೂಪದಲ್ಲಿ ನಮ್ಮ ನಡುವೆ ಬಂದಿದ್ದಾನೆಂದರೆ ಸ್ವಲ್ಪ ಸಂಯಮದಿಂದ ಆಲೋಚಿಸಬೇಕು. ನನ್ನ ಲೆಕ್ಕದ ಪ್ರಕಾರ ಈ ವಿಜಯದಶಮಿಗೆ ಪಾಂಡವರ ಅರಣ್ಯ, ಅಜ್ಞಾತ ವಾಸಗಳು ನಿರ್ವಿಘ್ನವಾಗಿ ಕೊನೆಗೊಂಡಿವೆ. ಆದ್ದರಿಂದ ಬಂದವನು ಫಲ್ಗುಣನೇ, ಆತನೊಡನೆ ಗೆಲುವು ಅಸಾಧ್ಯವೇ.
ಅರ್ಜುನನು ತನ್ನ ವೀರ್ಯ ಪ್ರದರ್ಶನದಿಂದ ಕೌರವ ವೀರರನ್ನು ಮಟ್ಟ ಹಾಕಿ ಗೋ ಗಣಗಳನ್ನು ಕಾಪಾಡಿದ್ದಾನೆ. ವಿಜಯದಶಮಿ ದಿನ ಈ ಕಥೆಯನ್ನು ಕೇಳುವವರಿಗೆ ವಿಜಯವು ಲಭಿಸುತ್ತದೆ.
ಶುಭಂ

# ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ



# ಸಪ್ತಗಿರಿ
(ಆಧ್ಯಾತ್ಮಿಕ ಮಾಸಪತ್ರಿಕೆ)

## ಚಂದಾ ನಮೂನೆ ಪತ್ರ

ಹೆಸರು ಮತ್ತು ವಿಳಾಸ :
(ಬಿಡಿಬಿಡಿ ಅಕ್ಷರಗಳಲ್ಲಿ ಅರ್ಥವಾಗುವಂತೆ ಇಂಗ್ಲೀಷಿನಲ್ಲಿ ಬರೆಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ)

ಬೇಕಾಗುವ ಭಾಷೆ : ☐ ಕನ್ನಡ ☐ ತೆಲುಗು ☐ ಹಿಂದೀ ☐ ತಮಿಳು ☐ ಇಂಗ್ಲೀಷು ☐ ಸಂಸ್ಕೃತ

ವಾರ್ಷಿಕ /ಆಜೀವಚಂದಾ : ☐ ರೂ.240/- ☐ ರೂ.2,400/-( 12 ವರ್ಷ)

ಚಂದಾ ನವೀಕರಣ :

(ಅ) ಚಂದಾ ನಂಬರು :

(ಆ) ಭಾಷೆ :

ಸಲ್ಲಿಸಿದ ಹಣ :

ಡಿ. ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./

ಅಟ್‌ಪರ್ ಚೆಕ್ಕು ಮಾತ್ರವೇ :

ಸ್ಥಳ :

ದಿನಾಂಕ: ಚಂದಾದಾರರ ಸಹಿ

ಸಪ್ತಗಿರಿ ವಾರ್ಷಿಕ ಚಂದಾ ರೂ.240/-, ಆಜೀವ ಚಂದಾ (12 ವರ್ಷ) ರೂ.2,400/- ಗಳು ಡಿ.ಡಿ. ಸಂಖ್ಯೆ/ ಈ.ಎಂ.ಓ/ಐ.ಪಿ.ಓ./ ಅಟ್‌ಪರ್ ಚೆಕ್ಕು ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ, ತಿ.ತಿ.ದೇ. ತಿರುಪತಿ. ಅವರ ಹೆಸರಿನಲ್ಲಿ ತೆಗೆಯ ಬೇಕು.

ಸಪ್ತಗಿರಿ ಚಂದಾದಾರರಾಗಿ ಸೇರ ಬಯಸುವವರು / ತಮ್ಮ ಚಂದಾ ನವೀಕರಿಸುವವರು ಈ ಕೂಪನ್‌ನಲ್ಲಿ ಅಥವಾ ಬಿಳಿಹಾಳೆಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು.

ಎಂ.ಓ. ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳಿಸಿ.

ನಮ್ಮ ವಿಳಾಸ - "ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ ಪ್ರೆಸ್ ಕಾಂಪೌಂಡ್, ಕೆ.ಟಿ.ರೋಡ್ಡು ತಿರುಪತಿ - 517 507".
ಸಪ್ತಗಿರಿ ಚಂದಾ ವಿವರಣೆಗಾಗಿ ಫೋನ್ ನಂಬರ್: 0877-2264359, 0877-2264543

ತಿರುಮಲೆ ತಿರುಪತಿ ದೇವಸ್ಥಾನಗಳು

## ಟೋಲ್ ಫ್ರಿ ನಂಬರ್

ಸ್ವಾಮಿಯ ದರ್ಶನಾರ್ಥ ತಿರುಮಲೆಗೆ ಬರುವ ಭಕ್ತರ ಸೌಕರ್ಯಾರ್ಥಕ್ಕಾಗಿ ತಿರುಮಲೆ ತಿರುಪತಿ ದೇವಸ್ಥಾನದವರು **ಟೋಲ್ ಫ್ರಿ ನಂಬರ್** ಅನ್ನು ಏರ್ಪಡಿಸಿದ್ದಾರೆ.

ಯಾತ್ರಿಕರು, ಭಕ್ತರು ದೇವಸ್ಥಾನಕ್ಕೆ ಸಂಬಂಧಿಸಿದ ಸೂಚನೆ /ದೂರುಗಳನ್ನು ಮತ್ತು ಇತರ ಸಮಾಚಾರಕ್ಕಾಗಿ ಈ ನಂಬರನ್ನು ಸಂಪರ್ಕಿಸಬಹುದು.

**ತಿರುಮಲೆ ತಿರುಪತಿ ದೇವಸ್ಥಾನವು ಯಾತ್ರಿಕರಿಗೆ ಮತ್ತಷ್ಟು ಸೇವೆಯನ್ನು ನೀಡಲು ನಿಮ್ಮ ಸೂಚನೆಗಳನ್ನು ನೀಡಿರಿ.**

**ಟೋಲ್ ಫ್ರಿ ನಂಬರ್**

**18004254141**

0877-2233333,
0877-2277777

Printed by Sri P. Ramaraju, M.A., and Published by Dr. K. Radha Ramana, M.A., M.Phil., Ph.D., on behalf of Tirumala Tirupati Devasthanams and Printed and Published at Tirumala Tirupati Devasthanams Press, K.T.Road, Tirupati - 517 507.
Editor : Dr. V. G. Chokkalingam, M.A., Ph.D.

**19-08-2022 ರಂದು ತಿ.ತಿ.ದೇ., ಗೋಸಂರಕ್ಷಣಾ ಶಾಲೆಯಲ್ಲಿ, ಶ್ರೀ ವೆಂಕಟೇಶ್ವರ ಸಪ್ತಗೋಪ್ರದಕ್ಷಿಣಾ ಮಂದಿರದಲ್ಲಿ ವೈಭವವಾಗಿ ನಿರ್ವಹಿಸಿದ ಗೋಪೂಜಾ ಮಹೋತ್ಸವಗಳು, ಗೋಕುಲಾಷ್ಟಮಿ ಸಂದರ್ಭದ ದೃಶ್ಯಗಳು. ಈ ಕಾರ್ಯಕ್ರಮದಲ್ಲಿ ತಿ.ತಿ.ದೇ., ಆಡಳಿತ ಮಂಡಳಿ ಅಧ್ಯಕ್ಷರು ಶ್ರೀ ವೈ.ವಿ. ಸುಬ್ಬಾರೆಡ್ಡಿ, ತಿ.ತಿ.ದೇ., ಆಡಳಿತ ಮಂಡಳಿ ಸದಸ್ಯರು ಶ್ರೀ ಪಿ. ಅಶೋಕಕುಮಾರ್, ಶ್ರೀ ಎಂ. ರಾಮುಲು, ಚೆನ್ನೈ ಸ್ಥಾನಿಕ ಸಲಹಾಮಂಡಳಿ ಅಧ್ಯಕ್ಷರು ಶ್ರೀ ಶೇಖರ್‌ರೆಡ್ಡಿ, ಎಸ್. ವಿ. ಗೋಸಂರಕ್ಷಣಾ ಕಮಿಟಿ ಸದಸ್ಯರು ಶ್ರೀ ರಾಮ್‌ಸುನಿಲ್ ರೆಡ್ಡಿ, ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿಗಳು ಶ್ರೀ ವಿ. ವೀರಬ್ರಹ್ಮ, ಐ.ಎ.ಎಸ್., ಮತ್ತು ಶ್ರೀಮತಿ ಎಸ್. ಭಾರ್ಗವಿ, ಐ.ಎ.ಎಸ್., ಇನ್ನಿತರರು ಪಾಲ್ಗೊಂಡರು**

















SAPTHAGIRI (KANNADA) SPIRITUAL ILLUSTRATED MONTHLY Published by Tirumala Tirupati Devasthanams
Printing on 25-09-2022 and Posting at Tirupati RMS.Regd. with the Registrar of Newspapers for India under
RNI. No. APKAN/2021/80589. Postal Regd.No.TRP/156/2021-2023 "Licenced toPost Without Prepayment
No. PMGK/RNP/WPP-04(6)/2021-2023" Posting on 20th of Every Month

